ಸಂಪುಟ: ೦೬/ ಸಂಚಿಕೆ: ೨೮೯/ಶುಕ್ರವಾರ ದಿನಾಂಕ : ೧೭-೦೧-೨೦೨೫/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 06/ ISSUE : 289/ FRIDAY Date : 17-01-2025/ RNI No. KARKAN/2019/77640/ Postal Reg No. PMG/KA/NK/BM/135/21-24 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

## ಜಾತಿಗಣತಿ ವರದಿ ಬಗ್ಗೆ ಮಹತ್ವದ ತೀರ್ಮಾನ ಕೈಗೊಂಡ ಸಚಿವ ಸಂಪುಟ



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಗುರುವಾರದಂದು ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆ ಅಂತ್ಯವಾಗಿದ್ದು, ಈ ಸಭೆಯಲ್ಲಿ ಬಹುನಿರೀಕ್ಷಿತ ಜಾತಿ ಗಣತಿ ವರದಿ ಬಗ್ಗೆ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ.

ಜಾತಿಗಣತಿ ವರದಿ ಮುಚ್ಚಿದ ಲಕೋಟೆಯಲ್ಲಿರುವುದನ್ನು ತೆರೆಯಲು ತೀರ್ಮಾನಸಲಾಗಿದೆ. ಮುಂದಿನ ಸಚಿವ ಸಂಪುಟದ ಸಭೆಯಲ್ಲಿ ಮುಂದಿಡಲು ನಿರ್ಧರಿಸಲಾಗಿದೆ. ಆ ಮೂಲಕ ಕರ್ನಾಟಕವೇ ಎದುರು ನೋಡುತ್ತಿದ್ದ ಜಾತಿಗಣತಿ ವರದಿ ಬಗ್ಗೆ ಸಿದ್ದರಾಮಯ್ಯ ಸರ್ಕಾರದ ಮಹತ್ವದ ಹೆಜ್ಜೆ ಇಟ್ಟಿದೆ.

ಇಂದಿನ ಸಚಿವ ಸಂಪುಟದಲ್ಲೇ ಜಾ-ರಿಗಣತಿ ವರದಿ ಮಂಡನೆಯಾಗಲಿದೆ ಎನ್ನುವ ಚರ್ಚೆಗಳು ನಡೆದಿದ್ದವು. ಆದ್ರೆ, ಈ ಸಚಿವ ಸಂಪುಟದಲ್ಲಿ ಜಾತಿ ಗಣತಿ ವರದಿ ಬಗ್ಗೆ ಚರ್ಚೆ ಮಾಡುವುದಿಲ್ಲ. ಬದಲಾಗಿ ಮುಂದಿನ ಸಚಿವ ಸಂಪುಟದ ಮುಂದೆ ಇಡಲಾಗುವುದು ಎಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದರು. ಅದರಂತೆ ಇಂದಿನ ಸಚಿವ ಸಂಪುಟದಲ್ಲಿ ಈ ಬಗ್ಗೆ ಮಹತ್ವದ ತೀರ್ಮಾನ ಕೈಗೊಂಡಿದೆ.

ಮಂಡ್ಯದಲ್ಲಿ ಕೃಷಿ ತೋಟಗಾ-ರಿಕೆ ಇಂಟಿಗ್ರೇಟೆಡ್ ವಿವಿ ಸ್ಥಾಪನೆ, ಕೃಷಿ ತೋಟಗಾರಿಕೆ ಇಂಟಿಗ್ರೇಟೆಡ್ ವಿವಿ ಸ್ಥಾಪನೆ, 5ನೇ ರಾಜ್ಯ ಹಣಕಾಸು ಆಯೋಗದ ಅವಧಿ ವಿಸ್ತರಣೆ ಸೇರಿದಂತೆ 35 ವಿಷಯಗಳನ್ನು ಚರ್ಚೆ ಮಾಡಲಾಗಿದೆ ಎಂದು ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಹೇಳಿದ್ದಾರೆ.

ಸಚಿವ ಸಂಪುಟ ಸಭೆಯ ಪ್ರಮುಖ ಅಂಶಗಳು ಹೀಗಿವೆ ಜಾತಿಗಣತಿ ವರದಿ ಮುಚ್ಚಿದ ಲಕೋಟೆಯಲ್ಲಿರುವುದನ್ನು ತೆರೆಯಲು ಮುಂದಿನ ಕ್ಯಾಬಿನೆಟ್‌ಗೆ ತರಲು ನಿರ್ಧಾರ. ರಾಜಕೀಯ ಕಾರಣ ಏನೆಂಬುದು ಇಲ್ಲ. ಮುಂದೆ ಹಾಕುವುದು ಸೂಕ್ತ ಎನಿಸಿದ್ದರಿಂದ ಮುಂದಿನ ಕ್ಯಾಬಿನೆಟ್‌ಗೆ ತರುತ್ತೇವೆ. ಟ್ರೆಷರಿಯಲ್ಲಿ ಇರುವ ಈ ವರದಿಯನ್ನು ಕ್ಯಾಬಿನೆಟ್‌ಗೆ ಮುಂಚಿತವಾಗಿ ತೆರೆಯಬೇಕು. ರೇಷನ್ ಕಾರ್ಡ್ ಇರುವವರಿಗೆ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತ ಎಂಆರ್‌ಐ ಸ್ಕ್ಯಾನ್, ಸಿಟಿ ಸ್ಕ್ಯಾನ್ ಬ್ರ್ಯಾಂಡ್ ಬೆಂಗಳೂರು ಯೋಜನೆಯಡಿ ಃಃಒಕ ವ್ಯಾಪ್ತಿಯ ಆರೋಗ್ಯ ಕೇಂದ್ರ ಮೇಲ್ದರ್ಜೆಗೆ ಏರಿಸಲು ಅಸ್ತು. 413 ಕೋಟಿ ರೂ. ಅನುಮೋದಿಸಲಾಗಿದೆ. ಮಹಾನಗರ ಪಾಲಿಕೆಯ ಒಟ್ಟು 13 ಹೆರಿಗೆ ಆಸ್ಪತ್ರೆಗಳು ಮೇಲ್ದರ್ಜೆಗೆ ಏರಿಸುವುದು.10 ಮಹಾನಗರ ಪಾಲಿಕೆ, 24 ನಗರಪಾಲಿಕೆಗಳಲ್ಲಿ ಒಂದು ಚಿತಾಗಾರಕ್ಕೆ 4 ಕೋಟಿ ರೂ. ವೆಚ್ಚದಂತೆ 126 ಕೋಟಿ ರೂ ವೆಚ್ಚದಲ್ಲಿ ಚಿತಾಗಾರ ನಿರ್ಮಾಣಕ್ಕೆ ನಿರ್ಧಾರ.

10 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ಅನುಮೋದನೆ

ಡಿಜಿ ಕಂದಾಯ ಯೋಜನೆಯ ಅನುದಾನದಿಂದ ಡಿಜಿ ಸೇವೆಯನ್ನು ನೀಡಲು ಕ್ರೋಮ್ ಬುಕ್ ಅಥವಾ ಲ್ಯಾಪ ಟಾಪ್ ಖರೀದಿಗೆ 20 ಕೋಟಿ ರೂ ಅನುಮೋದನೆ. ಆರ್ಥಿಕ ಇಲಾಖೆ ಅಧಿಕಾ-ರಿಗಳು, ನೌಕರರ ವರ್ಗಾವಣೆಗೆ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲು ಅನುಮೋದನೆ.

13.30 ಕೋಟಿ ರೂ. ವೆಚ್ಚದಲ್ಲಿ ಆಶಾಕಿರಣ ಯೋಜನೆ ಜಾರಿಗೆ ಅಸ್ತು. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ನೇಮಕಕ್ಕೆ ನಿರ್ಧಾರ. ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ ಆವರಣದಲ್ಲಿ ಇರುವ 450 ಬೆಡ್ ಉಳ್ಳ ಆಸ್ಪತ್ರೆಗೆ ಅನುಮೋದನೆ.

ಅಸ್ತಿತ್ವದಲ್ಲಿರುವ ಅಂಗ ಕಸಿ ಜೀವ ಸಾರ್ಥಕತೆ ಯೋಜನೆಗೆ ಶ್ವಾಸಕೋಶ ಹೃದಯ ಮತ್ತು ಮೂಳೆ ಮಜ್ಜೆ ಕಸಿಯನ್ನು ಸೇರಿಸಿ ಯೋಜನೆ ವಿಸ್ತರಣೆಗೆ ಅನುಮೋದನೆ. ಎಂಟಿ ಅಧೀನದಲ್ಲಿ ಇರುವ ಅರಣ್ಯ ಭೂಮಿ ಹಿಂಪಡೆಯುವ ಬಗ್ಗೆ ಚರ್ಚೆ. ಸುಪ್ರಿಂ ಕೋರ್ಟ್ ನಲ್ಲಿರುವ ಮಧ್ಯಂತರ ಅರ್ಜಿ ಹಿಂಪಡೆಯಬೇಕು ಎಂದು ಕ್ಯಾಬಿನೆಟ್‌ನಲ್ಲಿ ನಿರ್ಣಯಿಸಲಾಗಿದೆ. ಮನ್ರೇಗಾ ಯೋಜನೆಯಡಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗೆ 8 ಕೋಟಿ ರೂ. ವೆಚ್ಚದಲ್ಲಿ ಮೆಡಿಕಲ್ ಇನ್ಶೂರೆನ್ಸ್ ಒದಗಿಸಲು ಅನುಮೋದನೆ.

## 8ನೇ ವೇತನ ಆಯೋಗ ಸ್ಥಾಪನೆಗೆ ಕೇಂದ್ರ ಸಂಪುಟ ಅಸ್ತು



ನವದೆಹಲಿ: ಕೇಂದ್ರ ಸರ್ಕಾರ ವೇತನ ಆಯೋಗ ವ್ಯವಸ್ಥೆಗೆ ತಿಲಾಂಜಲಿ ಹಾಡಲಿದೆ. ವೇತನ ಪರಿಷ್ಕರಣೆಗೆ ಹೊಸ ವ್ಯವಸ್ಥೆ ರೂಪಿಸಲಿದೆ ಎಂದು ದಟ್ಟವಾಗಿ ಹಬ್ಬಿದ್ದ ಸುದ್ದಿಗೆ ತೆರೆ ಬಿದ್ದಿದೆ. 8ನೇ ವೇತನ ಆಯೋಗ ರಚನೆಗೆ ಕೇಂದ್ರ ಸಂಪುಟ ಇಂದು ಗುರುವಾರ ಅಸ್ತು ನೀಡಿದೆ. ಈ ಮಾಹಿತಿಯನ್ನು ಕೇಂದ್ರ ಸಚಿವ ಡಾ. ಎ ವೈಷ್ಣವ್ ಅವರು ಮಾಧ್ಯಮಗಳಿಗೆ ತಿಳಿಸಿದ್ದಾರೆ. ಕೇಂದ್ರ ಸರ್ಕಾರಿ ಉದ್ಯೋಗಿಗಳ ವಿವಿಧ ಸಂಘಟನೆಗಳು ಮಾಡುತ್ತಾ ಬಂದಿದ್ದ ಒತ್ತಾಯಗಳಿಗೆ ಸರ್ಕಾರ ಬಗ್ಗಿದೆ.

ಪ್ರಸಕ್ತ ಚಾಲ್ತಿಯಲ್ಲಿರುವ 7ನೇ ವೇತನ ಆಯೋಗದ ಶಿಫಾರಸುಗಳು 2025ರ ಡಿಸೆಂಬರ್ 31ರವರೆಗೂ ಇರುತ್ತದೆ. ಪ್ರತೀ ವೇತನ ಆಯೋಗದ ಅವಧಿ 10 ವರ್ಷಗಳವರೆಗೆ ಇರುತ್ತದೆ. ಇನ್ನೊಂದು ವರ್ಷದೊಳಗೆ 8ನೆ ವೇತನ ಆಯೋಗ ರಚನೆಯಾಗಿ ಅದರ ಶಿಫಾರಸುಗಳು ಸಿದ್ಧವಿರಬೇಕು. ಒಂದೆರಡು ವರ್ಷ ಹಿಂದೆಯೇ ಸರ್ಕಾರ ವೇತನ ಆಯೋಗ ರಚನೆ ಮಾಡಬೇಕಿತ್ತು ಎಂಬ ವಾದವಿದೆ. ಆದರೆ, ಸರ್ಕಾರವು ವೇತನ ಆಯೋಗದ ಅವಧಿ ಮಿತಿಗೆ ಒಳಪಡುವ ಅಗತ್ಯ ಇಲ್ಲ ಎಂದು ಹೇಳುತ್ತಲೇ ಬಂದಿತ್ತು. ಇದೀಗ ಆಯೋಗ ಸ್ಥಾಪನೆಗೆ ಸರ್ಕಾರ ಮುಂದಾಗಿರುವುದು ಗಮನಾರ್ಹ ಸಂಗತಿ ಎನಿಸಿದೆ.

ಬಜೆಟ್‌ಗೆ ಮುನ್ನ ಈ ಬೆಳವಣಿಗೆ ನಡೆದಿದೆ. ಆದರೆ, ಯಾವಾಗ ಈ ಆಯೋಗ ರಚನೆ ಆಗುತ್ತದೆ ಎಂಬುದು ನಿರ್ಧಾರವಾಗಿಲ್ಲ. ಹೊಸ ಆಯೋಗಕ್ಕೆ ವರದಿ ಸಿದ್ಧಪಡಿಸಲು ಎಷ್ಟು ಕಾಲಾವಕಾಶ ಇರುತ್ತದೆ, 2026ರ ಜನವರಿಯಿಂದಲೇ ಹೊಸ ಆಯೋಗದ ಶಿಫಾರಸುಗಳು ಜಾರಿಯಾಗುತ್ತದಾ, ಅಥವಾ 2026ರ ಅಂತ್ಯದವರೆಗೂ 7ನೇ ವೇತನ ಆಯೋಗದ ಶಿಫಾರಸುಗಳೇ ಚಾಲನೆಯಲ್ಲಿರುತ್ತವಾ, ಇವೇ ಮುಂತಾದ ಅನುಮಾನಗಳಿಗೆ ಮುಂದಿನ ದಿನಗಳಲ್ಲಿ ಉತ್ತರ ಸಿಗುವ ಸಾಧ್ಯತೆ ಇದೆ.

ಕೇಂದ್ರ ಸರ್ಕಾರಿ ನೌಕರರ ಸಂಬಳದಲ್ಲಿ ಏರಿಕೆ?

ಎಂಟನೇ ವೇತನ ಆಯೋಗ ಸ್ಥಾಪನೆಯಾದರೆ ಕೇಂದ್ರ ಸರ್ಕಾರಿ ನೌಕರರ ವೇತನದಲ್ಲಿ ಗಮನಾರ್ಹ ಹೆಚ್ಚಳವಾಗಬಹುದು. ವೇತನ ನಿರ್ಧಾರದ ಪ್ರಮುಖ ಅಂಶವಾದ ಫಿಟ್ಮೆಂಟ್ ಫ್ಯಾಕ್ಟರ್ ಅನ್ನು ಹೆಚ್ಚಿಸಬಹುದು. 7ನೇ ವೇತನ ಆಯೋಗದಲ್ಲಿ ಫಿಟ್ಮೆಂಟ್ ಫ್ಯಾಕ್ಟರ್ 2.57 ಇದೆ. ಇದನ್ನು 2.86ಕ್ಕೆ ಹೆಚ್ಚಿಸುವ ಸಾಧ್ಯತೆ ಇದೆ. ಇದೇನಾದರೂ ಒಪ್ಪಿಗೆ ಪಡೆದಲ್ಲಿ ಸರ್ಕಾರಿ ನೌಕರರ ಕನಿಷ್ಠ ಸಂಬಳದಲ್ಲಿ ಬರೋಬ್ಬರಿ 186 ಪ್ರತಿಶತದಷ್ಟು ಏರಿಕೆ ಆಗಬಹುದು.

ಸದ್ಯ ಕನಿಷ್ಠ ಸಂಬಳ 18,000 ರೂ ಇದೆ. 2.86ರ ಫಿಟ್ಮೆಂಟ್ ಫ್ಯಾಕ್ಟರ್‌ನಿಂದ ಕನಿಷ್ಠ ಸಂಬಳವು 51,480 ರೂ ಆಗುತ್ತದೆ. ಕನಿಷ್ಠ ಪಿಂಚಣಿಯೂ ಕೂಡ 9,000 ರೂನಿಂದ 25,740 ರೂಗೆ ಹೆಚ್ಚಬಹುದು. ಇದೇ 8ನೇ ವೇತನ ಆಯೋಗದ ಶಿಫಾರಸುಗಳು ವಿವಿಧ ರಾಜ್ಯ ಸರ್ಕಾರಗಳು ತಮ್ಮ ನೌಕರರ ವೇತನ ಪರಿಷ್ಕರಣೆಗೆ ಬಳಸಿಕೊಳ್ಳಬಹುದು.

## ಮುಂದಿನ ಸಂಪುಟ ಸಭೆಯಲ್ಲಿ ಜಾತಿಗಣತಿ ವರದಿ ಚರ್ಚೆ : ಎಚ್.ಕೆ.ಪಾಟೀಲ್



ಬೆಂಗಳೂರು : ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಲ್ಲಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2015(ಜಾತಿ ಗಣತಿ)ರ ದತ್ತಾಂಶಗಳ ಅಧ್ಯಯನ ವರದಿಯ ಮುಚ್ಚಿದ ಲಕೋಟೆಯನ್ನು ತೆರೆದು, ಮುಂದಿನ ಸಚಿವ ಸಂಪುಟ ಸಭೆಯ ಮುಂದಿಡಲು ತೀರ್ಮಾನಿಸಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ತಿಳಿಸಿದರು.

ಗುರುವಾರ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಇಂದಿನ ಸಂಪುಟ ಸಭೆಯ ಕಾರ್ಯಸೂಚಿ ಪ್ರಕಾರ ಈ ವಿಷಯದ ಕುರಿತು ಚರ್ಚೆ ನಡೆಸಬೇಕಿತ್ತು. ಆದರೆ, ಮುಖ್ಯಮಂತ್ರಿಯ ಸೂಚನೆ ಹಿನ್ನೆಲೆಯಲ್ಲಿ ಈ ಕುರಿತು ಮುಂದಿನ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಲಾಗುವುದು ಎಂದು ಹೇಳಿದರು.

3352 ನೌಕರರಿಗೆ ವೈದ್ಯಕೀಯ ವಿಮಾ ಸೌಲಭ್ಯ: ನರೇಗಾ ಯೋಜನೆಯಡಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ 3352 ಸಿಬ್ಬಂದಿಗಳಿಗೆ(ಇಎಸ್‌ಐ ಸೌಲಭ್ಯ ಹೊಂದಿರುವ ಸಿಬ್ಬಂದಿಗಳನ್ನು ಹೊರತುಪಡಿಸಿ) ಸಾಮೂಹಿಕ ವೈದ್ಯಕೀಯ ವಿಮೆ ಸೌಲಭ್ಯವನ್ನು ಒದಗಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದ್ದು ಇದಕ್ಕಾಗಿ ವಾರ್ಷಿಕ 8.34 ಕೋಟಿ ರೂ. ವೆಚ್ಚ ಮಾಡಲಾಗುವುದು ಎಂದು ಅವರು ಹೇಳಿದರು.

ಇತರೆ ನಿರ್ಣಯಗಳು: ಮಂಡ್ಯ ಜಿಲ್ಲೆಯ ವಿಶ್ವೇಶ್ವರಯ್ಯ ಫಾರ್ಮ್‌ನಲ್ಲಿ ನೂತನವಾಗಿ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಒಟ್ಟು 285.89 ಕೋಟಿ ರೂ.ಯೋಜನಾ ವೆಚ್ಚದಲ್ಲಿ ಸ್ಥಾಪನೆ. 5ನೇ ರಾಜ್ಯ ಹಣ-ಕಾಸು ಆಯೋಗದ ಅವಧಿ ಪ್ರಸಕ್ತ ಸಾಲಿನ ಆ.31ರವರೆಗೆ ವಿಸ್ತರಣೆ ಮಾಡಲು ನಿರ್ಧರಿಸಲಾಗಿದೆ ಎಂದು ಎಚ್. ಕೆ.ಪಾಟೀಲ್ ತಿಳಿಸಿದರು.

2024-25ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನ ಆರ್‌ಒಪಿಯಡಿ ಐಇಸಿ ಚಟುವಟಿಕೆಯಡಿ ಅನುಮೋದನೆಗೊಂಡಿರುವ 46.17 ಕೋಟಿ ರೂ.ಗಳ ಸಮಗ್ರ ಕ್ರಿಯಾ ಯೋಜನೆ ಹಾಗೂ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣೆ ಹಾಗೂ ಕನ್ನಡಕ ವಿತರಿಸುವ 'ಆಶಾಕಿರಣ ಯೋಜನೆ'ಯನ್ನು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ 13.30 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಅವರು ಹೇಳಿದರು.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಹೊರಗುತ್ತಿಗೆ ಆಧ-ಾರದ ಮೇಲೆ ಆರೋಗ್ಯ ಮಿತ್ರರು ಮತ್ತು ಸಿಬ್ಬಂದಿಗಳನ್ನು 53.18 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಎರಡು ವರ್ಷಗಳ ಅವಧಿಗೆ ನೇಮಕ ಮಾಡಿಕೊಳ್ಳಲು ಹೊಸದಾಗಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಆಡಳಿತಾತ್ಮ ಅನುಮೋದನೆ ನೀಡಲಾಗಿದೆ ಎಂದು ಎಚ್.ಕೆ.ಪಾಟೀಲ್ ತಿಳಿಸಿದರು.

ಕೇಂದ್ರ ಸರಕಾರದ ತಿದ್ದುಪಡಿ ಅಧಿನಿಯಮ 'ದಿ ಟ್ರನ್ಸ್ ಪ್ಲಾಂಟ್ ಆಫ್ ಹ್ಯೂಮನ್ ಆರ್ಗನ್ಸ್(ತಿದ್ದುಪಡಿ) ಕಾಯ್ದೆ, 2011 ಅನ್ನು ಭಾರತ ಸಂವಿಧಾನ ಅನುಚ್ಛೇದ 252(1)ರನ್ವಯ ರಾಜ್ಯದಲ್ಲಿ ಅಳವಡಿಸಿಕೊಳ್ಳಲು ವಿಧಾನ ಮಂಡಲದಲ್ಲಿ ಮಂಡಿಸುವ 'ಅಧಿಕೃತ ನಿರ್ಣಯ'ಕ್ಕೆ ಅನುಮೋದನೆ ನೀಡಲಾಗಿದೆ. ಈ ತಿದ್ದುಪಡಿಯಿಂದ ಅಂಗಾಗ ದಾನದಲ್ಲಿ ನಡೆಯುವ ವಾಣಿಜ್ಯೀಕರಣವನ್ನು ತಡೆಯಬಹುದು. ಅಂಗಗಳ ಕಸಿಯನ್ನು ಪರಿಣಾಮಕಾ-ರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ. ಇದ-ರಿಂದ ರಾಜ್ಯದಲ್ಲಿ ಗುಣಮಟ್ಟದ ಆರೋಗ್ಯ ಸೇವೆಯನ್ನು ಒದಗಿಸಬಹುದಾಗಿದೆ ಎಂದು ಅವರು ತಿಳಿಸಿದರು.

ಅಸ್ತಿತ್ವದಲ್ಲಿರುವ ಅಂಗ ಕಸಿ(ಜೀವಸಾರ್ಥಕತೆ) ಯೋಜನೆಗೆ ಶ್ವಾಸಕೋಶ, ಹೃದಯ ಮತ್ತು ಮೂಳೆ ಮಜ್ಜೆಯ ಕಸಿ(ಬಿ-ಎಂಟಿ) ಸೇರಿಸಿ ಯೋಜನೆ ವಿಸ್ತರಿಸಲು ನಿರ್ಧರಿಸಲಾಗಿದೆ. ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾಗುತ್ತಿರುವ 450 ಹಾಸಿಗೆ ಸಾಮರ್ಥ್ಯದ ನೂತನ ಆಸ್ಪತ್ರೆ ಕಟ್ಟಡದ ಎರಡನೆ ಹಂತದ ಕಾಮಗಾರಿಯ 78.10 ಕೋಟಿ ರೂ.ಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಎಚ್.ಕೆ.ಪಾಟೀಲ್ ಹೇಳಿದರು.

ರಾಜ್ಯದ 10 ಮಹಾನಗರ ಪಾಲಿಕೆಗಳಲ್ಲಿ ಹಾಗೂ ಆಯ್ದ 24 ನಗರಸಭೆಗಳಲ್ಲಿ ಒಟ್ಟು 34 ಆಧುನಿಕ ವಿದ್ಯುತ್/ಅನಿಲ್ ಚಿತಾಗಾರಗಳನ್ನು ನ್ಯಾಷನಲ್ ಹೌಸಿಂಗ್ ಬ್ಯಾಂಕಿನ ನಗರ ಮೂಲಸೌಕರ್ಯ ಅಭಿವೃದ್ಧಿ ನಿಧಿ ಯೋಜನೆಯಡಿಯಲ್ಲಿ ಒಟ್ಟು 136 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಸಂಪುಟ ಸಭೆ ನಿರ್ಧರಿಸಿದೆ ಎಂದು ಅವರು ಹೇಳಿದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 10 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಗಳ ಒಟ್ಟು 211 ಕೋಟಿ ರೂ.ಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಪಿಪಿಪಿ ಮಾದರಿಯಲ್ಲಿ ಒದಗಿಸಲಾಗುತ್ತಿರುವ ಸಿಟಿ ಸ್ಕ್ಯಾನ್ ಮತ್ತು ಎಂ.ಆರ್.ಐ ಸ್ಕ್ಯಾನ್ ಸೇವೆಗಳನ್ನು ಪಿಎಚ್-ಎಚ್(ಬಿಪಿಎಲ್) ಕಾರ್ಡ್ ಹೊಂದಿರುವವರಿಗೆ ಉಚಿತವಾಗಿ ಒದಗಿಸಲು ನಿರ್ಧರಿಸಲಾಗಿದೆ ಎಂದು ಎಚ್.ಕೆ.ಪಾಟೀಲ್ ತಿಳಿಸಿದರು. ಖಜಿ-ಕಂದಾಯ ಯೋಜನೆಯಡಿಯಲ್ಲಿ ಕಂದಾಯ ಇಲಾಖೆಯ ಗ್ರಾಮ ಆಡಳಿತ ಅಧಿಕಾರಿಗಳು, ಕಂದಾಯ ನಿರೀಕ್ಷಕರು, ಕಂದಾಯ ಅಧಿಕಾರಿಗಳಿಗೆ 4000 ಕ್ರೋಮ್ ಬುಕ್ ಅಥವಾ ಲ್ಯಾಪ್‌ಟಾಪ್‌ಗಳನ್ನು 20 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಖರೀದಿಸಲು ನಿರ್ಧರಿಸಲಾಗಿದೆ. ದಾವಣಗೆರೆ ತಾಲೂಕಿನ ಆನಗೋಡು ಹೋಬಳಿಯ ರುದ್ರನಕಟ್ಟೆ ಗ್ರಾಮದಲ್ಲಿ ಎರಡು ಎಕರೆ ಗೋಮಾಳ ಜಮೀನನ್ನು ಗೊಲ್ಲರ(ಯಾದವ) ಸಂಘಕ್ಕೆ ಮಂಜೂರು ಮಾಡಲು ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದರು.

## ಮೊದಲ ಪತ್ನಿಯನ್ನೇ ಬರ್ಬರವಾಗಿ ಹತ್ಯೆಗೈದ ಪಾಪಿ ಪತಿರಾಯ



ಬೆಳಗಾವಿ: 2ನೇ ಹೆಂಡತಿಯನ್ನು ಬಿಟ್ಟು ತನ್ನ ಬಳಿಯೇ ಇರುವಂತೆ ಪೀಡಿಸುತ್ತಿದ್ದ ಮೊದಲ ಹೆಂಡ್ತಿಯನ್ನೇ ಪತಿ ಬರ್ಬರವಾಗಿ ಹತ್ಯೆಗೈದಿರುವ ಘಟನೆ ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಇಂಚಲ ಗ್ರಾಮದಲ್ಲಿ ನಡೆದಿದೆ. ಶಮಾ ರಿಯಾಜ್ ಪಠಾಣ್(25) ಕೊಲೆಯಾದ ಮೊದಲ ಹೆಂಡತಿ. ರಿಯಾಜ್ ಪಠಾಣ್(30) ಕೊಲೆ ಮಾಡಿದ ಪಾಪಿ ಗಂಡ. ಎರಡನೇ ಹೆಂಡತಿ ಫರ್ಜಾನಾ ಪಠಾಣ್ ಮಾತು ಕೇಳಿ ರಿಯಾಜ್, ಮೊದಲ ಪತ್ನಿ ಶಮಾ ಮಲಗಿದ್ದಾಗ ಆಕೆಯ ತಲೆ ಮೇಲೆ ಕಲ್ಲು ಎತ್ತಿಹಾಕಿ ಬರ್ಬರವಾಗಿ ಹತ್ಯೆಗೈದಿದ್ದಾನೆ.

ಶಮಾ ಪಠಾಣ್ 27ವರ್ಷದ ಈಕೆ ಧಾರವಾಡದ ನಿವಾಸಿಯಾಗಿದ್ದು ಹತ್ತು ವರ್ಷದ ಹಿಂದೆ ಶಿಗ್ಗಾವಿಯ ರಿಯಾಜ್ ಪಠಾಣ್ ಎಂಬಾತನನ್ನ ಮದುವೆಯಾಗಿದ್ದಳು. ಇದಾದ ಬಳಿಕ ಗಂಡ ಹೆಂಡತಿ ಕೆಲಸಕ್ಕೆಂದು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಇಂಚಲ ಗ್ರಾಮಕ್ಕೆ ಬಂದು ನೆಲಸಿದ್ದರು. ರಿಯಾಜ್ ರಸ್ತೆ ಬದಿಯಲ್ಲಿ ಚೆಸ್ಮಾ, ವಾಚ್ ಮಾರುವ ವ್ಯಾಪಾರ ಮಾಡುತ್ತಿದ್ದರೆ, ಶಮಾ ಮಾತ್ರ ಮನೆಯಲ್ಲೇ ಇರುತ್ತಿದ್ದಳು. ಈ ದಂಪತಿಗೆ ಮೂರು ಮಕ್ಕಳು ಸಹ ಇದ್ದು, ಸಂಸಾರ ಸುಂದರವಾಗಿತ್ತು. ಆದ್ರೆ, ಈ ಸಂಸಾರದಲ್ಲಿ ಮತ್ತೋರ್ವ ಮಹಿಳೆ ಎಂಟ್ರಿ ಕೊಟ್ಟಿದ್ದಕ್ಕೆ ಈ ದುರಂತ ಸಂಭಿಸಿದೆ.


ಒಂದೂವರೆ ವರ್ಷದ ಹಿಂದೆ ಹೆಂಡತಿ ಇದ್ರೂ ರಿಯಾಜ್ ಮತ್ತೊಬ್ಬಳನ್ನ ಗುಟ್ಟಾಗಿ ಮದುವೆಯಾಗಿದ್ದ. ಎರಡನೇಯ ಮದುವೆಯಾಗಿದ್ದ ರಿಯಾಜ್ ಕೆಲ ತಿಂಗಳಿಂದ ಮನೆಗೆ ಬರುವುದನ್ನ ನಿಲ್ಲಿಸಿದ್ದ. ವಾರದಲ್ಲಿ ಎರಡ್ಮೂರು ದಿನ ಬರುತ್ತಿದ್ದ. ಇದ-ರಿಂದ ಸಂಶಯ ಬಂದು ಕೇಳಿದಾಗ ತನಗೆ ಫರ್ಜಾನಾ ಎಂಬಾಕೆ ಜೊತೆಗೆ ಮತ್ತೊಂದು ಮದುವೆಯಾಗಿರುವುದಾಗಿ ಹೇಳಿದ್ದ. ಇದನ್ನ ಕೇಳಿ ಶಾಕ್ ಆಗಿದ್ದ ಶಮಾ ಮೂರು ಮಕ್ಕಳಿಗಾಗಿ ಅನಿವಾರ್ಯವಾಗಿ ರಿಯಾಜ್ ಜೊತೆಗೆ ಉಳಿದುಕೊಂಡಿದ್ದಳು. ಆದ್ರೆ, ಗಂಡ ರಿಯಾಜ್ ಮಾತ್ರ ಸರಿಯಾಗಿ ಮನೆಗೆ ಬರುವುದನ್ನೇ ನಿಲ್ಲಿಸಿದ್ದ. ಇದರಿಂದ ಕೆರಳಿದ್ದ ಶಮಾ ತನ್ನೊಟ್ಟಿಗೆ ಇರುವಂತೆ ಒತ್ತಾಯಿಸುತ್ತಿದ್ದಳು.

ಕೆಲ ದಿನಗಳ ಹಿಂದೆ ಎರಡನೇವಳನ್ನ ಬಿಟ್ಟು ಬಿಡುವಂತೆ ಹೇಳಿದ್ದಳು. ಇದರಿಂದ ಕೋಪಗೊಂಡು ಈ ವಿಚಾರವನ್ನ ಎರಡನೇ ಹೆಂಡ್ತಿ ಫರ್ಜಾನ ಮುಂದೆ ಹೇಳಿಕೊಂಡಿದ್ದ. ಆಗ 2ನೇ ಪತ್ನಿ, ಶಮಾಳನ್ನು ಸಾಯಿಸಿಬಿಡು ಎಂದು ಸಲಹೆ ಕೊಟ್ಟಿದ್ದಾಳೆ. 2ನೇ ಹೆಂಡ್ತಿ ಕೊಟ್ಟ ಪ್ಲ್ಯಾನ್‌ನಂತೆ ರಾತ್ರಿ ಮನೆಗೆ ಬಂದು ಮಲಗಿದ್ದ ಶಮಾಳ ತಲೆ ಮೇಲೆ ಕಲ್ಲು ಎತ್ತಿಹಾಕಿ ಬರ್ಬರವಾಗಿ ಹತ್ಯೆ ಮಾಡಿದ್ದಾನೆ. ಇನ್ನೂ ಹೆಂಡತಿಯನ್ನ ಕೊಲೆ ಮಾಡಿದ ಬಳಿಕ ಮನೆಯಲ್ಲಿದ್ದ ಮಗನೊಂದಿಗೆ ಎರಡನೇ ಹೆಂಡತಿ ಮನೆಗೆ ಹೋಗಿ ಬಂದಿದ್ದಾನೆ. ಬಳಿಕ ಆಕೆಯನ್ನ ಕರೆದುಕೊಂಡು ಅಲ್ಲಿಂದ ಊರು ಬಿಟ್ಟಿದ್ದಾನೆ.

ಈ ವಿಚಾರ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಭೇಟಿ ನೀಡಿದ ಮುರಗೋಡ ಠಾಣೆ ಪೊಲೀಸರು ಕೊಲೆ ಕೇಸ್ ದಾಖಲಿಸಿಕೊಂಡಿದ್ದಾರೆ. ಇತ್ತ ಶವವನ್ನ ಬೆಳಗಾವಿ ಬಿಮ್ಸ್ ಆಸ್ಪತ್ರೆ ಶವಾಗಾರಕ್ಕೆ ಶಿಫ್ಟ್ ಮಾಡಿ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರ ಮಾಡಿದ್ದಾರೆ. ಇನ್ನೂ ಗಂಡ ಮಕ್ಕಳು ಇಲ್ಲದ ಕಾರಣ ಶಮಾಳ ಶವವನ್ನ ಊರಿಗೆ ತೆಗೆದುಕೊಂಡು ಹೋಗಲು ಆಗದೇ ಬೆಳಗಾವಿಯ ಸದಾಶಿವನ ನಗರದ ಸ್ಮಶಾನ ಭೂಮಿಯಲ್ಲೇ ಅಂತ್ಯಸಂಸ್ಕಾರ ಮಾಡಿದ್ದಾರೆ. ಇತ್ತ ಗಂಡ ರಿಯಾಜ್ ಹಾಗೂ ಎರಡನೇ ಹೆಂಡತಿ ಫರ್ಜಾನಾ ಮೇಲೆ ಕೇಸ್ ದಾಖಲಾಗಿದ್ದು ಪರಾರಿಯಾಗಿರುವ ರಿಯಾಜ್ ಮತ್ತು ಫರ್ಜಾನಾಳಿಗೆ ಬಲೆ ಬೀಸಿದ್ದಾರೆ.

ಇನ್ನೂ ಮುರುಗೋಡ ಠಾಣೆಯಲ್ಲಿ ಕೇಸ್ ದಾಖಲಾಗಿದ್ದು, ಪರಾರಿಯಾಗಿರುವ ಪಾಪಿ ಗಂಡನ ಹುಡುಕಾಟ ನಡೆಸುತ್ತಿದ್ದಾರೆ. ಗಂಡನ ನಂಬಿಕೊಂಡು ಊರು ಬಿಟ್ಟು ಬಂದು ಬದುಕು ಕಟ್ಟಿಕೊಳ್ತಿದ್ದಾಕೆ ಇದೀಗ ಇನ್ನೊಬ್ಬಳಿಗಾಗಿ ಗಂಡನಿಂದಲೇ ಕೊಲೆಯಾಗಿ ಹೋಗಿದ್ದಾಳೆ. ಮೂರು ಮಕ್ಕಳ ಪೈಕಿ ಆ ದಿನ ಅಜ್ಜಿ ಮನೆಯಲ್ಲಿ ಇಬ್ಬರು ಹೆಣ್ಣು ಮಕ್ಕಳಿದ್ದು ಪಾಪಿ ತಂದೆ ಅವರನ್ನೂ ನೋಡದೇ ಹೆಣ್ಣು ಮಕ್ಕಳು ಅನ್ನೋ ಕಾರಣಕ್ಕೆ ಅವರನ್ನ ಬಿಟ್ಟು ಬರೀ ಗಂಡು ಮಗನನ್ನ ಮಾತ್ರ ತನ್ನೊಟ್ಟಿಗೆ ಕರೆದುಕೊಂಡು ಹೋಗಿದ್ದಾನೆ. ಇದೀಗ ಎರಡು ಹೆಣ್ಣು ಮಕ್ಕಳು ಅನಾಥವಾಗಿವೆ.

## ಪ್ರಧಾನಮಂತ್ರಿ ಆವಾಸ್ ಯೋಜನೆ : 61,894 ಮನೆಗಳನ್ನು ಪುನರ್ ಪ್ರಾರಂಭಿಸಲು ಸಂಪುಟ ನಿರ್ಧಾರ : ಎಚ್.ಕೆ.ಪಾಟೀಲ್



ಬೆಂಗಳೂರು : ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ)ಯಡಿ ರಾಜ್ಯ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಅನುಷ್ಠಾನಗೊಳಿಸಲು ಅನುಮೋದನೆಯಾಗಿರುವ 1,08,253 ಮನೆಗಳ ಪೈಕಿ ಪ್ರಾರಂಭಿಸದೆ ಸ್ಥಗಿತಗೊಳಿಸಲಾಗಿದ್ದ 61,894 ಮನೆಗಳನ್ನು ಪುನರ್ ಪ್ರಾರಂಭಿಸಲು ಮತ್ತು ಇದಕ್ಕೆ ಅಗತ್ಯವಿರುವ 2,643.67 ಕೋಟಿ ರೂ.ಗಳನ್ನು ಭರಿಸಲು ಸಚಿವ ಸಂಪುಟ ನಿರ್ಧರಿಸಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ತಿಳಿಸಿದ್ದಾರೆ.

ಗುರುವಾರ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, 61,894 ಮನೆಗಳನ್ನು ಮೂಲಭೂತ ಸೌಕರ್ಯ ಒಳಗೊಂಡಂತೆ ಪುನರ್ ಪ್ರಾರಂಭಿಸಲು 2023ರ ಡಿ.21ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿತ್ತು ಎಂದು ಹೇಳಿದರು.

ಫಲಾನುಭವಿಗಳ ಪಾಲಿನ ವಂತಿಗೆಯ ಪೈಕಿ ಒಂದು ಲಕ್ಷ ರೂ.ಗಳನ್ನು ಮಾತ್ರ ಸಂಗ್ರಹಿಸಿಕೊಂಡು, ಉಳಿದ ಫಲಾನುಭವಿ ವಂತಿಗೆಯನ್ನು ಸರಕಾರದಿಂದ ಭರಿಸಲು ನಿರ್ಣಯ ಕೈಗೊಳ್ಳಲಾಗಿತ್ತು. ಅದರನ್ವಯ ಸ್ಥಗಿತಗೊಳಿಸಿರುವ 61,894 ಮನೆಗಳನ್ನು ಪುನರ್ ಪ್ರಾರಂಭಿಸಲು ಅಗತ್ಯವಿರುವ 2475.76 ಕೋಟಿ ರೂ.ಗಳು ಹಾಗೂ ಮೂಲ ಸೌಕರ್ಯ ಒದಗಿಸಲು ಅಗತ್ಯವಿರುವ 168 ಕೋಟಿ ರೂ.ಗಳು ಸೇರಿ ಒಟ್ಟು 2643.76 ಕೋಟಿ ರೂ.ಗಳನ್ನು ಭರಿಸಲು ಇಂದಿನ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ ಆಸ್ಪತ್ರೆಯಲ್ಲಿ 100 ಹಾಸಿಗೆ ಸಾಮರ್ಥ್ಯದ ನ್ಯೂರಾಲಜಿ ಮತ್ತು ನ್ಯೂರೋಸರ್ಜರಿ ವಿಭಾಗದ ಕಟ್ಟಡ ನಿರ್ಮಾಣ ಕಾಮಗಾರಿಗಳ ಒಟ್ಟು 33.77 ಕೋಟಿ ರೂ.ಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ. ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ಆವರಣದಲ್ಲಿನ ಕ್ರೀಡಾ ಮತ್ತು ರೋಬೋಟಿಕ್ ಶಸ್ತ್ರ ಚಿಕಿತ್ಸಾ ವಿಭಾಗದ ನೂತನ ಕಟ್ಟಡಕ್ಕೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು, ಪೀಠೋಪಕರಣಗಳು, ಇತ್ಯಾದಿಗಳನ್ನು 14 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಖರೀದಿಸಲು ಸಚಿವ ಸಂಪುಟ ಅನುಮೋದಿಸಿದೆ ಎಂದು ಅವರು ಹೇಳಿದರು.

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ನೆಫ್ರೋ-ಯುರಾಲಜಿ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಅನೆಕ್ಸ್ ಕಟ್ಟಡಕ್ಕೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು 21.86 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಖರೀದಿಸಲು ಸಚಿವ ಸಂಪುಟವು ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು ಅವರು ತಿಳಿಸಿದರು.

ಕೇಂದ್ರ ಸರಕಾರದ 15ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ರಾಷ್ಟ್ರೀಯ ವಿಪತ್ತು ಉಪಶಮನ ನಿಧಿ ಅಡಿಯಲ್ಲಿ 238.72 ಕೋಟಿ ರೂ.ಗಳ ಅಂದಾಜು ಮೊತ್ತದ ನಗರ ಪ್ರವಾಹ ಅಪಾಯ ನಿರ್ವಹಣೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಸಚಿವ ಸಂಪುಟ ನಿರ್ಣಯಿಸಿದೆ ಎಂದು ಎಚ್.ಕೆ.ಪಾಟೀಲ್ ಹೇಳಿದರು.

ಚಿಕ್ಕಮಗಳೂರು ಜಿಲ್ಲೆ ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೇ ನಂ.539 ರಲ್ಲಿರುವ ಒಂದು ಎಕರೆ ಜಮೀನನ್ನು ತಾಜ್ ಕರ್ನಾಟಕ ಹೋಟೆಲ್ಸ್ ಮತ್ತು ರೆಸಾರ್ಟ್ (ರಾಜ್ಯ ಸರಕಾರದ ಪ್ರವಾಸೋದ್ಯಮ ಇಲಾಖೆ ಮತ್ತು ಐಎಚ್‌ಸಿಎಲ್ ನಡುವಿನ ಜಂಟಿ ಉದ್ಯಮ) ಹೆಸರಿಗೆ ಹಕ್ಕು ವರ್ಗಾಯಿಸಲು ಸಚಿವ ಸಂಪುಟವು ನಿರ್ಧರಿಸಿದೆ ಎಂದು ಅವರು ತಿಳಿಸಿದರು. 2024-25ನೇ ಸಾಲಿನ ಆರ್‌ಐಡಿಎಫ್-30 ಯೋಜನೆಯಡಿ ಕೃಷಿ ಮಾರಾಟ ಇಲಾಖೆಯಿಂದ ವಿವಿಧ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ 7 ಶೀತಲ ಗೃಹಗಳನ್ನು ನಿರ್ಮಿಸುವ ಹಾಗೂ ರಾಯಚೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಪ್ರಾಂಗಣದಲ್ಲಿ ನೂತನ ಒಣ ಮೆಣಸಿನಕಾಯಿ ಮಾರುಕಟ್ಟೆ ನಿರ್ಮಿಸುವ 118.35 ಕೋಟಿ ರೂ.ಗಳ ಕಾಮಗಾರಿಗಳಿಗೆ ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು ಎಚ್.ಕೆ.ಪಾಟೀಲ್ ಹೇಳಿದರು.

### ಆರೋಗ್ಯ ಇಲಾಖೆಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ

## ತಾಯಿಯ ಮರಣ ತಡೆಗೆ ಮುಂಜಾಗ್ರತೆ ಅಗತ್ಯ : ಜಿಲ್ಲಾಧಿಕಾರಿ ಜಾನಕಿ



ಬಾಗಲಕೋಟೆ: ಗರ್ಭಾವಸ್ಥೆ ಸಮಯದಲ್ಲಿ ತಾಯಿ ಮರಣ ಪ್ರಕರಣಗಳು ಹೆಚ್ಚಾಗುತ್ತಿದ್ದು, ಅವುಗಳನ್ನು ತಡೆಯಲು ಮುಂಜಾಗ್ರತಾ ಕ್ರಮಕೈಗೊಳ್ಳುವುದು ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಗುರುವಾರ ಜರುಗಿದ ತಾಯಿ ಮರಣ, ಜಿಲ್ಲಾ ಕಣ್ಗಾವಲು ಸಮಿತಿ, ರಾಷ್ಟ್ರೀಯ ತಂಬಾಕು ನಿಯಂತ್ರಣ ಹಾಗೂ ಕಾಯಕಲ್ಪ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಆಶಾ ಕಾರ್ಯಕರ್ತರು ಹಾಗೂ ಆರೋಗ್ಯ ಇಲಾಖೆಯವರು ತಮ್ಮ ಭಾಗದ ಗರ್ಭಿಣಿಯರನ್ನು ಗುರುತಿಸಿ ನೋಂದಣಿ ಮಾಡಿಕೊಳ್ಳಬೇಕು. ಇದರಿಂದ ಸೂಕ್ತ ಸಮಯಕ್ಕೆ ಚಿಕಿತ್ಸೆ ನೀಡಿ ಆಗ ಬಹುದಾದ ಗಂಡಾಂತರಗಳಿಂದ ರಕ್ಷಿಸಲು ಸಾಧ್ಯವಾಗುತ್ತಿದೆ. ಇದರಿಂದ ತಾಯಿ ಮರಣ ತಡೆಗೆಯಲು ಸಾಧ್ಯವಾಗುತ್ತದೆ ಎಂದರು.

ಸಾರ್ವಜನಿಕರು ಕೂಡಾ ಸರಕಾರಿ ಆಸ್ಪತ್ರೆಗಳಲ್ಲಿ ಗರ್ಭಿಣಿಯರ ಬಗ್ಗೆ ಹಾಗೂ ಕುಟುಂಬಸ್ಥರು ತಮ್ಮ ಮನೆಯಲ್ಲಿದ್ದ ಗರ್ಭಿಣಿಯರು ಇದ್ದಲ್ಲಿ ಆಶಾ ಕಾರ್ಯಕರ್ತ-ರಿಗೆ ಮಾಹಿತಿ ನೀಡಬೇಕು. ಗರ್ಭಾವಸ್ಥೆಯಲ್ಲಿ ಮೇಲಿಂದ ಮೇಲೆ ಪರೀಕ್ಷೆಗೆ ಒಳಗಾಗುವ ಕಾರ್ಯವಾದಲ್ಲಿ ಬಾಹ್ಯರೋಗಗಳಿಂದ ತೊಂದರೆಯಾಗುವದಿಲ್ಲ. ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯವಾಗಬೇಕು ಎಂದು ತಿಳಿಸಿದರು. ಜಿಲ್ಲೆಯಲ್ಲಿ ಎಪ್ರೀಲ್ 2024 ರಿಂದ ಇಲ್ಲಿಯವರೆಗೆ ಒಟ್ಟು 10 ತಾಯಿ ಮರಣ ಪ್ರಕರಣಗಳು ಕಂಡುಬಂದಿದ್ದು, ಇದರಲ್ಲಿ ಖಾಸಗಿ ಆಸ್ಪತ್ರೆಯಲ್ಲಿ 7, ಸರಕಾರಿ ಆಸ್ಪತ್ರೆಯಲ್ಲಿ 2 ಮಾತ್ರ ಪ್ರಕರಣಗಳು ಕಂಡುಬಂದಿವೆ ಎಂದರು. ಸಾವು ತಪ್ಪಿಸಲು ಸಾಧ್ಯವಿಲ್ಲವಾದರೂ ನಮ್ಮ ಜವಾಬ್ದಾರಿ ಮಾತ್ರ ಮರೆಯುವಂತಿಲ್ಲ ಎಂದು ಹೇಳಿದರು.

ಜಿಲ್ಲಾ ಕಣ್ಗಾವಲು ಸಮಿತಿ

ಸಮಗ್ರ ರೋಗಗಳ ಕಣ್ಗಾವಲು ಯೋಜನೆಯ ಸಾಂಕ್ರಾಮಿಕ ರೋಗಗಳ ಅಂಕಿ ಅಂಶಗಳೊಂದಿಗೆ ರಾಷ್ಟ್ರೀಯ ರೇಬಿಸ್ ನಿಯಂತ್ರಣ ಕಾರ್ಯಕ್ರಮ ಹಾಗೂ ಹಾವು ಕಡಿತ ನಿಯಂತ್ರಣ ಕಾರ್ಯಕ್ರಮ ಅಂಕಿ ಅಂಶಗಳನ್ನು ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ದಯಾನಂದ ಕರೇಣ್ಣವರ ಸಭೆಗೆ ತಿಳಿಸಿದಾಗ ರೆಬಿಸ್ ಹಾಗೂ ಹಾವು ಕಡಿತ ಪ್ರಕರಣಗಳಿಗೆ ಯಾವುದೇ ರೀತಿಯ ಲಸಿಕೆಗಳ ಕೊರತೆ ಆಗದಂತೆ ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಮೇಲು ದರ್ಜೆ ಆಸ್ಪತ್ರೆಗಳಲ್ಲಿ ದಾಸ್ತಾನು ಇಟ್ಟುಕೊಳ್ಳಲು ಜಿಲ್ಲಾಧಿಕಾರಿಗಳು ಸೂಚಿಸಿದರು.

ರಾಷ್ಟ್ರೀಯ ತಂಬಾಕು ನಿಯಂತ್ರಣ

ಕೋಟ್ಪಾ ಕಾಯ್ದೆಯಡಿ ತಾಲೂಕಾ ಮಟ್ಟದಲ್ಲಿ ಹೆಚ್ಚಾಗಿ ಕಾರ್ಯಾಚರಣೆ ನಡೆಸಿ ಕೇವಲ ದಂಡ ಹಾಕುವ ಬದಲು ಪ್ರಕರಣ ದಾಖಲಿಸಿಕೊಂಡು ದಂಡ ಮತ್ತು ಶಿಕ್ಷೆಗೆ ಒಳಪಡಿಸುವ ಕಾರ್ಯವಾಗಬೇಕು. ಶಾಲಾ ಕಾಲೇಜುಗಳಲ್ಲಿ 100 ಗಜಗಳಲ್ಲಿ ತಂಬಾಕು ಮಾರಾಟ ಮಾಡದಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಹೆಚ್ಚಿನ ದೂರುಗಳು ಬರುತ್ತಿವೆ. ಶಾಲಾ ಕಾಲೇಜುಗಳ ಹತ್ತಿರ ತಂಬಾಕು ಮಾರಾಟ ಮಾಡುವ ಅಂಗಡಿಗಳಿದ್ದರೆ ಅವುಗಳನ್ನು ತೆರವುಗೊಳಿಸಲು ಕ್ರಮವಹಿಸಬೇಕು. ತಂಬಾಕು ಮಾರಾಟ ಮಾಡುವ ಅಂಗಡಿಗಳಿಗೆ ಕಡ್ಡಾಯವಾಗಿ ಪರವಾನಿಗೆ ಪಡೆದಿರಬೇಕು. ಇಲ್ಲದಿದ್ದರೆ ಕ್ರಮಕೈಗೊಳ್ಳಲು ಸೂಚಿಸಿದರು.

ಕಾಯಕಲ್ಪ ವ್ಯವಸ್ಥೆ ಜಿಲ್ಲೆಯ ಒಟ್ಟು 106 ಸರಕಾರಿ ಆಸ್ಪತ್ರೆಗಳಿಗೆ ಸುವ್ಯವಸ್ಥಿತ ಕಾಯಕಲ್ಪ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ. ಇದರಲ್ಲಿ ಒಂದು ಜಿಲ್ಲಾ ಆಸ್ಪತ್ರೆ, ಮೂರು ತಾಲೂಕಾ ಆಸ್ಪತ್ರೆ, 2 ಸಮುದಾಯ ಆರೋಗ್ಯ ಕೇಂದ್ರ 27 ಪ್ರಾಥಮಿಕ ಆರೋಗ್ಯ ಕೇಂದ್ರ, 3 ನಗರ ಆರೋಗ್ಯ ಕೇಂದ್ರ, 71 ಉಪ ಕೇಂದ್ರಗಳು ಇವೆ ಎಂದು ಸಭೆಗೆ ತಳಿಸಿದರು. ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಂಜುನಾಥ ಡಿ.ಎನ್, ಜಿಲ್ಲಾ ಲಸಿಕಾ ಅಧಿಕಾರಿ ಡಾ.ರಾಜಕುಮಾರ ಯರಗಲ್ಲ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಅರವಿಂದ ಪಟ್ಟಣಶೆಟ್ಟಿ, ಜಿಲ್ಲಾ ಕುಷ್ಟರೋಗ ನಿಯಂತ್ರಣಾಧಿಕಾರಿ ಶಿವನಗೌಡ ಪಾಟೀಲ, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಕುಸುಮಾ ಮಾಗಿ ಸೇರಿದಂತೆ ತಾಲೂಕಾ ವೈಧ್ಯಾಧಿಕಾರಿಗಳು ಉಪಸ್ಥಿತರಿದ್ದರು.

## ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಆದೇಶ

ವಿಜಯಪುರ: ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ವತಿಯಿಂದ ಶಮ್ಸ್ ಪ್ರೀ ಪ್ರೈಮರಿ ಹಾಗೂ ಮನಗೂಳಿ ರಸ್ತೆಯ ಕೀರ್ತಿ ನಗರದಲ್ಲಿನ ಪ್ರೈಮರಿ ಶಾಲೆಯಲ್ಲಿ ಜ. 20 ರಿಂದ ಜ.27ರ ವರೆಗೆ ವಾಣಿಜ್ಯ ಪರೀಕ್ಷೆಗಳು ಜರುಗಲಿದ್ದು, ಕಾನೂನು ಸುವ್ಯವಸ್ಥೆ ಕಾಪಾಡಲು ಹಾಗೂ ಮುನ್ನೆಚ್ಚರಿಕೆ ಕ್ರಮವಾಗಿ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಪ್ರದೇಶದಲ್ಲಿ ನಿಷೇಧಾಜ್ಞೆ ಜಾ-ರಿಗೊಳಿಸಿ ಜಿಲ್ಲಾ ದಂಡಾಧಿಕಾರಿ ಜಿಲ್ಲಾಧಿಕಾರಿ ಟಿ.ಭೂಬಾಲನ್ ಆದೇಶ ಹೊರಡಿಸಿದ್ದಾರೆ.
ಪರೀಕ್ಷಾ ದಿನದಂದು ಪರೀಕ್ಷೆಯಲ್ಲಿ ತೊಡಗಿರುವ ಯಾವುದೇ ಅಧಿಕಾರಿ, ಸಿಬ್ಬಂದಿ ಹಾಗೂ ಅಭ್ಯರ್ಥಿಗಳು ಮೊಬೈಲ್ ಫೋನ್, ಸ್ಮಾರ್ಟವಾಚ್, ಬ್ಲೂಟೂತ್ ಡಿವೈಸ್, ಪೇಜರ್, ವೈರ್‌ಲೆಸ್, ಕ್ಯಾಲ್ಕುಲೇಟರ್ ಮುಂತಾದ ಎಲೆಕ್ಟ್ರಾನಿಕ್ ವಸ್ತುಗಳನ್ನು ತರುವುದು ಹಾಗೂ ಬಳಸುವುದನ್ನು ನಿಷೇಧಿಸಿದೆ.
ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟ-ರ್ ಪ್ರದೇಶದಲ್ಲಿ ಬೆಳಿಗ್ಗೆ 9 ರಿಂದ ಪರೀಕ್ಷೆ ಮುಕ್ತಾಯವಾಗುವರೆಗೆ ಝರಾಕ್ಸ್ ಅಂಗಡಿಗಳು, ಕಂಪ್ಯೂಟರ್ ಸೆಂಟರ್ ಗಳು, ಇಂಟರನೆಟ್, ಸೈಬರ್ ಕೆಫೆಗಳು ಹಾಗೂ ಕೋಚಿಂಗ್ ಕೇಂದ್ರಗಳು ತೆರೆಯದಂತೆ ಆದೇಶಿಸಲಾಗಿದೆ.

## ಅರ್ಜಿ ಆಹ್ವಾನ

ಹಾವೇರಿ: ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ, ಕಿತ್ತೂರ ರಾಣಿ ಚೆನ್ನಮ್ಮ, ಇಂದಿರಾಗಾಂಧಿ ವಸತಿ ಶಾಲೆ, ಡಾ.ಬಿ.ಆರ್.ಅಂಬೇಡ್ಕರ ವಸತಿ ಶಾಲೆ ಹಾಗೂ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಳೆಗಳಿಗೆ 2025-26ನೇ ಸಾಲಿಗೆ 6ನೇ ತರಗತಿ ಪ್ರವೇಶಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಯು ಐದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಶಾಲೆಯಿಂದ ಖಂಖಿಖ ಸಂಖ್ಯೆ, ಇತ್ತೀಚಿನ ಭಾವಚಿತ್ರ ಮತ್ತು ಮೀಸಲಾತಿಗೆ ಸಂಬಂಧಿಸಿದ ಅಗತ್ಯ ಮೂಲ ದಾಖೆಗಳೊಂಗೆ ಹತ್ತಿರದ ವಸತಿ ಶಾಲೆಗೆ ತೆರಳಿ ದಿನಾಂಕ 25-01-2025ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಹಾಗೂ ಹಿಂದುಳಿದ ವರ್ಗದ ಪ್ರವರ್ಗದ-1ರ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷ ಮತ್ತು ಹಿಂದುಳಿದ ವರ್ಗ 2ಎ, 2ಬಿ, 3ಎ ಮತ್ತು 3ಬಿ ವರ್ಗದವರ ವಾರ್ಷಿಕ ಆದಾಯ ರೂ.1 ಲಕ್ಷದೊಳಗಿರಬೇಕು.

ಪ್ರವೇಶ ಪರೀಕ್ಷೆ ದಿನಾಂಕ 15-02-2025 ರಂದು ಶನಿವಾರ ಮಧ್ಯಾಹ್ನ 2-30 ರಿಂದ 4-30ರವರೆಗೆ ಜರುಗಲಿದೆ. ಹೆಚ್ಚಿನ ಮಾಹಿತಿಗಾಗಿ ಕೆಇಎ ಸಹಾಯವಾಣಿ ಸಂಖ್ಯೆ 080-23460460 ಅಥವಾ ಸಮೀಪದ ವಸತಿ ಶಾಲಾ-ಕಾಲೇಜಿನ ಪ್ರಾಂಶುಪಾಲರನ್ನು ಸಂಪರ್ಕಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜ.20 ರಿಂದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ನೇಮಕಕ್ಕೆ ನೇರ ಸಂದರ್ಶನ

ಹಾವೇರಿ. ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಮುದಾಯ ಆರೋಗ್ಯ ಕೇಂದ್ರ, ತಾಲೂಕಾ ಸಾರ್ವಜನಿಕ ಆಸ್ಪತ್ರೆ, ಆರೋಗ್ಯ ವಿಸ್ತರಣಾ ಕೇಂದ್ರಗಳಲ್ಲಿ ಖಾಲಿ ಇರುವ 26 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗೆ ಅರ್ಹ ಎಂ.ಬಿ.ಬಿ.ಎಸ್. ವೈದ್ಯರನ್ನು ಗುತ್ತಿಗೆ ಆದ-ಾರದ ಮೇಲೆ ಹಾಗೂ ಮೆರಿಟ್ ಕಂ ರೋಸ್ಟರ್ ಆಧಾರದ ಮೇಲೆ ನೇಮಕಕ್ಕೆ ಜನವರಿ 20 ರಿಂದ ನೇರ ಸಂದರ್ಶನ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ತಿಳೀಸಿದ್ದಾರೆ.

ಈ ನೇರ ಸಂದರ್ಶನ ಜ.20 ರಿಂದ ಹುದ್ದೆಗಳ ನೇಮಕಾತಿ ಪೂರ್ಣಗೊಳ್ಳುವವರೆಗೆ ಪ್ರತಿದಿನ ನಡೆಯಲಿದ್ದು, ಆಯ್ಕೆಯಾಗುವ ವೈದ್ಯರಿಗೆ ಮಾಸಿಕ ರೂ.60ಸಾವಿರ ವೇತನ ನೀಡಲಾಗುವುದು.

ಅರ್ಹ ಅಭ್ಯರ್ಥಿಗಳು ಎಸ್.ಎಸ್. ಎಲ್.ಸಿ., ಪಿಯುಸಿ ಹಾಗೂ ಎಂ.ಬಿ.ಬಿ.ಎಸ್ ವಿದ್ಯಾರ್ಹತೆಯ ಎಲ್ಲಾ ವರ್ಷದ ಅಂಕಪಟ್ಟಿಗಳು, ಹೌಸ್‌ಮನ್‌ಶಿಪ್ ಮುಗಿದ ಬಗ್ಗೆ ಪ್ರಮಾಣಪತ್ರ ಮತ್ತು ಕಾನೂನು ಬದ್ಧವಾಗಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪ್ರಮಾಣಪತ್ರ ಹಾಗೂ ಕೆಎಂಸಿ ನೋಂದಣಿ ಪ್ರಮಾಣಪತ್ರ, ಗುರುತಿನ ಚೀಟಿ(ಆಧಾರ) ಸೇರಿದಂತೆ ಅಗತ್ಯ ದಾಖಲಾತಿಗಳ ಝರಾಕ್ಸ್ ಪ್ರತಿಗಳನ್ನು ದೃಢೀಕರಿಸಿ ಅರ್ಜಿಯೊಂದಿಗೆ ಎಲ್ಲ ದಾಖಲೆಗಳನ್ನು ದ್ವಿ ಪ್ರತಿಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಆಡಳಿತ ಭವನ ಹಾವೇರಿ-581110 ಈ ವಿಳಾಸಕ್ಕೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಪ್ರ.ದ.ಸ ಮಂಜು ಗಂಟಿಸಿದ್ದಪ್ಪನವರ(9538440933) ಸಂಪರ್ಕಿಸಲು ಕೋರಲಾಗಿದೆ.

## ವಿದ್ಯುತ್ ಗ್ರಾಹಕರ ಕುಂದು ಕೊರತೆಗಳ ನಿವಾರಣಾ ಸಭೆ ಜ.18

ಬೆಳಗಾವಿ, : ಹೆಸ್ಕಾಂ ನಗರ ಉಪ ವಿಭಾಗ-3ರ ನೆಹರು ನಗರ ಕಚೇರಿಯಲ್ಲಿ ಶನಿವಾರ (ಜ.18) ಬೆಳಿಗ್ಗೆ 10.30 ಗಂಟೆಗೆ "ವಿದ್ಯುತ್ ಗ್ರಾಹಕರ ಕುಂದು ಕೊರತೆಗಳ ನಿವಾರಣಾ" ಸಭೆ ಆಯೋಜಿಸಲಾಗಿದೆ.

ಆದಕಾರಣ ವಿದ್ಯುತ್ ಗ್ರಾಹಕರು ಸಭೆಯಲ್ಲಿ ಭಾಗವಹಿಸಿ ತಮ್ಮ ಕುಂದು-ಕೊರತೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ನೆಹರು ನಗರ ಕಾ&ಪಾ ನಗರ ಉಪ ವಿಭಾಗ ನಂ-03ರ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

********

## ವಿದ್ಯುತ ಸಂಪರ್ಕ ಕಲ್ಪಿಸದಿದ್ದರೆ ಉಗ್ರ ಹೋರಾಟ - ರೈತ ಸಂಘ ಎಚ್ಚರಿಕೆ



ಬೈಲಹೊಂಗಲ: ಪಟ್ಟಣದ ಕೆ.ಇ.ಬಿ ಕಚೇರಿಗೆ ತೆರಳಿ ಅಧಿಕಾರಿಗಳಿಗೆ ಭೇಟಿಯಾಗಿ ನೇಗಿಲಯೋಗಿ ರೈತ ಸೇವಾ ಸಂಘದ ರಾಜ್ಯ ಅಧ್ಯಕ್ಷ ರವಿ ಪಾಟೀಲ ಅವರು ಮಾತನಾಡಿ ಬೆಳಗಾವಿ ಜಿಲ್ಲೆ ಬೈಲಹೊಂಗಲ ಹತ್ತಿರ ಇರುವ

ಇಂಚಲ ಗ್ರಾಮದ ಹೊರವಲಯದಲ್ಲಿ ಅನೇಕ ರೈತ ಕುಟುಂಬಗಳು ಮನೆಕಟ್ಟಿ ವಾಸಮಾಡುತ್ತಿದ್ದಾರೆ.

ಅಂದಾಜು ಸುಮಾರು 150 ಕ್ಕೂ ಹೆಚ್ಚು ಜನ ವಾಸಿಸುತ್ತಿದ್ದಾರೆ. ಇಂಚಲ ಗ್ರಾಮ ಪಂಚಾಯಿತಿಗೆ, ಈ ಮನೆಗಳನ್ನು ಗ್ರಾಮಠಾಣಾದಲ್ಲಿ ಹಾಕಿಕೊಂಡು ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಿ

ಕೊಡುವಂತೆ ಕಳೆದ 20 ವರ್ಷಗಳಿಂದ ಅರ್ಜಿ ಕೊಡುತ್ತಾ ಬಂದಿದ್ದರು ಯಾವುದೇ ಪ್ರಯೋಜನವಾಗಿಲ್ಲ . ಕುಟುಂಬಗಳು ಕತ್ತಲೆಯಲ್ಲಿಯೇ ಜೀವನ ನಡೆಸುತ್ತಿದ್ದಾರೆ. ವಿದ್ಯುತ್ ಇಲ್ಲದ್ದರಿಂದ ರಾತ್ರಿಯ ವೇಳೆ ಈ ಕುಟುಂಬಗಳು ಭಯದಿಂದಲೇ ಜೀವನ ನಡೆಸುತ್ತಿದ್ದಾರೆ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಆಗಿದೆ ಮಕ್ಕಳು ಈ ಕಾರಣದಿಂದಲೇ ಶಾಲೆಗೆ ಹೋಗದೇ ಶಿಕ್ಷಣವನ್ನು ಅರ್ದಕ್ಕೆ ನಿಲ್ಲಸಿದ್ದಾರೆ. ಒಟ್ಟಿನಲ್ಲಿ ಈ ಕುಟುಂಬಗಳ

ಜೀವನ ಕತ್ತಲೇಯಲ್ಲಿಯೇ ಕಳೆಯುತ್ತಿದ್ದಾರೆ. ಅನೇಕ ಬಾರೀ ಹೆಸ್ಕಾಂ ಅಧಿಕಾರಿಗಳಿಗೇ ವಿದ್ಯುತ್ ಸಂಪರ್ಕ

ಕಲ್ಪಸುವಂತೆ ಮನವಿ ಮಾಡಿದರೂ ಸ್ಪಂದಿಸಿಲ್ಲ. ಕಾರಣ ಕುಟುಂಬಗಳ ನೋವನ್ನು ಅರ್ಥಮಾಡಿಕೋಡು, ಈ ಮನೆಗಳಿಗೆ ನಿರಂತರ ಜ್ಯೋತಿ ವಿದ್ಯುತ ಸಂಪರ್ಕ ವಿದ್ಯುತ್ ಸಂಪರ್ಕ ಕಲ್ಪಿಸದಿದ್ದರೆ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷರಾದ ಶಂಕರ ಬೋಳಣ್ಣವರ, ಜಿಲ್ಲಾ ಸಂಚಾಲಕರಾದ ಸುರೇಶ್ ವಾಲಿ, ರೈತರಾದ ಸಂತೋಷ ಕಮತಗಿ, ಸುರೇಶ್ ಬೋಳಣ್ಣವರ, ಭೀಮಪ್ಪ ಉದಗಟ್ಟಿ, ಬಂಕನಾಥ ವಾರಿ,ಸಿದ್ರಾಮ ಖನಗೌಡರ, ಮಹಾಂತೇಶ ಮೆಟಗಟ್ಟಿ,ರಾಜು ದಿನ್ನಿಮನಿ ಹಾಗೂ ಅನೇಕರು ಉಪಸ್ಥಿತರಿದ್ದರು.

## ಕಲಾವಿದರಿಗೆ ಸೂಕ್ತ ವೇದಿಕೆ ಕಲ್ಪಿಸಿ : ಡಾ.ಎನ್. ಬಾಲಾಜಿ



ಮುಧೋಳ: ಎಲೆ ಮರೆಯ ಕಾಯಿಯಂತೆ ಇರುವ ಕಲಾವಿದರಿಗೆ ಸೂಕ್ತ ವೇದಿಕೆ ಕಲ್ಪಿಸಬೇಕಾಗಿದೆ, ನಶಿಸಿ ಹೋಗುತ್ತಿರುವ ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವ ಕರ್ತವ್ಯ ನಮ್ಮೆಲ್ಲರ ಮೇಲಿದೆ. ಎಂದು ಕನ್ನಡ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಡಾ. ಎಸ್. ಬಾಲಾಜಿ ಹೇಳಿದರು.

ನಗರ ಹೊರವಲಯದ ಬಳ್ಳೂರ ಪುನರ್ವಸತಿ ಕೇಂದ್ರದಲ್ಲಿ ಕನ್ನಡ ಜಾನಪದ ಪರಿಷತ್ ಮುಧೋಳ ತಾಲೂಕು ಘಟಕದ ಉದ್ಘಾಟನೆ, ಪದಗ್ರಹಣ ಹಾಗೂ ಜಾನಪದ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಕಲಾವಿದರ ಸ್ಥಿತಿಗತಿ ಅರಿಯಲು ಸಮೀಕ್ಷೆ ಮಾಡಬೇಕು. ಜಾನಪದ ಕಲೆ ಮತ್ತು ಕಲಾವಿದರ ಕು-ರಿತು ದಾಖಲೀಕರಣ ಮಾಡಬೇಕೆಂದರು.

ಕಜಾಪ. ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಲೆ ಮತ್ತು ಕಲಾವಿದರನ್ನು ಪ್ರೋತ್ಸಾಹಿಸಿ ಅರ್ಹ ಕಲಾವಿದರಿಗೆ ಮಾಶಾಸನ ದೊರಕಿಸಲು ಪ್ರಯತ್ನಿಸಬೇಕಾಗಿದೆ. ಎಂದು ಅವರು ಹೇಳಿದರು.

ರಾಜ್ಯ ಕಾರ್ಯದರ್ಶಿ ಪ್ರೊ. ಕೆ. ಎಸ್. ಕೌಜಲಗಿ, ಮುಧೋಳ ಘಟಕದ ನೂತನ ಅಧ್ಯಕ್ಷ ಡಾ. ಸುನೀಲ ಬಿರಾದಾರ, ಗೌರವಾಧ್ಯಕ್ಷ ಸುರೇಶ ಭಸ್ಮೆ ಮತ್ತು ಪದಾಧಿಕಾರಿಗಳಿಗೆ ಪದಪತ್ರ ನೀಡಲಾಯಿತು. ವಿವಿಧ ಜಾನಪದ ಕಲಾ ತಂಡಗಳಿಂದ ಗಾಯನ, ಭಜನೆ, ಹಂತಿ ಪದ ಸೇರಿದಂತೆ ಜಾನಪದ ಹಾಡುಗಳು ಮೊಳಗಿದವು. ಕಜಾಪ. ಮಹಿಳಾ ಘಟಕದ ಅಧ್ಯಕ್ಷೆ ಲಕ್ಷ್ಮೀ ಹಾರುಗೊಪ್ಪ.

ರಾಜ್ಯ ಗಾಣಿಗ ಸಮಾಜ ನೌಕರರ ಸಂಘದ ರಾಜ್ಯಾಧ್ಯಕ್ಷ ಆರ್. ಜಿ. ಪಾಟೀಲ, ಜಿಲ್ಲಾ ಕಾರ್ಯದರ್ಶಿ ಆರ್. ಬಿ. ನಬಿವಾಲೆ, ಜಿಲ್ಲಾ ಖಜಾಂಚಿ ಸುರೇಶ ವಸ್ತ್ರದ, ಶ್ರೀಕಾಂತಯ್ಯ ಹಿರೇಮಠ, ಸಿದ್ದಯ್ಯ ಬುಗಟಗಿಮಠ, ಬಸಯ್ಯ ಪೂಜಾರಿ, ನಾಗನಗೌಡ ಬಿರಾದಾರ, ಶ್ರೀಶೈಲಗೌಡ ಬಿರಾದಾರ,

ರಾಜಶೇಖರ ಬಿರಾದಾರ, ಹಣಮಂತ ಬಿರಾದಾರ, ಲಕ್ಕವ್ವ ನಾವಿ, ಸದಾನಂದ ಕಳ್ಳೆಪ್ಪಗೋಳ, ರೇವಣಸಿದ್ದಯ್ಯ ಮರೇಗುದ್ದಿ, ನಾಮದೇವ ಕೋಪರಡೆ, ಅವಿನಾಶ ಕೋಷ್ಠಿ, ಹನಮಂತ ಪೂಜಾರಿ, ಬಸವರಾಜ ಮಹಾಲಿಂಗೇಶ್ವರಮಠ, ಶಶಿಕಾಂತ ಮೋರೆ, ರವಿ ಅಕ್ಕಿಮರಡಿ, ಸಂಜು ಹಳ್ಳಿ. ಇತರರಿದ್ದರು.

ವಿಜಯಲಕ್ಷ್ಮೀ ಮರನೂರ ನಿರೂಪಿಸಿದರು. ಶಿವಕನ್ಯೆ ಕುಳ್ಳೊಳ್ಳಿ ಸ್ವಾಗತಿಸಿದರು. ರೇಖಾ ಒಂಟಗೋಡಿ ವಂದಿಸಿದರು.

## ದುರಾಶೆಗಳಿಂದ ಮಾನವ ನೆಮ್ಮದಿ ಕೆಡಿಸಿಕೊಳ್ಳುತ್ತಿದ್ದಾನೆ- ಸುಗುಣಾತಾಯಿ



ರಾಮದುರ್ಗ: ಹೆಣ್ಣು, ಹೊನ್ನು, ಮಣ್ಣಿನ ದುರಾಸೆಯಿಂದ ಮಾನವರು ಬದಕಿನ ನೆಮ್ಮದಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಇದ್ದುದರಲ್ಲಿಯೇ ಸಂತೃಪ್ತಿಯಿಂದ ಜೀವನ ನಡೆಸುವ ಮನೋಭಾವ ಬೆಳೆಸಿಕೊಳ್ಳಬೇಕು ಅಂ-ದಾಗ ನೆಮ್ಮದಿಯ ಬದುಕು ಸಾಧ್ಯವಿದೆ ಎಂದು ಬಸವಕಲ್ಯಾಣ ಆಶ್ರಮದ ಮಾತೆ ಸುಗುಣಾತಾಯಿ ಅಭಿಮತ ವ್ಯಕ್ತಪಡಿಸಿದರು.

ತಾಲೂಕಿನ ಹೊಸಕೇರಿ-ಬಸವನಗರದ ಶ್ರೀ ಫಲಹಾರೇಶ್ವರ ಸಮಗ್ರ ಅಭಿವೃದ್ಧಿ ಟ್ರಸ್ಟ್ ಕಮಿಟಿ ಹಾಗೂ ಗ್ರಾಮಸ್ಥರ ನೇತೃತ್ವದಲ್ಲಿ ಮಕರ ಸಂಕ್ರಮಣದ ನಿಮಿತ್ಯ ಏರ್ಪಡಿಸಿದ ಎರಡನೇ ದಿನದ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಷ್ಟ-ಸುಖಗಳು, ದುಃಖ-ದುಮ್ಮಾನಗಳ ಮಧ್ಯದಲ್ಲಿ ಜೀವನದಲ್ಲಿ ಗುರಿಯೊಂದಿಗೆ ನಿರಂತರ ಕಾಯಕಯೋಗಿಗಳಾಗಿ, ನಿರ್ದಿಷ್ಟ ಗುರಿಯೊಂದಿಗೆ ಬದುಕಬೇಕು. ಹಾಕಿಕೊಳ್ಳುವ ಗುರಿಗಳು, ಬಸವಾದಿ ಶರಣರ ಸಂದೇಶಗಳನ್ನು ಪಾಲಿಸುವಂತಿ-ರಬೇಕು ಎಂದರು.

ಸಮಾರಂಭದ ಸಮ್ಮುಖ ವಹಿಸಿ ಮಾತನಾಡಿದ ಶ್ರೀ ಫಲಹಾರೇಶ್ವರ ತಪೋಭೂಮಿಯ ನಿರಂಜನ ಮೂರ್ತಿ ನೀಲಲೋಚನ ತಾಯಿ, ಮಾನವ ಬದುಕಿನಲ್ಲಿ ಉಂಟಾಗುವ ಸಮಸ್ಯೆಗಳಿಂದ ಸ್ವಲ್ಪ ಮಟ್ಟಿಗಾದರೂ ಸಮಾಧಾನದಿಂದ ಯೋಚಿಸುವಂತಾಗಲಿ, ಬದುಕು ಹಸನಾಗಲು, ಮಾನವ ಜೀವನಕ್ಕೆ ಸತ್ಸಂಗ ಅಗತ್ಯವಾಗಿದೆ. ಪಾಲಕರು ತಮ್ಮ ಮಕ್ಕಳಿಗೆ ಸಂಸ್ಕೃತಿ-ಸಂಸ್ಕಾರದ ಮಾರ್ಗದರ್ಶನ ನೀಡಿದಲ್ಲಿ ಮಾತ್ರ ಅವರ ಭವಿಷ್ಯದ ಜೀವನ ಉತ್ತಮವಾಗಿ ರೂಪಗೊಳ್ಳುತ್ತದೆ ಎಂದರು.

ಹಾಸ್ಯ ಕಲಾವಿದ ಹಾಗೂ ಸತ್ಸಂಗಿ ಕೌಜಗೇರಿಯ ವಿರೇಶ ಹೂಗಾರ, ಜಾನಪದ ಹಾಡುಗಳೊಂದಿಗೆ ಗ್ರಾಮೀಣ ಪ್ರಾಚೀನ ಕಾಲದ ಕಲಾ ವೈಭವ ಹಾಗೂ ಮಹಿಳೆಯರ ಸಂಸ್ಕೃತಿ-ಸಂಸ್ಕಾರದ ಅರಿವು ಹೊಂದುವ ಕುರಿತು ಉಪನ್ಯಾಸ ನೀಡಿದರು.

ಪತ್ರಕರ್ತ ಗೌಡಪ್ಪಗೌಡ ಪಾಟೀಲ, ಶ್ರೀ ಫಲಹಾರೇಶ್ವರ ಸಮಗ್ರ ಅಭಿವೃದ್ಧಿ ಟ್ರಸ್ಟ ಕಮಿಟಿಯ ಕಾರ್ಯದರ್ಶಿ ಹಾಗೂ ಮುಖಂಡ ಶಂಕರ ಅಂಗಡಿ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ಮಹಾಲಿಂಗಯ್ಯ ಹಿರೇಮಠ, ಸಂಗಪ್ಪ ಕಿತ್ತಲಿ, ಯಲ್ಲಪ್ಪ ತಳವಾರ, ನಿಂಗಪ್ಪ ತಳವಾರ, ಬಸಪ್ಪ ಮಲಕನ್ನವರ, ದ್ಯಾಮನ್ನ ದಾಡಿಭಾಂವಿ, ಉಮೇಶ ಕನಕನ್ನವರ, ಪ್ರತಾಪ ಕನಕನ್ನವರ, ಹುಸೇನ ಖಾಕಂಡಕಿ, ಹಣಮಂತ ವಗ್ಗರ, ಈರಪ್ಪ ಭಿ. ಕಿತ್ತಲಿ, ಮಹಾಂತೇಶ ಕರೆನ್ನವರ, ನಾಗರಾಜ ಮಡಿವಾಳವರ, ಮಲ್ಲಿಕಾರ್ಜುನ ಮುಸೆಪ್ಪನವರ, ಕುಮಾರ ತಳವಾರ, ಭೀಮಣ್ಣ ಅಂಗಡಿ, ವಿಠ್ಠಲ ಕರೆನ್ನವರ ಸೇರಿದಂತೆ ಇತರರಿದ್ದರು. ರವಿ ಜಾಲಪ್ಪನವರ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.



ಬೈಲಹೊಂಗಲ ತಾಲೂಕು ಪಂಚಾಯತಿ ಸಭಾಭವನದಲ್ಲಿ ಮಣ್ಣೂರ ಮಲ್ಟಿ ಸ್ಪಷಾಲಿಟಿ ಆಸ್ಪತ್ರೆ ವತಿಯಿಂದ ಮಕರ ಸಂಕ್ರಾಂತಿ ನಿಮಿತ್ತ ಏರ್ಪಡಿಸಿದ್ದ ರಾಜ್ಯ ಮಟ್ಟದ ಕವಿಗೋಷ್ಠಿ ಹಾಗೂ ಶಹಾಬುದ್ದೀನ ಕಾಲೇಖಾನ ಅವರ ಕಾವ್ಯ ಸ್ಫೂರ್ತಿ ಕವನ ಸಂಕಲನ ಲೋಕಾರ್ಪಣೆ ಸಮಾರಂಭದಲ್ಲಿ ಬೆಳಗಾವಿ ಜಿಲ್ಲಾ ಕಸಾಪ ಮಾಜಿ ಜಿಲ್ಲಾಧ್ಯಕ್ಷ ಮೋಹನ್ ಬಸನಗೌಡ ಪಾಟೀಲ, ಡಾ. ಫಾರುಕ ಅಹ್ಮದ ಮಣ್ಣೂರ ಸಂಗಮೇಶ ಬಸಗೌಡಾ ನಾಯಿಕ ಸಾ: ಅವರಖೋಡ ತಾ: ಅಥಣಿ ಹಾಲಿ ಕುಡಚಿ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಇವರು ಪೋಲಿಸ್ ಇಲಾಖೆಯ ಸೇವೆ ಜೋತೆಗೆ ಸಾಹಿತ್ಯದ ವಿವಿಧ ಪ್ರಕಾರದಲ್ಲಿ ಅಭಿರುಚಿ ಹೊಂದಿದ್ದು ರಾಜ್ಯಮಟ್ಟದ ಕವನ ವಾಚನ ಸ್ಪರ್ಧೆಯಲ್ಲಿ ತಮ್ಮ ಕವನವನ್ನು ವಾಚಿಸಿದರು

## ಕೃಷಿಕ ಸಮಾಜದ ಕಾರ್ಯಕಾರಿ ಸಮೀತಿಯ ಪದಾಧಿಕಾರಿಗಳು



ಮುಧೋಳ: ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಮುಧೋಳ ತಾಲೂಕಾ ನೂತನ ಕಾರ್ಯಕಾರಿ ಸಮೀತಿ ರಚನೆ ಹಾಗು ಪದಾಧಿಕಾರಿಗಳ ಅವಿರೋಧ ಆಯ್ಕೆ ಮಾಡಲಾಗಿದೆ. ಎಂದು ಚುನಾವಣಾಧಿಕಾರಿ, ಸ.ಕೃ. ನಿರ್ದೇಶಕ ಎಸ್. ಬಿ. ದೊಡಮನಿ ತಿಳಿಸಿದ್ದಾರೆ.

2025-26 ರಿಂದ 2029-30.ಸಾಲಿಗೆ ಮುಂದಿನ 5.ವರ್ಷಗಳ ಅವಧಿಗೆ ಕೃ.ಸ. ಕಾರ್ಯಕಾರಿ ಸಮೀತಿ ಅಧ್ಯಕ್ಷರಾಗಿ ತಾಲೂಕಿನ ಬೆಳಗಲಿ ಗ್ರಾಮದ ಪಾಂಡಪ್ಪ ವೆಂ. ಭರಮನಿ, ಬಸವರಾಜ ದುಂ. ದೇಸಾಯಿ(ಉಪಾಧ್ಯಕ್ಷ) ಮೆಹಬೂಬ ಗ. ಮುಲ್ಲಾ(ಪ್ರ.ಕಾ.) ಗೋಪಾಲ ಪಾಂ. ಅರಳಿಮಟ್ಟಿ(ಖಜಾಂಚಿ) ರವಿಕುಮಾರ ರು. ದೇಸಾಯಿ(ಜಿಲ್ಲಾ ಪ್ರತಿನಿಧಿ), ವಿಠ್ಠಲ ದ್ಯಾ. ನಾಗನೂರ, ರಾಜೇಸಾಬ ದಾ. ಹುದ್ದಾರ, ಶಿವಲಿಂಗ ರಾ. ಹೊಸೂರ, ರಂಗಣ್ಣ ಕ. ನಾಯಿಕ, ದುಂಡಪ್ಪ ಯರಗಟ್ಟಿ, ಬಸವರಾಜ ಮಾನೆ, ಮಾಂತೇಶ ಯರಗಟ್ಟಿ, ಭೀಮಶಿ ಹುನ್ನೂರ, ಶಶಿಕಲಾ ಬ. ಮಾನೆ, ಲಕ್ಷ್ಮಣ ಮಾದರ ಇವರು ನಿರ್ದೇಶಕರಾಗಿ ಅವಿರೋಧ ಆಯ್ಕೆಯಾಗಿದ್ದಾರೆ. ಎಂದು ಅವರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

*****

## 338ನೆಯ ಸದ್ವಿಚಾರಗೋಷ್ಠಿ ಕಾರ್ಯಕ್ರಮ



ಸಿಂದಗಿ: ಮಕರ ಸಂಕ್ರಾಂತಿ ಮುಖ್ಯವಾಗಿ ದಕ್ಷಿಣ ಭಾರತದಲ್ಲಿ ಆಚರಿಸಲಾಗುವ ಧಾರ್ಮಿಕ, ಸಾಂಸ್ಕೃತಿಕ ಹಬ್ಬ. ಕರ್ನಾಟಕದಲ್ಲಿ ಮಕರ ಸಂಕ್ರಾಂತಿ ಎಂದೂ, ತಮಿಳುನಾಡಿನಲ್ಲಿ ಪೊಂಗಲ್ ಎಂದೂ, ಆಂಧ್ರದಲ್ಲಿ ಸಂಕ್ರಮಣ ಕಾಲಾಲು ಎಂದೂ ಕರೆಯಲ್ಪಡುವ ಈ ಹಬ್ಬಕ್ಕೆ ವಿಶೇಷ ಅರ್ಥ, ಸಂಭ್ರಮ ಇದೆ. ಆಚರಣೆಯಲ್ಲಿ ಹಲವು ಪದ್ಧತಿಗಳಿವೆ ಎಂದು ಶ್ರೀಪದ್ಮರಾಜ ಮಹಿಳಾ ಮಹಾವಿದ್ಯಾಲಯದ ರಾಜ್ಯಶಾಸ್ತ್ರ ಉಪನ್ಯಾಸಕ ಗಿರೀಶ ಎಸ್.ಕುಲಕರ್ಣಿ ಹೇಳಿದರು.

ಸಿಂದಗಿ ಪಟ್ಟಣದ ಸಾರಂಗಮಠದ ಆವರಣದಲ್ಲಿ ಪೂಜ್ಯ ಶ್ರೀಚೆನ್ನವೀರ ಸ್ವಾಮೀಜಿ ಪ್ರತಿಷ್ಠಾನ ಸಾರಂಗಮಠ-ಗಚ್ಚಿನಮಠದ ವತಿಯಿಂದ ಹಮ್ಮಿಕೊಂಡ 338ನೆಯ ಸದ್ವಿಚಾರಗೋಷ್ಠಿ ಕಾರ್ಯಕ್ರಮದಲ್ಲಿ ಮಕರ ಸಂಕ್ರಾಂತಿ ಹಬ್ಬದ ಮಹತ್ವವನ್ನು ಕುರಿತಾಗಿ ಮಾತನಾಡಿದರು.

ಸೂರ್ಯನು ದಕ್ಷಿಣಾಯಣದಿಂದ ಉತ್ತರಾಯಣದ ಕಡೆಗೆ ಪಥ ಬದಲಿಸುತ್ತಾನೆ. ಆದ-ರಿಂದ, ಮಕರ ಸಂಕ್ರಾಂತಿಯನ್ನು ಉತ್ತರಾಯಣ ಸಂಕ್ರಮಣ ಎಂದೂ ಕರೆಯುತ್ತೇವೆ. ಮಕರ ಸಂಕ್ರಾಂತಿಯಂದು ದೇಗುಲಗಳಲ್ಲಿ ವಿಶೇಷ ಪೂಜೆ ನಡೆಸಲಾಗುತ್ತದೆ. ಸಂಕ್ರಾಂತಿ ರೈತವರ್ಗದ ಜನರ ಹಬ್ಬ. ತಾವು ಬೆಳೆದ ದವಸ, ಧಾನ್ಯಗಳನ್ನು ಪೂಜಿಸುವ ಹಬ್ಬ. ಸಂಕ್ರಾಂತಿ, ಹೊಸ ಬೆಳೆಗಳು ಬೆಳೆದು ರೈತಾಪಿ ವರ್ಗಕ್ಕೆ ಸಿಗುವ ಕಾಲವಾಗಿದೆ. ಮಕರ ಸಂಕ್ರಾಂತಿಯ ದಿನ ಪವಿತ್ರ ಸ್ನಾನಕ್ಕೆ ಬಹಳ ಮಹತ್ವ. ಅಂದು ಸಾಕಷ್ಟು ಜನ ಪವಿತ್ರ ನದಿಗಳಲ್ಲಿ ಸ್ನಾನ ಮಾಡಿ ಹಬ್ಬವನ್ನು ಆಚರಿಸುತ್ತಾರೆ. ಇದು ಶುದ್ಧೀಕರಣದ ಸಂಕೇತ. ಬರೀ ದೇಹವಷ್ಟೇ ಅಲ್ಲ, ಮನಸ್ಸನ್ನೂ ಶುದ್ಧೀಕರಿಸುವ ಸಂಕೇತವಾಗಿ ಪವಿತ್ರ ನದಿ ಸ್ನಾನಕ್ಕೆ ಮಹತ್ವವಿದೆ ಎಂದರು.

ಈ ವೇಳೆ ಕಾರ್ಯಕ್ರಮದ ಸಾನಿಧ್ಯವನ್ನು ವಹಿಸಿದ ಸಾರಂಗಮಠದ ಪೀಠಾಧಿಪತಿ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಆಶೀರ್ವಚನ ನೀಡಿದರು. ಈ ವೇಳೆ ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಬಿ.ಎಸ್.ಡಬ್ಲ್ಯೂ ಪರೀಕ್ಷೆಯಲ್ಲಿ ರ್‍ಯಾಂಕ ಬಂದ ಶ್ರೀಪದ್ಮರಾಜ ಮಹಿಳಾ ಪದವಿ ಮಹಾವಿದ್ಯಾಲಯದ 3ನೆಯ ರ್‍ಯಾಂಕ ಪಡೆದ ಐಶ್ವರ್ಯ ತಮದೊಡ್ಡಿ, 4ನೆಯ ರ್‍ಯಾಂಕ ಪಡೆದ ವಿದ್ಯಾಶ್ರೀ ಪಡಶೆಟ್ಟಿ ಅವರನ್ನು ಶ್ರೀಮಠದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ದಾಸೋಹ ಸೇವೆಯನ್ನು ಲಿಂ.ಹೊನ್ನಪ್ಪಗೌಡ ಬಿರಾದಾರ ಅವರ ಸ್ಮರಣಾರ್ಥ ದಯಾನಂದಗೌಡ ಬಿರಾದಾರ, ಲಿಂ.ಬಸಪ್ಪ ಲೋಣಿ ಅವರ ಸ್ಮರಣಾರ್ಥ ಬಂಡೆಪ್ಪ ಲೋಣಿ, ಲಿಂ.ಶಂಭುಲಿಂಗಯ್ಯ ಮಠ ಹಾಗೂ ಧರ್ಮಪತ್ನಿ ವಿಮಲಾ ಮಠ ಅವರ ಸ್ಮರಣಾಥ-ರ್ ಸುಧಾರಾಣಿ ಮಠ ಅವರು ನೆರವೇರಿಸಿದರು. ಕಾರ್ಯಕ್ರದಲ್ಲಿ ಶಕುಂತಲಾ ಹಿರೇಮಠ, ಚನ್ನಪ್ಪ ಕತ್ತಿ, ಮುಕ್ತಾಯಕ್ಕ ಕತ್ತಿ, ಹೇಮಾ ಹಿರೇಮಠ, ಮಂಗಳಾ ಈಳಗೇರ, ಉಮೇಶ ಪೂಜೇರಿ, ಜಿ.ಎ.ನಂದಿಮಠ, ಮಹಾಂತೇಶ ನೂಲಾನವರ, ಬಸಮ್ಮ ಧರಿ, ವಿರೇಶ ಜೋಗುರ, ಚನ್ನು ಕತ್ತಿ ಸೇರಿದಂತೆ ಶ್ರೀಮಠ ಭಕ್ತರು ಉಪಸ್ಥಿತರಿದ್ದರು.

### ಬಳಗಾನೂರ ಶ್ರೀ ನೀಲಗಂಗಾಂಬಿಕಾ ದೇವಿ ಜಾತ್ರೆ : ನಾಟಕ ಉದ್ಘಾಟನೆ

## ಆಧುನಿಕ ಬರಾಟೆಯಲ್ಲಿ ನಾಟಕ ಕಲೆ ನಶಿಸುತ್ತಿದೆ-ಅಸ್ಕಿ

ತಾಳಿಕೋಟೆ, ಬೈಲಾಟ, ನಾಟಕ, ನೃತ್ಯ ಎಂಬುವುಗಳು ಇಂದಿನ ಆಧುನಿಕ ಬರಾಟೆಯ ಟಿವಿ ಮಾಧ್ಯಮದ ದಾರವಾಹಿ ಮತ್ತು ಸಿನಿಮಾಗಳಿಂದ ನಶಿಸುತ್ತಾ ಬರತೊಡಗಿವೆ ಬೆಲೆ ಕಟ್ಟಲಾಗದ ಕಲೆ ಹುಟ್ಟಿಕೊಂಡಿರುವದು ಉತ್ತರ ಕರ್ನಾಟಕದ ಜನರ ನಿತ್ಯ ಬಧುಕಿನಿಂದಾಗಿದೆ ಎಂದು ಅಸ್ಕಿ ಪೌಂಡೇಶನ್ ಅಧ್ಯಕ್ಷ ಕಾಂಗ್ರೇಸ್ ಮುಖಂಡ ಸಿ.ಬಿ.ಅಸ್ಕಿ ಅವರು ಹೇಳಿದರು.

ಬುಧವಾರರಂದು ತಾಲೂಕಿನ ಬಳಗಾನೂರ ಗ್ರಾಮದಲ್ಲಿ ಶ್ರೀ ನೀಲಗಂಗಾಂಬಿಕಾ ದೇವಿ ಜಾತ್ರಾ ಮಹೋತ್ಸವ ಅಂಗವಾಗಿ ಹಮ್ಮಿಕೊಳ್ಳಲಾದ ಸಾವು ತಂದ ಸೌಭಾಗ್ಯ ಎಂಬ ಸಾಮಾಜಿಕ ನಾಟಕವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಉತ್ತರ ಕರ್ನಾಟಕ ಹಳ್ಳಿಗಾಡಿನ ಬಧುಕಿನಲ್ಲಿ ನಿತ್ಯ ನಡೆಯುತ್ತಿರುವ ಸನ್ನಿವೇಶಗಳನ್ನು ಆದಾರಿಸಿ ನಾಟಕ ಕಲೆ ಎಂಬುದು ಹುಟ್ಟುಕೊಂಡಿದೆ ಆದರೆ ಕಲಾವಿದರು ತಮ್ಮ ಬಧುಕಿಗಾಗಿ ಸಾಕಷ್ಟು ಕಡೆಗಳಲ್ಲಿ ನಾಟಕ ಕಲೆಯನ್ನು ಪ್ರದರ್ಶಿಸುತ್ತಾ ಸಾಗಿದರೂ ಕೂಡಾ



ಅದನ್ನು ನೋಡಲು ಜನರು ಬರುತ್ತಿಲ್ಲಾ ಇದಕ್ಕೆ ಮುಖ್ಯ ಕಾರಣ ಇಂದಿನ ಟಿವಿಮಾಧ್ಯಮದ ದಾರವಾಹಿ, ಸಿನಿಮಾಗಳು ಜನರ ದಾರಿಯನ್ನು ತಪ್ಪಿಸುತ್ತಿವೆ ನಾಟಕದ ಕಲೆಯಲ್ಲಿ ಜೀವನದ ಬಧುಕನ್ನು ತಿದ್ದುವಂತಹ ಕಾರ್ಯಗಳು ನಡೆದರೆ ಟಿವಿ ಮಾಧ್ಯಮದ ದಾರವಾಹಿಗಳಿಂದ ಮನೆಯಲ್ಲಿ ಕಲಹಗಳು ಉದ್ಭವಿಸುತ್ತಾ ಸಾಗಿವೆ ಇದನ್ನು ನಾವು ನೀವು ನಿತ್ಯ ನೋಡುತ್ತಿದ್ದೇವೆ ಆದ-ರೆ ನಮ್ಮ ಬಧುಕು ದಾರವಾಹಿಗಳಿಂದ ಆಚೆ ಬರದಿರುವದು ದುರದೃಷ್ಟಕರವಾಗಿದೆ ಎಂದು ವಿಷಾದಿಸಿದ ಅವರು ಬಳಗಾನೂರ ಗ್ರಾಮದಲ್ಲಿ ಶ್ರೀ ನೀಲಗಂಗಾಂಬಿಕಾ ದೇವಿಯ ಜಾತ್ರೋತ್ಸವವನ್ನು ಈ ಭಾರಿ ಪ್ರತಿವರ್ಷಕ್ಕಿಂತಲೂ ಅದ್ದೂ-ರಿಯಾಗಿ ಜರುಗಿಸುವದರೊಂದಿಗೆ ಎಲ್ಲರಲ್ಲಿ ಭಕ್ತಿಯ ಪರಾಕಾಷ್ಠೆಯನ್ನು ಹೆಚ್ಚಿಸುವಂತಹ ಕಾರ್ಯ ಮಾಡಲಾಗಿದೆ ಈ ಜಾತ್ರೆಯ ಅಂಗವಾಗಿ ನಾಟಕ, ಜಾನಪದ ಅಲ್ಲದೇ ವಿವಿಧ ಮನರಂಜನೆಗಳನ್ನು ಆಯೋಜಿಸಿ ಕಲಾವಿದರ ಬಧುಕು ಸುಂದರಗೊಳಿಸಲು ಮುಂದಾಗಿರುವದು ಶ್ಲಾಘನೀಯವಾಗಿದೆ ಎಂದರು.

ಇನ್ನೋರ್ವ ಸಮಾಜ ಸೇವಕ ವಿರೇಶಗೌಡ ಬಾಗೇವಾಡಿ ಅವರು ಮಾತನಾಡಿ ಗ್ರಾಮೀಣ ಸೊಗಡಿನ ನಾಟಕ, ಬೈಲಾಟ ಕಲೆಗಳು ಇನ್ನೂ ಜೀವಂತವಾಗಿ ಉಳಿದುಕೊಂಡಿರುವದು ಹೆಮ್ಮೆಯ ಸಂಗತಿಯಾಗಿದೆ ಈ ನಾಟಕಗಳಲ್ಲಿ ನಮ್ಮ ದೇಶದ ಸಂಸ್ಕೃತಿ, ಸಂಸ್ಕಾರವನ್ನು ಬಿತ್ತುವಂತಹ ಸನ್ನಿವೇಶಗಳು ನಡೆಯುತ್ತಿರುವದು ಶ್ಲಾಘನೀಯವಾಗಿದೆ ಬಳಗಾನೂರ ಗ್ರಾಮದ ಶ್ರೀ ನೀಲಗಂಗಾಂಬಿಕಾ ದೇವಿಯ ಜಾತ್ರೋತ್ಸವ ಅಂಗವಾಗಿ 5 ದಿನಗಳ ಕಾಲ ವಿವಿಧ ಕಲಾವಿದರನ್ನು ಕರೆಯಿಸಿ ಪ್ರೋತ್ಸಾಹಿಸಿ ವೈಭವ ಪೂರಿತವಾಗಿ ಜಾತ್ರೆಯನ್ನು ಮಾಡುತ್ತಿರುವದು ಊರಿನ ಹಿರಿಮೆ ಇನ್ನಷ್ಟು ಹೆಚ್ಚಿಸಿದೆ ಎಂದರು.

ಇನ್ನೋರ್ವ ಮುಖ್ಯ ಅತಿಥಿ ಬಿಜೆಪಿ ಜಿಲ್ಲಾ ಅಧ್ಯಕ್ಷ ಆರ್.ಎಸ್.ಪಾಟೀಲ(ಕೂಚಬಾಳ) ಅವರು ಇಂದಿನ ದಿನಮಾನದಲ್ಲಿ ಕಲಾವಿದರು ಬಧುಕು ಕಟ್ಟಿಕೊಳ್ಳಲು ಶ್ರಮಿಸುತ್ತಿರುವ ಬಗ್ಗೆ ವಿವರಿಸಿದರಲ್ಲದೇ ಕಲಾವಿದರ ಬಧುಕು ಕಟ್ಟಿಕೊಳ್ಳುತ್ತಿರುವದು ಗ್ರಾಮೀಣ ಜನರಿಂದಾಗಿದೆ ಅದನ್ನು ಉಳಿಸಿ ಬೆಳೆಸುವದರ ಜೊತೆಗೆ ಪ್ರೋತ್ಸಾಹಿಸುವಂತಹ ಕಾರ್ಯ ಬಳಗಾನೂರ ಗ್ರಾಮದ ಜನರು ಮಾಡಿರುವದು ಹೆಮ್ಮೆಯ ಸಂಗತಿ ಎಂದರು.

ಈ ಸಮಯದಲ್ಲಿ ಮುಖಂಡರುಗಳಾದ ದ್ಯಾಮನಗೌಡ ಪಾಟೀಲ, ಎಸ್.ಆಯ್.ಕಡಕೋಳ, ಮಲ್ಲಣ್ಣ ದೋರನಳ್ಳಿ, ಎಂ.ಬಿ.ಅಲದಿ, ಕಲ್ಲಪ್ಪ ಮಡಿವಾಳರ, ಶ್ರೀಕಾಂತಗೌಡ ಬಿರಾದಾರ, ಬಾಪುಗೌಡ ಬಿರಾದಾರ, ಶಿವಣ್ಣ ದೋರನಳ್ಳಿ, ಶಿವಲಿಂಗಪ್ಪ ಪಡಶೆಟ್ಟಿ, ಶಿವನಗೌಡ ಬಿರಾದಾರ, ಹೂವಪ್ಪಗೌಡ ಬಿರಾದಾರ, ಸಿದ್ರಾಮ ಅಲದಿ, ಬಸನಗೌಡ ದೋರನಳ್ಳಿ, ಚಂದ್ರಶೇಖರ ಅಲದಿ, ಪ್ರಭು ಪತ್ತೇಪೂರ, ಅಮರೇಶ ಪಾಟೀಲ, ಬಸವರಾಜ ಜೀರಲಭಾವಿ, ಮೊದಲಾದವರು ಉಪಸ್ಥಿತರಿದ್ದರು.

# ಆನಂದ ಹಕ್ಕೆನ್ನವರಗೆ ದಿನಕರ ದೇಸಾಯಿ ಪ್ರಶಸ್ತಿ



ರಾಮದುರ್ಗ: ಅಕ್ಷರನಾದ ಕಲೆ, ಸಾಹಿತ್ಯ, ಸಾಂಸ್ಕೃತಿಕ ವೇದಿಕೆ, ಕರ್ನಾಟಕ ಮತ್ತು ಅಕ್ಷರನಾದ ಪಬ್ಲಿಕೇಷನ ಬೆಂಗಳೂರು ಅವರ ನೇತೃತ್ವದಲ್ಲಿ ಇತ್ತಿಚೆಗೆ ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ತಾಲೂಕಿನ ಅವರಾದಿ ಗ್ರಾಮದ ಸಾಹಿತಿ ಹಾಗೂ ಶಿಕ್ಷಕ ಆನಂದ ಹಕ್ಕೆನ್ನವರ ಅವರಿಗೆ ದಿನಕರ ದೇಸಾಯಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಚುಟುಕು ಬ್ರಹ್ಮ ಡಾ. ದಿನಕರ ದೇಸಾಯಿ ಅವರ ಸವಿನೆನಪಿನಲ್ಲಿ ರಾಜ್ಯ ಮಟ್ಟದ ಕವಿ–ನುಡಿ ಸಂಭ್ರಮ ಮೂರನೇ ಆವೃತ್ತಿ ಮತ್ತು ರಾಜ್ಯ ಮಟ್ಟದ ಚುಟುಕು ಗೋಷ್ಠಿ ಹಾಗೂ ದಿನಕರ ದೇಸಾಯಿ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಡಾ.ಬಿ.ವ್ಹಿ. ಮುನಿರಾಜು, ಪಾರ್ವತಿ ಬಿ.ಎ. ರೇಣುಕಾ ಪ್ರಸಾದ, ಚೆನ್ನಪ್ಪ ಸಂಗೋಳಗಿ, ಡಾ. ಇಮ್ಯಾನುಯಲ್, ಡಾ. ಸ್ಮೃತಿ ಮಧುಸೂದನ, ರಿಯಾಜ ಜೂಲಿಕಟ್ಟಿ ಸೇರಿದಂತೆ ಇತರರಿದ್ದರು.

*******

# ಮಹಾಯೋಗಿ ವೇಮನ ಜಯಂತಿ

ಗದಗ : ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,ಗದಗ ಇವರುಗಳ ಸಹಯೋಗದಲ್ಲಿ ಮಹಾಯೋಗಿ ವೇಮನ ಜಯಂತಿ–2025 ಯನ್ನು ಜನವರಿ 19 ರಂದು ಸಂಜೆ 4 ಗಂಟೆಗೆ ನಗರದ ಕಳಸಾಪುರ ರಸ್ತೆಯಲ್ಲಿನ ಶ್ರೀ ಶಿವಾನಂದ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ.ಪಾಟೀಲ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು.

ಮುಖ್ಯಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾವೇರಿ ಸಂಸದರಾದ ಬಸವರಾಜ ಬೊಮ್ಮಾಯಿ,ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ಕರ್ನಾಟಕ ಖನಿಜ ಅಬಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ರೋಣ ಶಾಸಕರಾದ ಜಿ.ಎಸ್.ಪಾಟೀಲ, ಸಂಸದ ಪಿ.ಸಿ.ಗದ್ದಿಗೌಡರ, ವಿಧಾನ ಪರಿಷತ್ ಸದಸ್ಯರಾದ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ್ , ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ಶಿರಹಟ್ಟಿ ಶಾಸಕರಾದ ಡಾ.ಚಂದ್ರು ಲಮಾಣಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಅಕಬರಸಾಬ ಬಬರ್ಜಿ ಅವರುಗಳು ಆಗಮಿಸುವರು.

ಮುಳಗುಂದ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಡಾ. ರಮೇಶ ಮ ಕಲ್ಲನಗೌಡರ ಅವರು ಮಹಾಯೋಗಿ ವೇಮನರ ಜೀವನ ಮತ್ತು ಸಂದೇಶ ಕುರಿತು ಉಪನ್ಯಾಸ ನೀಡುವರು.

ಕು. ರೇಣುಕಾ ಶಂಕರಗೌಡ ಮತ್ತು ತಂಡದವರಿಂದ ಸುಗಮ ಸಂಗೀತ ಜರುಗಲಿದೆ.

ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯದರ್ಶಿ ರಮಣದೀಪ್ ಚೌಧರಿ, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್, ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭರತ್ ಎಸ್, ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ಸರ್ವರಿಗೂ ಸ್ವಾಗತ ಕೋರಿದ್ದಾರೆ.

# ಜಿಲ್ಲಾ ಕೃಷಿಕ ಸಮಾಜಕ್ಕೆ ಆಯ್ಕೆ



ಕಾರವಾರ,: ಉತ್ತರ ಕನ್ನಡ ಜಿಲ್ಲಾ ಕೃಷಿಕ ಸಮಾಜದ ನೂತನ ಕಾರ್ಯಕಾರಿ ಸಮಿತಿಗೆ ಕಾರವಾರದ ಜಂಟಿ ಕೃಷಿ ನಿರ್ದೇಶಕರ ಕಚೇ–ರಿಯಲ್ಲಿ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರು ಹಾಗು ಚುನಾವಣಾಧಿಕಾ–ರಿಗಳ ಸಮ್ಮುಖದಲ್ಲಿ ಜಿಲ್ಲಾ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಗುರುವಾರ ನಡೆಯಿತು.

2025–26 ರಿಂದ 2029–30ರ 5 ವರ್ಷಗಳ ಅವಧಿಗೆ ನೂತನ ಅಧ್ಯಕ್ಷರಾಗಿ ನಾರಾಯಣ ಗೋವಿಂದ ಹೆಗಡೆ ಅಂಕೋಲ, ಉಪಾಧ್ಯಕ್ಷರಾಗಿ ನಾಗರಾಜ ಮಾದೇವಪ್ಪ ಬೆಣ್ಣೆ ಮುಂಡಗೋಡ, ಪ್ರಧಾನ ಕಾರ್ಯದರ್ಶಿಯಾಗಿ ಗೋಪಾಲ ರಾಮ ನಾಯ್ಕ ಸಿದ್ದಾಪುರ, ಖಜಾಂಚಿಯಾಗಿ ಮಲ್ಲಾರಿ ವಿರೂಪಾಕ್ಷ ಫಾಡಿ ಹಳಿಯಾಳ, ಹಾಗು ರಾಜ್ಯ ಪ್ರತಿನಿಧಿ ಸ್ಥಾನಕ್ಕೆ ರಾಮಚಂದ್ರ ದೇವರು ಹೆಗಡೆ ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಾಗಿನೆಲೆ ವಿವಿಧ ತಂಬಾಕು ಉತ್ಪನ್ನ ಮಾರಾಟದ ಅಂಗಡಿಗಳ ಮೇಲೆ ದಾಳಿ

ಹಾವೇರಿ: ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದ ಅಂಗವಾಗಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದಿಂದ ಬುಧವಾರ ಬ್ಯಾಡಗಿ ತಾಲೂಕಿನ ಕಾಗಿನೆಲೆ ಗ್ರಾಮದ ವಿವಿಧ ಧೂಮಪಾನ ಅಡ್ಡಾಗಳು ಹಾಗೂ ಪಾನ್‌ಶಾಪ್‌ಗಳ ಮೇಲೆ ದಾಳಿ ನಡೆಸಿ ದಂಡ ವಸೂಲಿ ಮಾಡಿದೆ.

ಪರವಾನಿಗೆ ಪಡೆಯದೇ ತಂಬಾಕು ಮಾರಾಟ ಮಾಡುತ್ತಿದ್ದ ಅಂಗಡಿ ಮಾಲೀಕರಿಗೆ ಹಾಗೂ ಕಾಯ್ದೆ ವಿರುದ್ಧವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವ, ನೇರ–ಪರೋಕ್ಷವಾಗಿ ತಂಬಾಕು ಜಾಹೀರಾತು ಪ್ರದರ್ಶನ, ಶಾಲಾ–ಕಾಲೇಜು ಆವರಣದ 100 ಮೀಟ–ರ್ ಅಂತರದೊಳಗೆ ತಂಬಾಕು ಉತ್ಪನ್ನಗಳನ್ನು ಮಾರಾಟಮಾಡುತ್ತಿರುವ ಅಂಗಡಿ, ಬೇಕರಿ, ಹೋಟೆಲ್ ಮಾಲೀಕರಿಗೆ ನೋಟೀಸ್ ಜಾರಿ ಮಾಡಿ, ತಂಬಾಕು ನಿಯಂತ್ರಣ ಕಾಯ್ದೆ–2003ರ ಕಲಂ–4ಬಿ ಅಡಿಯಲ್ಲಿ ಹಾಗೂ ಕಲಂ–4ರಡಿಯಲ್ಲಿ 11 ಪ್ರಕರಣಗಳಿಂದ ರೂ.1,000/– ದಂಡ ವಸೂಲಿ ಮಾಡಲಾಗಿದೆ. ಪರೋಕ್ಷವಾಗಿ ತಂಬಾಕು ಜಾಹೀರಾತು ಮಾಡುವ ಮೂರು ಫಲಕಗಳನ್ನು ತೆರವುಗೊಳಿಸಲಾಗಿದೆ.

ಈ ತನಿಖಾ ದಾಳಿ ತಂಡದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಲಹೆಗಾರ ಡಾ.ಸಂತೋಷ ದಡ್ಡಿ, ತಾಲೂಕಾ ಮಟ್ಟದ ಎಪಡಾಮಾಲಜಿಸ್ಟ್ ಡಾ.ಸಂತೋಷ ಹಾಲುಂಡಿ, ಸಮಾಜ ಕಾರ್ಯಕರ್ತ ದಾದಾಪೀರ ಹುಲಿಕಟ್ಟಿ, ಆರೋಗ್ಯ ನಿರೀಕ್ಷಕ ಪ್ರಶಾಂತ ನವಲಿ, ಮಹೇಶ ಕುಮ್ಮೂರ ಇತರರು ಉಪಸ್ಥಿತರಿದ್ದರು.

## ದಿ. 19 ರಂದು ಬೈಲಹೊಂಗಲದಲ್ಲಿ ಮಾಜಿ ಸೈನಿಕರ ಸ್ನೇಹ ಸಮ್ಮೇಳನ ಕಾರ್ಯಕ್ರಮ

ಬೈಲಹೊಂಗಲ : ಪಟ್ಟಣದ ಮಾಜಿ ಸೈನಿಕರ ಸಮನ್ವಯ ಸಮೀತಿಯ ಸದಸ್ಯರ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮವು ಜ.19 ರಂದು 10–30 ಕ್ಕೆ ಮುರಗೋಡ್ ರಸ್ತೆಯ ಪೃತ್ವಿ ಉದ್ಯಾನದಲ್ಲಿ ಜರುಗಲಿದೆ.

ಶಾಖಾ ಮೂರುಸಾವಿರ ಮಠದ ಪ್ರಭುನೀಲಕಂಠ ಸ್ವಾಮೀಜಿ, ಧಾರ್ಮಿಕ ದತ್ತಿ ಇಲಾಖೆಯ ನಾಮ ನಿರ್ದೇಶಿತ ಸದಸ್ಯ ಡಾ. ಮಹಾಂತೇಶ ಶಾಸ್ತ್ರಿ ಆರಾದ್ರಿಮಠ ಸಾನಿಧ್ಯ ವಹಿಸಲಿದ್ದಾರೆ.

ಮಾಜಿ ಸೈನಿಕರ ಸಮನ್ವಯ ಸಮೀತಿಯ ಸದಸ್ಯರು ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದು, ಸಂಘದ ಅಧ್ಯಕ್ಷ ಬಿ. ಬಿ. ಬೋಗೂರ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ.

ಶಾಸಕರಾದ ಮಹಾಂತೇಶ ಕೌಜಲಗಿ, ಬಾಬಾಸಾಹೇಬ ಪಾಟೀಲ, ಮಾಜಿ ಶಾಸಕರಾದ ಡಾ. ವಿಶ್ವನಾಥ ಪಾಟೀಲ,, ಜಗಧೀಶ ಮೆಟಗುಡ್ಡ, ಡಿ ವಾಯಎಸಪಿ ರವಿ ನಾಯ್ಕ, ಸಿಪಿಆಯ್ ಪಿ.ವಿ. ಸಾಲಿಮಠ, ತಹಸೀಲ್ದಾರ್ ಹಣಮಂತ ಶಿರಹಟ್ಟಿ, ಪುರಸಭೆ ಮುಖ್ಯಧಿಕಾರಿ ವಿರೇಶ ಹಸಬಿ, ಅಧ್ಯಕ್ಷ ವಿಜಯ ಬೋಳನ್ನವರ ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆಂದು ಸಂಘದ ಉಪಾಧ್ಯಕ್ಷ ಚಂದ್ರಶೇಖರ ನೇಸರಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿವಾ ಮನಿಕಟ್ಟಿ, ಜೀವಾ ನೀರಲಗಿ ಅವರಿಗೆ ಸಂಗೊಳ್ಳಿ ರಾಯಣ್ಣ ರಾಷ್ಟ್ರೀಯ ಪ್ರಶಸ್ತಿ



ರಾಮದುರ್ಗ: ತಾಲೂಕಿನ ಲಖನಾಯ್ಕನಕೊಪ್ಪದ ಯುವ ಕವಿಗಳಾದ ಶಿವಾ ಮನಿಕಟ್ಟಿ ಹಾಗೂ ಜೀವಾ ನೀರಲಗಿ ಅವರಿಗೆ ಸಂಗೊಳ್ಳಿ ರಾಯಣ್ಣ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಚೇತನ ಪೌಂಡೇಷನ ಧಾರವಾಡ ಹಾಗೂ ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ಇತ್ತಿಚೆಗೆ ಬೆಳಗಾವಿಯಲ್ಲಿ ನಡೆದ ಬೆಳಗಾವಿ ನುಡಿ–ಸಡಗರ ಕಾರ್ಯಕ್ರಮದಲ್ಲಿ ಸ್ಮರಣಿಕೆಯೊಂದಿಗೆ ಪ್ರಶಸ್ತಿ ನೀಡಲಾಗಿದೆ.

# ನಾಡಿನ ಹಬ್ಬಗಳು ನಮ್ಮ ಸಂಸ್ಕೃತಿಯ ಪ್ರತೀಕವಾಗಿವೆ– ಅಜೀತ ಮನ್ನಿಕೇರಿ




ಮೂಡಲಗಿ : ನಮ್ಮ ಪೂರ್ವಿಕರು ಆಚರಿಸುತ್ತಿದ್ದ ಪ್ರತಿಯೊಂದು ಹಬ್ಬಗಳಲ್ಲೂ ಸಂಸ್ಕಾರದಲ್ಲಿ ವಿಜ್ಞಾನವಿದೆ. ಮತ್ತು ಋತುಮಾನಕ್ಕೆ ತಕ್ಕಂತೆ ಹಬ್ಬಗಳಲ್ಲಿ ಆಹಾರ ಪದ್ಧತಿಯೂ ಕೂಡ ಇದೆ. ತುಕ್ಕಾನಟ್ಟಿ ಶಾಲೆಯಯವರು ಪ್ರತಿಯೊಂದು ಸರ್ಕಾರಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುತ್ತಾರೆ.

ಇದರಿಂದ ಗುಣಮಟ್ಟದ ಶಿಕ್ಷಣವೂ ಕೂಡ ಸಿಗುತ್ತದೆ ಎಂದು ಮೂಡಲಗಿ ಕ್ಷೇತ್ರ ಶಿಕ್ಷಣಾಧಿಕಾರಿ ಅಜೀತ ಮನ್ನಿಕೇರಿ ಹೇಳಿದರು

ಅವರು ತುಕ್ಕಾನಟ್ಟಿಯ ಸರ್ಕಾರಿ ಮಾದರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಮಕರ ಸಂಕ್ರಾಂತಿ ನಿಮಿತ್ಯ ವಿದ್ಯಾರ್ಥಿಗಳಿಗೆ ಏರ್ಪಡಿಸಿದ ಹಬ್ಬದೂಟ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು. ಎಂದರು.

ಗೋಕಾಕ ಅಕ್ಷರದಾಸೋಹ ತಾಲೂಕಾ ನಿರ್ದೇಶಕ ಆಶೋಕ ಮಲಬಣ್ಣವರ ಮಾತನಾಡಿ ಈ ಶಾಲೆಯಲ್ಲಿ ಅಕ್ಷರದಾಸೋಹ ಬಿಸಿಯೂಟ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುತ್ತಿರುವದರಿಂದ ವಿದ್ಯಾರ್ಥಿಗಳಿಗೆ ಸಂಪೂರ್ಣ ಪೋಷಕಾಂಶದ ಆಹಾರ ಸಿಗುತ್ತಿರುವದರಿಂದ ವಿದ್ಯಾರ್ಥಿಗಳಿಗೆ ಉತ್ತಮ ಆರೋಗ್ಯದೊಂದಿಗೆ ಶಾಲೆಯ ಹಾಜರಾತಿ ಕೂಡ ಸುಧಾರಿಸುತ್ತಿದೆ ಎಂದರು.

ಮುಖ್ಯೋಪಾದ್ಯಾಯ ಎ.ವ್ಹಿ. ಗಿರೆಣ್ಣವರ ಮಾತನಾಡಿದರು,

ಸಂಕ್ರಾಂತಿ ಹಬ್ಬದ ಹಿನ್ನೆಲೆಯಲ್ಲಿ ಸುಮಾರು 700 ವಿದ್ಯಾರ್ಥಿಗಳಿಗೆ ಸಜ್ಜೆ ರೊಟ್ಟಿ, ಗೊಂಜಾಳ ರೊಟ್ಟಿ, ಮಡಿಕೆಕಾಳು ಪಲ್ಯ, ಜುಣಕದ ವಡೆ, ಬಳ್ಳೊಳ್ಳಿ ಕಾರ, ಅಗಸಿ ಚಟ್ನಿ, ಶೇಂಗಾ ಚಟ್ನಿ, ಶೇಂಗಾ ಹೋಳಿಗೆ, ಗೋದಿ ಮಾದಲಿ, ತುಪ್ಪ, ಮಸಾಲೆ ಅನ್ನ ಸಾರು, ಮೊಸರನ್ನ, ಬಾಳೆಹಣ್ಣು ನೀಡಲಾಯಿತು.

ಕಾರ್ಯಕ್ರದಲ್ಲಿ ಶಿಕ್ಷಕರಾದ ವಿಮಲಾಕ್ಷಿ ತೋರಗಲ್, ಲಕ್ಷ್ಮೀ ಹೆಬ್ಬಾಳ, ಪುಷ್ಪಾ ಭರಮಧೆ, ರೂಪಾ ಹೂಲಿಕಟ್ಟಿ, ಪ್ರಿಯಾಂಕಾ.ಡಿ.ಕೆ. ಸುಜಾತ ಕೋಳಿ, ಭಾಗೀರಥಿ ಕಳ್ಳಿಗುದ್ದಿ, ವಾಸಂತಿ ಬೋರಗುಂಡಿ, ಎಮ್.ಡಿ.ಗೋಮಾಡಿ. ಬಿ.ಎನ್. ನಾಯ್ಕ, ಸೋಮಶೇಖರ ವಾಯ್ ಆರ್., ಸಿ.ಎಸ್. ಸೀರಿ. ಹೊಳೆಪ್ಪಾ ಗದಾಡಿ, ಯಮುನಾ ಹಮ್ಮನವರ, ಶಿವಲೀಲಾ ಹಣಮನ್ನವರ, ಅನ್ನಪೂರ್ಣಾ ಹುಲಕುಂದ, ಖಾತೂನಬಿ ನದಾಫ ಉಪಸ್ಥಿತರಿದ್ದರು.

# ಶಾಲಾ ಪರಿಸರ ಕೇವಲ ಶೈಕ್ಷಣಿಕ ವಿಷಯಗಳಿಗೆ ಸೀಮಿತವಾಗಬಾರದು : ರವಿಶಂಕರ ಮಠ



ಬೆಳಗಾವಿ: ಶಾಲಾ ಪರಿಸರ ಕೇವಲ ಶೈಕ್ಷಣಿಕ ವಿಷಯಗಳಿಗೆ ಸೀಮಿತವಾಗದೆ ಅದು ಕ್ರೀಡೆ, ಸಂಸ್ಕೃತಿ ಹಾಗೂ ಸಂಸ್ಕಾರ ನಿರ್ಮಾಣದ ತಾಣವಾಗಬೇಕು ಎಂದು ಡಿ.ಆರ್.ಡಿ. ಮಹಾವಿದ್ಯಾಲಯದ ಪ್ರಾಚಾರ್ಯ ರವಿಶಂಕರ ಮಠ ಅಭಿಪ್ರಾಯಪಟ್ಟರು. ಅವರು ಇಂದು ಶಿವಬಸವ ನಗರದ ಸಿದ್ಧರಾಮೇಶ್ವರ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಜರುಗಿದ ವಾರ್ಷಿಕ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು.

ಮುಂದುವರೆದು ಮಾತನಾಡಿದ ಅವರು ಕ್ರೀಡೆ ತಂಡ ಕೆಲಸ, ನಾಯಕತ್ವ ಗುಣ, ಹೊಣೆಗಾರಿಕೆ, ತಾಳ್ಮೆ ಮತ್ತು ಆತ್ಮ ವಿಶ್ವಾಸದಂತಹ ಜೀವನ ಕೌಶಲ್ಯಗಳನ್ನು ಕಲಿಸಲು ಸಹಾಯ ಮಾಡುತ್ತದೆ ಮತ್ತು ಜೀವನದ ಸವಾಲುಗಳನ್ನು ಎದು–ರಿಸಲು ವಿದ್ಯಾರ್ಥಿಗಳನ್ನು ಸಮಥ–ರ್ರನ್ನಾಗಿಸುತ್ತದೆ. ಕಾರಣ ವಿದ್ಯಾರ್ಥಿಗಳು ಬಾಲ್ಯದಲ್ಲೇ ಕ್ರೀಡೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದರು.

ಇನ್ನೋರ್ವ ಅತಿಥಿ ಸಜನಾ ವಿಜ್ಞಾನ ಕೇಂದ್ರದ ಯೋಜನಾಧಿಕಾರಿ ರಾಜಶೇಖರ ಪಾಟೀಲ ಮಾತನಾಡಿ ಯಾವುದೇ ವ್ಯಕ್ತಿ ಒಂದೇ ದಿನದಲ್ಲಿ ಕ್ರೀಡಾಪಟುವಾಗಲು ಸಾಧ್ಯವಿಲ್ಲ. ಆದರೆ ಸತತ ಪ್ರಯತ್ನ, ನಿರಂತರ ಪರಿಶ್ರಮ ಹಾಗು ಸಮರ್ಪಣಾ ಭಾವವಿದ್ದರೆ ಯಾರು ಬೇಕಾದರೂ ಕ್ರೀಡಾಪಟುವಾಗಬಹುದು. ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಮಧುಮೇಹ, ಕ್ಯಾನ್ಸರ್, ಹೃದ್ರೋಗ, ಖಿನ್ನತೆ, ಆತಂಕ ಮತ್ತು ಒತ್ತಡದಂತಹ ದೀರ್ಘಕಾಲದ ಕಾಯಿಲೆಗಳಿಂದ ದೂರವಿರಬಹುದು ಎಂದರು.

ವೇದಿಕೆಯ ಮೇಲೆ ಕನ್ನಡ ಮಾಧ್ಯಮ ಪ್ರೌಢಶಾಲೆಯ ಉಪಪ್ರಾಚಾರ್ಯೆ ಶಿವಲೀಲಾ ಪೂಜಾರ, ದೈಹಿಕ ನಿರ್ದೇಶಕ ಶ್ರೀಧರ ನೇಮಗೌಡ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಪ್ರಾಚಾರ್ಯೆ ಪ್ರೇಮಲತಾ ಪಾಟೀಲ ಸ್ವಾಗತಿಸಿ ಪ್ರಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕಿ ರೋಹಿಣಿ ಚಾಜಗೌಡ ನಿರೂಪಿಸಿದರು. ಕೊನೆಗೆ ಶೈಲಜಾ ನರಗುಂದ ವಂದಿಸಿದರು.

# ಮತಕ್ಷೇತ್ರದ ಶಾಲೆಯ ಅಭಿವೃದ್ದಿಗೆ ಸಹಾಯ–ಸಹಕಾರಕ್ಕೆ ಮನವಿ



ಬೈಲಹೊಂಗಲ– ಪಟ್ಟಣದ ಶಾಸಕರ ಮತಕ್ಷೇತ್ರದ ಮಾದರಿ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆ ನಂ 4 ರ ವಿದ್ಯಾ ದೇಗುಲವನ್ನು ಭವಿಷ್ಯದಲ್ಲಿ ಮತ್ತಷ್ಟು ಮಾದರಿಯನ್ನಾಗಿ ರೂಪಿಸಿ ವಿದ್ಯಾರ್ಥಿಗಳಿಗೆ ಮೂಲಭೂತ ಸೇ–ರಿದಂತೆ ಶೈಕ್ಷಣೀಕ ಸೌಕರ್ಯ ಒದಗಿಸುವ ಉದ್ದೇಶ ಹೊಂದಲಾಗಿದೆ ಎಂದು ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಅರ್ಜುನ ಕಲಕುಟಕರ ಹೇಳಿದರು.

ಅವರು ಪಟ್ಟಣದ ಶಾಸಕರ ಮತಕ್ಷೇತ್ರದ ಮಾದರಿ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆ ನಂ 4 ರಲ್ಲಿ ಬುಧವಾರ ನಡೆದ ಶಾಲಾಭಿವೃದ್ಧಿ ಮತ್ತು ಆಡಳಿತ ಮಂಡಳಿಯ ಸಭೆಯಲ್ಲಿ ಮಾತನಾಡಿ, ಐತಿಹಾಸಿಕ ಹಿನ್ನೆಯುಳ್ಳ ಇಲ್ಲಿನ ಈ ಶಾಲೆಯು ತಾಲೂಕಿನಲ್ಲೇ ಅತೀ ಹೆಚ್ಚು ವಿದ್ಯಾರ್ಥಿಗಳ ಸಂಖ್ಯೆಯ ಧಾಖಲೆ ಹೊಂದಿದ್ದು ಈಗಾಗಲೇ ಶಾಲೆಗೆ ಶಾಸಕರ ಸಹಕಾರದಿಂದ ಹಲವಾರು ಸೌಕರ್ಯಗಳನ್ನು ಕಲ್ಪಿಸಲಾಗಿದೆ ಎಂದರು.

ಮಕ್ಕಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಬರುವ ದಿನಗಳಲ್ಲಿ ಶಾಲೆಯನ್ನು ಜಿಲ್ಲೆಯಲ್ಲಿಯೇ ಮಾದ–ರಿಯಾಗಿಸುವ ಗುರಿ ಹೊಂದಲಾಗಿದ್ದು ಈಗಾಗಿ ಕ್ರೀಡಾ ಚಟುವಟಿಕೆ, ಶೈಕ್ಷಣೀಕ ಚಟುವಟಿಕೆಗಳ ಸೇರಿದಂತೆ ಇನ್ನುಳಿದ ಮತ್ತಷ್ಟು ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಎಸ್‌ಡಿಎಂಸಿ ಆಡಳಿತ ಮಂಡಳಿಯ ಸದಸ್ಯರ ಸಹಕಾರದೊಂದಿಗೆ ಈಗಾಗಲೇ ಇಲ್ಲಿನ ಶಾಲೆಯಲ್ಲಿ ಕಲಿತಂತಹ ಹಳೇ ವಿದ್ಯಾರ್ಥಿಗಳ ಸಹಾಯ–ಸಹಕಾರ ನೀಡಿದರೆ ಕಲಿಯುತ್ತಿರುವ ಪ್ರಸ್ತುತ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲಿದೆ. ಉನ್ನತ ಹುದ್ದೆ–ಉದ್ಯೋಗ, ವಿವಿಧ ರಂಗಗಳಲ್ಲಿ ಸಾಧನೆ ಮಾಡಿರುವ ಗಣ್ಯರು ತಮ್ಮ ಸಂಘಟಣೆಗಳ ಮೂಲಕವು ಸಹ ಪ್ರೋತ್ಸಾಹ ನೀಡಬಹುದಾಗಿದ್ದು ಇಚ್ಚೆಯುಳ್ಳವರು ಶಾಲಾ ಮುಖ್ಯೋಪಾಧ್ಯಾಯರು ಕೆ.ಬಿ. ಎಸ್. ಬೈಲಹೊಂಗಲ, ಐಎಫ್‌ಎಸ್‌ಸಿ ಕೋಡ ನಂ– ಸಿಎನ್‌ಆರ್‌ಬಿ0004738, ಅಕೌಂಟ ನಂ– 05182200005803 ಖಾತೆಗೆ ಜಮಾ ಮಾಡಲು ಕೋರಲಾಗಿದೆ. ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯ ಚಂದ್ರಶೇಖರ ಶಿಗೀಹಳ್ಳಿ, ಎಸ್‌ಡಿಎಂಸಿ ಉಪಾಧ್ಯಕ್ಷೈ ಗಂಗಮ್ಮ ಸಾಲಿ ಹಾಗೂ ಸದಸ್ಯರು ಉಪಸ್ಥಿತರಿದ್ದರು.

********

# ಸಪ್ತಸ್ವರ ಸಂಗೀತ ವಿಧ್ಯಾಲಯಕ್ಕೆರಜತ ಮಹೋತ್ಸವ ಸಂಭ್ರಮ

ಬೆಳಗಾವಿ– ಬೆಳಗಾವಿಯ ಸಪ್ತಸ್ವರ ಸಂಗೀತ ವಿಧ್ಯಾಲಯವುರಜತ ಮಹೋತ್ಸವ ಸಂಭ್ರಮಕಾರ್ಯಕ್ರಮವು ಸಪ್ತಸ್ವರ ವಿದ್ಯಾರ್ಥಿ ವೃಂದಇವರಿಂದ ನಗರದಐ.ಎಂ.ಇ.ಆರ್ ಸಭಾಗೃಹದಲ್ಲಿಎರಡು ದಿನಗಳ ಕಾಲ ಇದೆಜನೇವರಿ ಶನಿವಾರ 18 ಹಾಗೂ ರವಿವಾರ 19 ರಂದು ಮಧ್ಯಾಹ್ನ 3.30ಕ್ಕೆ ಜರುಗಲಿದೆಎಂದು ವಿದ್ಯಾಲಯದ ಸಂಸ್ಥಾಪಕ ಸಂಚಾಲಕರಾದ ಗಾನ ವಿದುಷಿ ನಿರ್ಮಲಾ ಪ್ರಕಾಶಅಯ್ಯರ ಹೇಳಿದರು.

ಸುದ್ದಿಗೋಷ್ಠಿಯುಲ್ಲಿ ಇಂದು ಮಾತನಾಡಿದಅವರು, ಅಂ–ದು ಬೆಳಗಾವಿ ರಾಣಿಚನ್ನಮ್ಮ ವಿಶ್ವವಿಧ್ಯಾಲಯದ ಕುಲಪತಿಗಳಾದ ಪ್ರೊ.ಸಿ.ಎಂ ತ್ಯಾಗರಾಜಅವರುರಜ–ತ ಮಹೋತ್ಸವಕಾರ್ಯಕ್ರಮವನ್ನುಉ–ದ್ಘಾಟಿಸಲಿದ್ದು.ಧಾರವಾಡದ ಹಿರಿಯ ಸಾಹಿತಿಗಳಾದ ಪ್ರೊ.ರಾಘವೇಂದ್ರ ಪಾಟೀಲ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಜನೇವರಿ 18 ಶನಿವಾರರಂದು ಸಂಗೀತಕಾರ್ಯಕ್ರಮಜರುಗಲಿದ್ದು, ಅಂ–ದು ಚಿಕ್ಕಮಕ್ಕಳಾದ ಸ್ವರಾ, ಹರ್ಷಿಣಿ, ದೇವಿಪಪ್ರಸಾದ, ಸಾನ್ವಿಕಾ ಎಂ, ಅದಿತಿ–ಕುಲಕರ್ಣಿ, ಕೃತ್ತಿಕಾ, ಆರಾಧ್ಯ ಸಿ, ನೀಹಾ–ರಿಕಾ, ವಿನೀತ, ಶ್ರೀನಿಕಾ, ಆದ್ವಿಕ್, ಆದ್ಯಾ, ಅದಿತಿ ಪಿ, ಎಲೈನ್, ಪೂರ್ವಿಎಚ್, ಸೋನಾಕ್ಷಿ, ಪ್ರಾಂಜಲ್, ಪಿ. ವಿವಾನ್–ಎಚ್, ಪ್ರಜ್ವಲ್, ಅನಯ, ಆದ್ಯ ಪಿ, ಆಯುಷ್ಯಾಇವರುಕಾರ್ಯಕ್ರಮ ನೀಡಲಿದ್ದಾರೆ–ಎಂದರು.

ರಾಗ ಪಂಚಮಿ ಕಾರ್ಯಮದಲ್ಲಿ ಗುಂಪು–1 ರಲ್ಲಿ "ರಾಗ ಭೂಪ" ವನ್ನು ಸಿಯಾ.ಚಾರ್ವಿ, ಸ್ತುತಿ, ಮೈತ್ರೇಯಿ, ಖುಷಿ ಕೆ, ತನ್ಮಯ ಪ್ರಸ್ತುತಪಡಿಸುವರು. ಗುಂಪು–2ರಲ್ಲಿ "ರಾಗ ಭೀಮಪಲಾಸ" ವನ್ನುಕವಿತಾ, ಮೇಧಾ ಬಿ, ಗೌರಿ, ಶಿಲ್ಪಾ, ಶ್ರೀಲೇಖಾ, ಈಶಾನಿ ಪ್ರಸ್ತುತಪಡಿಸುವದು. ಗುಂಪು–3ರಲ್ಲಿ "ರಾಗಯಮನ" ವನ್ನು ಲಯ, ಸಾನ್ವಿ ಎಂ, ಪ್ರಾಂಜಲ, ಖುಷಿ, ಸಾಯಿಶ್, ಅಮೂಲ್ಯ, ರೇಣುಕಾ, ಶ್ರಾವಣಿ, ಮಹಾಲಕ್ಷ್ಮಿ ಪ್ರಸ್ತುಪಡಿಸುವದು.ಗುಂಪು–4 ರಲ್ಲಿ "ರಾಗದುರ್ಗಾ" ವನ್ನು ಅನಘಾ,



ಖುಷಿ, ಶ್ರೀವತ್ಸ, ಸಾಂಜನಾಯು, ಮನಸ್ವಿನಿ ಪ್ರಸ್ತುಪಡಿಸುವದು.ಗುಂಪು –5ರಲ್ಲಿ "ರಾಗದೇಸ"ವನ್ನು ಸುಷ್ಮಾ, ಗೀತಾಎಸ್, ಮೇಧಾ ಕೆ, ಸಂಜನಾ, ಅಮೃತಾ, ಪ್ರೋಕ್ಷಾ, ಅಶ್ವಿನಿ ಜೆ, ಪ್ರಸ್ತುಪಡಿಸುವದು.ನಂತರ ಲಘು ಸಂಗೀತಕಾರ್ಯಕ್ರಮಜರುಗಲಿದ್ದು, ಗಝಲ್, ಠುಮ್ರಿ ಮತ್ತು ಸುಗಮ ಸಂಗೀತವನ್ನು ಮೇಘನಾ ಕೆ, ನಿತ್ಯಾ ಶ್ರೀಪತಿ, ಸೃಷ್ಟಿ, ಪೂವಿ ಪ್ರಸ್ತುಪಡಿಸುವದುಎಂದು ಹೇಳಿದರು.

ಖ್ಯಾಲ್‌ಗಾಯನದಲ್ಲಿ "ರಾಗಜೋಗ್" ವನ್ನು ಪೂರ್ವಿಆರ್ ಮತ್ತು ಸೃಷ್ಟಿ ಬಿ ಪ್ರಸ್ತುಪಡಿಸುವುದರೊಂದಿಗೆ ಮೊದಲನೆ ದಿನದಕಾರ್ಯಕ್ರಮ ಮುಕ್ತಾಯವಾಗುವದು.

ಜನೇವರಿ 19 ರಂದುರವಿವಾರ ಬೆಳಿಗ್ಗೆ 10.00 ಗಂಟೆಗೆ ಮತ್ತೆ ಸಂಗೀತ ಕಾರ್ಯಕ್ರಮಗಳು ಪ್ರಾರಂಭವಾಗಲಿದ್ದು, ಖ್ಯಾಲ ಗಾಯನದಲ್ಲಿ "ರಾಗ ಲಲಿತ" ವನ್ನು ಮೇಘನಾ ಕೆ ಮತ್ತು ನಿತ್ಯಾ ಪ್ರಸ್ತುತಪಡಿಸುವದುಎಂದರು.

ಹಿರಿಯ ಸಾಹಿತಿ ಗಳಾದ ಶಿರೀಷ ಜೋಶಿ ಹಾಗೂ ಎಲ್.ಎಸ್.ಶಾಸ್ತ್ರಿ ಮಾತ ನಾಡಿ, ಈ ಸಮಾರಂಭದಲ್ಲಿ ಸಂಗೀತ ಸಂವಾದಕಾರ್ಯಕ್ರಮಜರುಗಲಿದ್ದು, ಕಾರ್ಯಕ್ರಮದಲ್ಲಿ "ಹಿಂದುಸ್ಥಾನಿ ಶಾಸ್ತ್ರಿಯ ಸಂಗೀತದ ಮೂಲಕ, ರಾಗ–ರಸ–ಬಂದಿಶ್‌ಗಳ ನಡುವಿನ ಅವಿಚ್ಚಿನ್ನ ಸಂಬಂಧ ಹಾಗೂ ವಿವಿಧ ಸಂಗೀತ ಶೈಲಿಗಳ ಸ್ವರೂಪ, ಅವುಗಳ ವೈಶಿಷ್ಟ್ಯ, ಮೊದಲಾದ ಅಂಶಗಳನ್ನು ತಾತ್ವಿಕ ಮತ್ತು ಪ್ರಾಯೋಗಿಕವಾಗಿತೆರೆದಿಡುವ ವಿಶಿಷ್ಟ ಕಾರ್ಯಕ್ರಮವನ್ನುತಜ್ಞ ಮಹನೀಯರಾದ ಶ್ರೀಮತಿ ಮಂಜನಬೈಲು, ಎಲ್. ಎಸ್. ಶಾಸ್ತ್ರಿ, ನಂದನ ಹರ್ಲೆಕರ, ಶಿರೀಷ ಜೋಷಿ, ಪಂ.ಮಹೇಶ ಕುಲಕರ್ಣಿ, ನಾರಾಯಣಗಣಾಚಾರಿ, ಯೋಗೇಶ್ ರಾಮದಾಸ್ ನಡೆಸಿಕೊಡಲಿರುವರು ಎಂದು ಹೇಳಿದರು.

ನಂತರ ಸಿಯಾ, ವರ್ಷಾ, ಪೂರ್ಣಿಮಾ, ಸಾನ್ವಿ, ಹರ್ಷಿಣಿ, ಆರಾಧ್ಯಾ ಕೆ. ಪೂರ್ವಿ, ಹರ್ಷಿಣಿ, ಋತ್ವಿಕಾ, ಸುಖಿ, ಸಾನ್ವಿಕಾ, ಸುನೇತ್ರಿ, ಆರುಹಿ, ಸಾನ್ನಿಧ್ಯಾ ಕೆ, ಪೂರ್ವಿ, ಶ್ರಾವ್ಯಾ ಪೂಜಾರಿ ಇವರುಗಳಿಂದ "ಭರತ ನಾಟ್ಯ" ಕಾರ್ಯಕ್ರಮಜರುಗಲಿದ್ದು. ಸ್ತುತಿ, ನೀಹಾರಿಕಾ, ಲಯಾ, ಸಾನ್ವಿ, ಡಾ.ಸುನಿತಾ, ಮಧುರಾ, ರೀತ್, ಶೇಫಾಲಿ ಕ್ಷೀರಸಾಗರ "ಕಥಕ್ ನೃತ್ಯ" ಪ್ರದರ್ಶಿಸಲಿರುವರು.

ಅಂದು ಮಧ್ಯಾಹ್ನಅನಯ, ಲಯ, ಪ್ರಾಂಜಲ, ಖುಷಿ ಕೆ, ಖುಷಿ ಪಿ, ಸಿದ್ಧಾರ್ಥ, ಸೀಮಾ, ಯೋಗೇಶ ಎಂ ಹಾರ್ಮೋನಿಯಂ ವಾದನವನ್ನು ಪ್ರಸ್ತುಪಡಿಸಲಿದ್ದು, ವೇದಾಂತ, ಸುಕೃತ್, ವಿಹಾನ, ವಿವಾನ್, ಸಾನ್ವಿ, ದಿವ್ಯರಂಜ, ವೇದವೃತ, ಶುಕ್ಲಾಂಬರ, ಶ್ರೀಪೂರ್ಣ, ಸಿಂಧು, ದಕ್ಷ, ದೀಕ್ಷಿತ, ಸಮರ್ಥ, ಪ್ರಜ್ವಲ, ವರುಣ, ಪ್ರೇಮ "ತಬಲಾ ವಾದನ" ಪ್ರಸ್ತುತಪಡಿಸುವರು.

ಖ್ಯಾತಗಾಯನದಲ್ಲಿ ಶ್ರೀಪತಿ ದೇವ್‌ರಾಗ್ ಪೂರಿಯಾಕಲ್ಯಾಣ, ನಂತರ ವಿಧುಷಿ ನಿರ್ಮಲಾ ಪ್ರಕಾಶಅಯ್ಯರ್ ಹಾಗೂ ಪಂ.ಮಹೇಶ ಕುಲಕರ್ಣಿ, ಮುಂಬಯಿ ಅವರಿಂದಗಾಯನಕಾರ್ಯಕ್ರಮ ನಡೆಯಲಿದೆಎಂದು ನಿರ್ಮಲಾ ಪ್ರಕಾಶ–ಅಯ್ಯರ್ ಹೇಳಿದರು.

# ಮಾವೇ ಏನು ನಿನ್ನ ಮಾಯೆ

ಮಾವು... ಉಪ್ಪು, ಖಾರ, ಮಸಾಲೆ ಹಾಕಿದರೆ ಉಪ್ಪಿನಕಾಯಿಯಾದೆ. ಒಗ್ಗರಣೆ ಕೊಟ್ಟರೆ ಸಾರಾದೆ. ಒಣ–ಗಿಸಿಟ್ಟರೆ ಬಾಳಕವಾದೆ... ಇದು ಮಾವಿನ ಲೀಲೆ. ರುಚಿಯ ಸ್ವರ್ಗಸುಖ ನೀಡುವ ಈ ಕಾಯಿಯ ಲೋಕದಲ್ಲಿ...

ಮಾವು

**ಮಾವಿನ ವಿಶೇಷ**

ಮಾವು... ಉಪ್ಪು, ಖಾರ, ಮಸಾಲೆ ಹಾಕಿದರೆ ಉಪ್ಪಿನಕಾಯಿಯಾದೆ. ಒಗ್ಗರಣೆ ಕೊಟ್ಟರೆ ಸಾರಾದೆ. ಒಣ–ಗಿಸಿಟ್ಟರೆ ಬಾಳಕವಾದೆ... ಇದು ಮಾವಿನ ಲೀಲೆ. ರುಚಿಯ ಸ್ವರ್ಗಸುಖ ನೀಡುವ ಈ ಕಾಯಿಯ ಲೋಕದಲ್ಲಿ...

**ಮಾಲಿನಿ ಗುರುಪ್ರಸನ್ನ**

ಅದೊಂದು ವೈಭವದ ಮಲೆನಾಡ ಮದುವೆ. ಗಂಡಿನ ಸೋದರಮಾವ ಮೊದಲ ಪಂಕ್ತಿಯ ಊಟದ ಹೊತ್ತಿಗೆ ಓಡಿಬಂದು ನೀರಿಗೆ ಮಾತ್ರ ಲೋಟವಿಟ್ಟಿದೀರಿ, ಅಪ್ಪೆಸಾ–ರಿಗೆಲ್ಲಿ? ಆಗಲೇ ಭಟ್ಟರಿಗೆ ಜ್ಞಾನೋದಯ. ಓಡಿಹೋಗಿ ನಾಲ್ಕು ಮಾವಿನಕಾಯಿ ತರಿಸಿ ಜೀರಿಗೆ ಹಸಿಮೆಣಸಿನೊಡನೆ ರುಬ್ಬಿ ಒಂದು ಕೊಬ್ಬರಿ ಎಣ್ಣೆಯ ಒಗ್ಗರಣೆ ಕೊಟ್ಟು ನೀರು ಸೇರಿಸಿ ಹತ್ತು ನಿಮಿಷದೊಳಗೆ ಅಪ್ಪೆಸಾರು ಎಲ್ಲರ ಮುಂದಿನ ಲೋಟದೊಳಗೆ ರಾರಾಜಿಸಿದ ಮೇಲೆಯೇ ಭಟ್ಟರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದು. ಮಲೆನಾಡಿನ ಮದುವೆಗಳು ಸಂಪನ್ನವಾಗುವುದು ಈ ಅಪ್ಪೆಹುಳಿ / ಅಪ್ಪೆಸಾರಿನ ಘಮ ಉಂಡ ಮೇಲಿನ ತೇಗಿನಲ್ಲಿ ಬಂದಾಗಲೇ.

'ಮಿಡಿಗಳೊಳ್ ನೀ ಚೆಲ್ವನೈ' ಎಂದ ಪಂಪನಿಗೆ ಈ ಮಿಡಿ ಉಪ್ಪಿನಕಾಯಿಯ ಪರಿಚಯವಿತ್ತು ಎಂದು ಕಾಣಿಸುತ್ತದೆ. ಅದೂ ಮರದಲ್ಲಿ ಮೂಡಿದ ಮಿಡಿಗಳ ಚೆಲುವಿನ ಬಗೆಗಿಂತ ಉಪ್ಪಿನಕಾಯಿ ಜಾಡಿಯ ಕೆಂಪುರಸದಲ್ಲಿ ಮಿಂದ ಮಿಡಿಗಳ ಚೆಲುವಿನ ಬಗ್ಗೆ ಹೇಳಿರಬೇಕೆಂಬ ಗುಮಾನಿ ನನ್ನದು.

ಮಾವಿನ ಮರದಲ್ಲಿ ಹೂ ಕಚ್ಚುವಾಗಲೇ ಮನೆಯಲ್ಲಿ ಸಂಭ್ರಮ ಶುರು.. 'ಈ ಸಲ ಒಳ್ಳೆ ಫಸಲು ಅಂತ ಕಾಣುತ್ತೆ.' 'ಬಿಟ್ಟ ಹೂವೆಲ್ಲ ಕಾಯಿ ಕಚ್ಚೇಕಲ್ಲ' 'ಮಿಡಿಗಿಷ್ಟು ತೆಗೆದ ಮೇಲೆ ಎಷ್ಟು ಉಳಿಯುತ್ತೋ' ಹೀಗೆ ಬಗೆಬಗೆಯ ಉದ್ಗಾರ. ಶಿಕಾರಿಪುರದಿಂದ ಶಿರಾಳಕೊಪ್ಪದ ರಸ್ತೆಯುದ್ದಕ್ಕೂ ಘಮಘಮಿಸುವ ಅಪ್ಪೆ ಮಾವಿನ ಮರಗಳು.. ಒಮ್ಮೆ ಆಟಕ್ಕೆ ಹೋಗಿದ್ದ ನನ್ನ ತಮ್ಮ ತುಂಬಿದ ಬಸು–ರಿಯಂತೆ ಮನೆಗೆ ನಿಧಾನವಾಗಿ ಹೆಜ್ಜೆ ಹಾಕುತ್ತ ಬಂದ. ಇನ್‌ಶರ್ಟ್ ಮಾಡಿದ್ದ ಷರಟನ್ನು ಹೊರಗೆಳೆದ ಕೂಡಲೇ ಮನೆ ತುಂಬಾ ಅಪ್ಪೆಮಿಡಿಗಳು ಉರುಳುರುಳಿ ಬಿದ್ದು ನಕ್ಕವು. ಮಾವಿನಮರದಿಂದ ಒಂದಿಷ್ಟು ಮಿಡಿಗಳನ್ನು ಕೊಯ್ದು ನಂತರ ಚೀಲವಿಲ್ಲದೆ ತನ್ನ ಷರಟನ್ನು ನಿಕ್ಕರಿನ ಒಳಗೆ ತೂರಿಸಿ ಶರಟಿನೊಳಗೆ ಎಷ್ಟು ಸಾಧ್ಯವೋ ಅಷ್ಟು ಮಿಡಿಗಳನ್ನು ತುಂಬಿ ತಂದಿದ್ದ. ಅಮ್ಮನಿಗೆ ಗಾಬರಿ, ಸೊನೆ ತಾಕಿದ ಅವನ ಮೈಯ್ಯನ್ನು ತಿಕ್ಕಿ ತೊಳೆದಿದ್ದರು...

**ಉಪ್ಪಿನಕಾಯಿ ಲೋಕ...**

ಪರೀಕ್ಷೆ ಮಾಡಿ ಆರಿಸಿ ತಂದ ಮಿಡಿಯನ್ನು ಮೂಗಿಗೆ ಹಿಡಿದು ಪರಿಮಳ ಹೀರುವ ಸಂಭ್ರಮದಲ್ಲಿ ಮೂಗಿಗೆ ಮಿಡಿಯನ್ನು ತಾಗಿಸಿಕೊಳ್ಳುತ್ತಿದ್ದ ನಮಗೆ ಎಚ್ಚರಿಸಲು 'ಮೂಗೊಳಗೇ ಇಟ್ಕೋಬೇಡ್ರೋ.. ಗಾಯ ಆಗುತ್ತೆ ಸೊನೆ ತಾಗಿದ್ರೆ' ಎಂಬ ಅಮ್ಮನ ಆತಂಕಭರಿತ ಕೂಗು. ತಂದು ಗುಡ್ಡೆ ಹಾಕಿದ ಮಿಡಿಗಳನ್ನು ಆರಿಸುವ ಮತ್ತು ಎಣಿಸುವ ಕೆಲಸಕ್ಕೆ ನಾವೂ ಕೂರುತ್ತಿದ್ದೆವು. ಅಕ್ಕಪಕ್ಕದ ಮನೆಗೆ ಹೇಳಲಿಕ್ಕಾದರೂ ತಂದ ಮಿಡಿ



ಎಷ್ಟಿದೆ ಎಂದು ಎಣಿಸುವ ಚಪಲ ಅಮ್ಮನಿಗೆ ಎಂದು ಅಂದುಕೊಳ್ಳುತ್ತಿದ್ದ ನಮಗೆ ಅದು ಹಾಗಲ್ಲವೆಂದು ಗೊತ್ತಾಗುತ್ತಿದ್ದುದು ಲೆಕ್ಕ ಮುಗಿದ ಮೇಲೆ ತರಬೇಕಾದ ಉಪ್ಪಿನ ಪ್ಯಾಕೆಟ್ ಎಷ್ಟು ಎಂದು ಅಮ್ಮ ಅಣ್ಣನಿಗೆ ಹೇಳಿದ ಮೇಲೇ. ಬಿದ್ದ ಮಿಡಿಗಳು ಅಮ್ಮನ ಸೂಕ್ಷ ?ಮ ಕಣ್ಣಿಗೆ ಗೊತ್ತಾಗಿ ಅವುಗಳನ್ನು ಬದಿಯಲ್ಲಿ ಚಟ್ನಿಗೆ, ಕೊಚ್ಚು ಉಪ್ಪಿನಕಾಯಿಗೆ ಎಂದು ಹೇಳುತ್ತಾ ಎತ್ತಿಡುತ್ತಿದ್ದರು. ಆರಿಸಿದ ಮಿಡಿಗಳನ್ನು ಒಣಬಟ್ಟೆಯಲ್ಲಿ ಒರೆಸಿ, ಉಪ್ಪಿನಲ್ಲಿ ಹಾಕಿಟ್ಟು.. ಸಾಸಿವೆ ತೊಳೆದು ಒಣಗಿಸಿಟ್ಟು, ಅರಿಶಿನ ಪುಡಿ ಮಾಡಿ.. ಅಚ್ಚಖಾರದ ಪುಡಿ ಕುಟ್ಟಿಡುವ ಧಾವಂತಗಳೆಲ್ಲ ಮುಗಿದ ಮೇಲೆ ನೀರೊಡೆದ ಮಿಡಿಯನ್ನು ಬಟ್ಟೆಯ ಮೇಲೆ ಹರವಿ ಆ ನೀರನ್ನು ಕುದಿಸಿ ಬತ್ತಿಸಿ ಮಿಡಿ ಹರವಿದ ರೂಮಿನ ಒಂದು ಮೂಲೆಯಲ್ಲಿ ತಣಿಯಲು ಇಟ್ಟುಬಿಟ್ಟರೆ ಆ ರೂಮಿನಲ್ಲಿ ಎರಡು ದಿನ ಕರ್ಫ್ಯೂ... ನೀರು ತಾಕಬಾರದು, ಥಂಡಿ ಕೈಯ್ಯಲ್ಲಿ ಮುಟ್ಟಬಾರದು. ಉಪ್ಪಿನಕಾಯಿ ಹಾಳಾಗುತ್ತೆ... ನಮ್ಮ ಮೇಲೆ ಹದ್ದಿನಕಣ್ಣು. ನಮಗೋ ಚಟ್ಟಿದ ಮಿಡಿಯನ್ನು ತಿನ್ನುವ ಆಸೆಯಿದ್ದರೂ ತಿನ್ನಲಾಗದ ಸಂಕಟ. ಬ್ಯಾಡಗಿಮೆಣಸು ಬಿಸಿಲಲ್ಲಿ ಒಣಗಿ ಪುಡಿಯಾಗಿ ಎಲ್ಲವನ್ನೂ ಒಟ್ಟಿಗೆ ಕಲೆಸಿ ಜಾಡಿಗೆ ತುಂಬುವಾಗ ಅಮ್ಮನ ಮುಖದಲ್ಲೊಂದು ಸಂತೃಪ್ತ ಹೆಮ್ಮೆ. ತೊಳೆದರೂ ಬಣ್ಣ ಹೋಗದ ಕಲೆಸಿದ ಕೈಯ್ಯನ್ನು ಪದೇ ಪದೇ ನೋಡಿಕೊಳ್ಳುತ್ತಾ ಈ ಸಲ ಒಳ್ಳೆ ಬಣ್ಣ ಉಪ್ಪಿನಕಾಯಿಯದು ಅಲ್ವೇನ್ರಿ ಎಂದು ಪ್ರತಿವರ್ಷವೂ ಕೇಳುತ್ತಿದ್ದುದು ಈಗಲೂ ಕಿವಿಯಲ್ಲಿ ..

ಮಿಡಿ ಹಾಕುವ ಮಧ್ಯದಲ್ಲೇ ಕೊಚ್ಚು ಉಪ್ಪಿನಕಾಯಿಯದೂ ಸಡಗರ. ಕೊಚ್ಚು ಉಪ್ಪಿನಕಾಯಿಗೆ ಬಹಳ ದಿನ ಬಾಳುವ ಆಯಸ್ಸಿಲ್ಲ. ಇರುವ ಎಷ್ಟೋ ಇಷ್ಟೋ ಆಯಸ್ಸನ್ನೂ ನಾವು ನುಂಗಿ ನೀರು ಕುಡಿಯುತ್ತಿದ್ದೆವು. ಸಣ್ಣಗೆ ಮಿಡಿಗಾಯಿ ಕೊಚ್ಚಿ ಪುಡಿ ಉಪ್ಪನ್ನು ತುಸು ಹುರಿದು ತಣಿಸಿ, ಸಾಸಿವೆ, ಒಂದೆರಡು ಕಾಳು ಜೀ–ರಿಗೆ, ತುಸು ಮೆಂತ್ಯೆ, ಇಂಗು ಹುರಿದು ಹಸಿಸಾಸಿವೆಯನ್ನೂ ಸೇರಿಸಿ ಪುಡಿಮಾಡಿ ಅಚ್ಚಕಾರದ ಪುಡಿಯೊಟ್ಟಿಗೆ ಎಲ್ಲವನ್ನೂ ಸೇರಿಸಿ ಇಂಗು ಕಾಸಿ ಹಾಕಿ ಬೆಳಗ್ಗೆ ಕಲೆಸಿಟ್ಟರೆ ರಾತ್ರಿ ಊಟಕ್ಕೆ ಯಾರಾದರೂ ಸಾರು, ಹುಳಿ ಮುಟ್ಟಿದರೆ ಉಪ್ಪಿನಕಾಯಿಯಾಣೆ. ಬಿಸಿ ಬಿಸಿ ಅನ್ನಕ್ಕೆ ಒಂದೆರಡು ಚಮಚ ಕೊಚ್ಚುಪ್ಪಿನಕಾಯಿ ಹಾಕಿ, ಮೇಲೆಣ್ಣೆ ಬೆರೆಸಿ ಉಣ್ಣುತ್ತಾ ಕೂತರೆ ಸ್ವರ್ಗಕ್ಕೆ ಕಿಚ್ಚು ಬಿದ್ದ ಹಾಗೆ .

**ಚಟ್ನಿಯಿಂದ ಗೊಜ್ಜಿನವರೆಗೆ...**

ಬೆಳಗ್ಗೆ ಮಾಡುವ ಇಡ್ಲಿಗೂ ಮಾವಿಕಾಯಿ ಚಟ್ನಿಯೇ ಬೇಕು. ಆ ಚಟ್ನಿ ಮಧ್ಯಾಹ್ನ ಅನ್ನಕ್ಕೂ ಸಾಕು. ಈ ಕೊಚ್ಚುಪ್ಪಿನಕಾಯಿ ಮುಗಿಯುವ ಹೊತ್ತಿಗೆ ಹೋಳು ಉಪ್ಪಿನಕಾಯಿಯ ಸಡಗರ. ಸಿಪ್ಪೆ ಬೇಗ ಕರಗದ ಮಾವಿನಕಾಯಿ ಆರಿಸಿ ತಂದು ಅದನ್ನು ಹೆಚ್ಚಿ ಉಪ್ಪಿನಕಾಯಿ ಹಾಕಿಟ್ಟರೆ ಮೂರ್ನಾಲ್ಕು ತಿಂಗಳಿಗೆ ಯೋಚನೆಯಿಲ್ಲ.

ಹೇಳಿಕೇಳಿ ಏಪ್ರಿಲ್, ಮೇ ತಿಂಗಳಿನಲ್ಲಿ ಸಮಾರಂಭಗಳು ಹೆಚ್ಚು. ಮಧ್ಯಾಹ್ನ ಕಂಠಬಿರಿ ಉಂಡು ಉಸ್ಸಪ್ಪಾ ಅರಗಿಲ್ಲ ಇನ್ನೂ, ಯಾರಿಗೆ ಬೇಕು ಊಟ ಎಂದು ಅಡ್ಡಾಗುವವರೇ ಎಲ್ಲರೂ..ಆಗ ಅಮ್ಮನಿಗೆ ಏನು ಮಾಡಬೇಕೆಂದು ಚೆನ್ನಾಗಿ ಗೊತ್ತು. ಎರಡು ಮಾವಿನಕಾಯಿ ನೀರಲಿ ಬೇಯಿಸಿ ಕೊಬ್ಬರಿಎಣ್ಣೆ ಬಾಣಲೆಗೆ ಹಾಕಿ ಸಾಸಿವೆ, ಜೀರಿಗೆ, ಮೆಂತ್ಯ ಒಗ್ಗರಿಸಿ ಅರಿಸಿನ, ಹಸಿಮೆಣಸಿನಕಾಯಿಯ ಜೊತೆ ಜೀರಿಗೆ ಮೆಣಸನ್ನೂ ಅದಕ್ಕೆ ಹಾಕಿ ಬೇಯಿಸಿ ಕಿವುಚಿಟ್ಟ ಮಾವಿನರಸವನ್ನು ಅದಕ್ಕೆ ಹಾಕಿ ಕುದಿಸಿಟ್ಟು ಊಟಕ್ಕೆ ಬನ್ರೋ ಎಂದು ಅಮ್ಮ ಕೂಗು ಹಾಕಿದರೆ 'ಈ ಊಟ ಅನ್ನೋದನ್ನು ಕಂಡು ಹಿಡಿದವನನ್ನು ಗುಂಡಿಟ್ಟು ಸಾಯಿಸ್ಬೇಕು' ಎಂದು ಗೊಣಗುತ್ತಾ ಕುಳಿತವರ ತಟ್ಟೆಯ ಅನ್ನದ ಮೇಲೆ ಬಿಸಿ ಮಾವಿನಕಾಯಿ ಗೊಜ್ಜು ಬೀಳಬೇಕು. ಜೊತೆಗಿಷ್ಟು ಕೊಬ್ಬರಿ ಎಣ್ಣೆ , ಪಕ್ಕದಲ್ಲಿ ಕರಿದ ಬಾಳಕ.. 'ಯಾಕಿಷ್ಟು ಕಡಿಮೆ ಅನ್ನ ಮಾಡಿದ್ದು. ಗೊಜ್ಜು ಮಾಡಿದ ದಿನ ಎರಡು ಹೊಟ್ಟೆ ಅಂತ ಗೊತ್ತಿಲ್ವಾ ' ಎಂದು ಗೊಣಗಾಡುತ್ತಾ ಏಳದಿದ್ದರೆ ಅದು ಮಾವಿನಕಾಯಿ ಗೊಜ್ಜೆ ಅಲ್ಲ...

ಮೊದಲೇ ಪಿತ್ತ. ಅದರ ಜೊತೆ ಮಾವಿನಕಾಯಿ ತಿನ್ನುವುದು ಬಿಡಲಾಗದ ಸೆಳೆತ. ಹೆಚ್ಚಿಟ್ಟ ತೋತಾಪುರಿ ಮಾವಿನಕಾಯಿಗೆ ಉಪ್ಪು ಖಾರ ಹಾಕಿ ಮನಸೋ ಇಚ್ಛೆ ತಿಂದ ಮೇಲೆ ಅದಕ್ಕೆ ಔಷದ ಮಾಡದಿದ್ದರೆ ಹೇಗೆ? ಬಾಯಿ ರುಚಿ ತಣಿದ ಮೇಲೆ ಚುರುಗುಟ್ಟುವ ನಾಲಗೆಯ ಹಿತವಾದ ಉರಿ ಕಡಿಮೆಯಾದ ಮೇಲೆ ಒಂದಿಷ್ಟು ಬೆಲ್ಲ ಬಾಯೊಳಗೆ ಬಿದ್ದರೆ ಪಿತ್ತದ ಯೋಚನೆಯಿಲ್ಲದೆ ಮರುದಿನಕ್ಕೂ ಮಾವಿನಕಾಯಿಯ ಮೇಲೆ ಧಾಳಿ.

ತಂದ ತೋತಾಪುರಿ ಕಾಯಿ ನಾವು ತಿನ್ನುವ ಹೊಡೆತ ನೋಡಿ ಅಮ್ಮನಿಗೆ ಹೆದರಿಕೆಯಾಗುತ್ತಿತ್ತಾ ಗೊತ್ತಿಲ್ಲ. ಅವರು ತಂದ ಎರಡು ಕಾಯಿಯನ್ನು ಸಿಪ್ಪೆ ತೆಗೆದು ಸಣ್ಣಕೆ ಹೆಚ್ಚಿ, ಬೆಲ್ಲ, ಚಿಟಿಕೆ ಉಪ್ಪಿನಲ್ಲಿ ಒಂದೆರಡು ಗಂಟೆ ನೆನೆಸಿಟ್ಟು ಉದ್ದಿನಬೇಳೆ, ಇಂಗು, ಒಣಮೆಣಸು, ಕರಿಬೇವು ಹುರಿದು ತೆಂಗಿನಕಾಯಿಯೊಟ್ಟಿಗೆ ಹಾಕಿ ರುಬ್ಬಿ ನೆನೆಸಿಟ್ಟ ಹೋಳುಗಳ ಜೊತೆ ಉಪ್ಪು ಸೇರಿಸಿ ಬೆರೆಸಿ, ಮೇಲೆ ತೆಂಗಿನೆಣ್ಣೆಯ ಸಾಸಿವೆ, ಉದ್ದಿನಬೇಳೆ, ಒಣಮೆಣಸಿನಕಾಯಿ, ಕರಿಬೇವಿನ ಒಗ್ಗರಣೆ ಕೊಟ್ಟು ಊಟಕ್ಕೆ ಕೂಡಿಸಿದರೆ ಬೇಸಿಗೆ ಕಳೆಯುವಾಗ ಒಂದೆರಡು ಕೇಜಿಯಾದರೂ ತೂಕ ಹೆಚ್ಚಾಗದಿದ್ದರೆ ಮಾವಿನಕಾಯಿಗೇ ಆಶ್ಚರ್ಯ..

ಇದಿಷ್ಟರ ಮಧ್ಯೆ ಮತ್ತೊಂದು ಬಾಯಿಚಪಲ, ಕಡಿಗಾಯಿ ಉಪ್ಪಿನಕಾಯಿ ಹಾಕುವ ಚಟ.. ಅದರ ಮುಂದೆ ಅಡುಗೆ ಮನೆಯ ಮೆಟ್ಟುಗತ್ತಿಯ ಆಟ ನಡೆಯುತ್ತಿರಲಿಲ್ಲ. ಕತ್ತಿಯಲ್ಲಿ ಕೊಚ್ಚಿ ಕೊಚ್ಚಿ ಹಾಕುವ ಕಾಯಿಯ ಹೋಳುಗಳು ಅತ್ತಿತ್ತ ಸಿಡಿವುದನ್ನು ನೋಡುವುದೇ ಸೊಗಸು.

ಆರಿಸಿ ತಂದ ಬಳ್ಳಿ ಮೆಣಸಿನಕಾಯಿ ಸೀಳಿ ಮಜ್ಜಿಗೆಯಲ್ಲಿ ನೆನೆಸುವಾಗ ಮಾವಿನಕಾಯಿಯ ಚಿಪ್ಸಿಗೆ ಹೆಚ್ಚುವಷ್ಟು ತೆಳುವಾಗಿ ಬಿಲ್ಲೆಗಳನ್ನು ಕತ್ತರಿಸಿ ಮಜ್ಜಿಗೆಯೊಟ್ಟಿಗೆ ಸೇರಿಸಿ, ಉದ್ದು, ಕೊತ್ತಂಬರಿ ಬೀಜ ಜೀರಿಗೆ, ಮೆಂತ್ಯೆ, ಇಂಗು, ಪುಡಿಮಾಡಿ ಹಾಕಿ ಕಲೆಸಿ ನೆನೆಸಿ ಬಿಸಿಲಲ್ಲಿ ಒಣಗಿಸಿ ಡಬ್ಬಿಯಲ್ಲಿಟ್ಟರೆ ವರ್ಷವಿಡೀ ಘಮಘಮಿಸುವ ಬಾಳಕ ಬೇಕೆಂದ ಕೂಡಲೇ ಕರಿಯಲು ಸಿದ್ಧ . ಮಾವಿನ ಕಾಯಿಯ ಹುಳಿ ಮೆಣಸಿನೊಟ್ಟಿಗೆ ಸೇರಿ ಮೆಣಸಿನ ಖಾರ ಮಾವಿನ ಬಿಲ್ಲೆ ಹೀರಿ ಅದೂ ಒಂದು ವಿಶಿಷ್ಟ ಬಾಳಕವಾಗುವ ಕೊಡುಕೊಟ್ಟುಕೊಳ್ಳುವಿಕೆ ದಂಗುಬಡಿಸುತ್ತದೆ . ಜೊತೆಗೆ ನೆನೆಸಿಟ್ಟ ಉದ್ದನ್ನು ಜೀರಿಗೆ ಮೆಣಸು, ಮಾವಿನಕಾಯಿಯ ಜೊತೆ ಸೇರಿಸಿ ರುಬ್ಬಿ ಸಂಡಿಗೆಯಿಟ್ಟರೆ ಸಾರು ಸುರಿದುಣ್ಣುವಾಗಿನ ಬೆಡಗಿಗೆ ಸಡಗರದ ಜೊತೆ.

ಪುಟ್ಟ ಪುಟ್ಟ ಕಾಟುಮಾವಿನ ಹಣ್ಣನ್ನು ಚಿಟಿಕೆ ಉಪ್ಪು, ಬೆಲ್ಲದಲ್ಲಿ ನೆನೆಸಿ ತೆಂಗಿನಕಾಯಿ ಸಾಸಿವೆ ಹಸಿಮೆಣಸಿನ ಜೊತೆ ಅರೆದು ಸೇರಿಸಿ ಒಗ್ಗರಿಸಿ ಉಂಡರೆ ಬಾಳೆಲೆಯ ತುದಿಯಲ್ಲಿ ಚೀಪಿಟ್ಟ ಗೊರಟುಗಳ ಸಂತೆ.

ಜೋಪಾನವಾಗಿ ತಳಪಾಯ ಹಾಕಿದಂತೆ ಹಾಕಿಟ್ಟ ಮಿಡಿ ಉಪ್ಪಿನಕಾಯಿಯದು ದೀರ್ಘ ಬಾಳಿಕೆ .. ಹದಾ ಮಧ್ಯಮದ್ದು ಹದಾ ಬಾಳಿಕೆ.. ಹಣ್ಣಾದ ಸಿಹಿ ಮಾವು ಆ ಹೊತ್ತಿಗೆ. ಮಾವಿನ ಬಗೆ ಬಗೆ ಬದುಕಿಗೆ ವೈವಿಧ್ಯ ತರಲಿ.. ಬಾಯಿ ಹಸನಾಗಲಿ.





## ಋತುಚಕ್ರ ಸಂದರ್ಭ ಯೋನಿ ತುರಿಕೆಗೆ ಕಾರಣಗಳೇನು? ಈ ಬಗ್ಗೆ ವೈದ್ಯರು ಏನು ಹೇಳುತ್ತಾರೆ



ಋತುಚಕ್ರ ಸಂದರ್ಭದಲ್ಲಿ ಮಹಿಳೆಯರಿಗೆ ಯೋನಿಯ ಸುತ್ತಲು ತುರಿಕೆ ಉಂಟಾಗುವುದು. ಇದು ಕೆಲವು ಸಂದರ್ಭದಲ್ಲಿ ತೀವ್ರ ಸ್ವರೂಪ ಪಡೆಯಬಹುದು. ಇದು ಯಾವ ಕಾರಣ–ಕ್ಕಾಗಿ ಬರುವುದು ಎನ್ನುವುದರ ಬಗ್ಗೆ ಸ್ತ್ರೀರೋಗ ತಜ್ಞರೊಬ್ಬರು ಮಾಹಿತಿ ಹಂಚಿಕೊಂಡಿದ್ದಾರೆ.

ಸ್ತ್ರೀಯರಿಗೆ ಪ್ರತೀ ತಿಂಗಳು ಋತುಚಕ್ರದ ಸಂದರ್ಭದಲ್ಲಿ ಹಲವಾರು ರೀತಿಯ ಸಮಸ್ಯೆಗಳು ಕಾಣಿಸಿಕೊಳ್ಳುವುದು ಸಹಜ. ಕೆಲವರಲ್ಲಿ ತಲೆನೋವು ಕಂಡುಬಂದರೆ, ಇನ್ನು ಕೆಲವರಿಗೆ ಅತಿ ಯಾದ ಹೊಟ್ಟೆನೋವು ಇರುವುದು. ಮನಸ್ಥಿತಿ ಬದಲಾವಣೆ ಎನ್ನುವುದು ಸಹಜ ಕೂಡ. ಆದರೆ ಹೆಚ್ಚಿನ ಮಹಿಳೆಯರಲ್ಲಿ ಯೋನಿ ಭಾಗದಲ್ಲಿ ತುರಿಕೆಯು ಕಂಡುಬರುವುದು. ಇದು ಋತುಚಕ್ರದ ಭಾಗದಲ್ಲಿ ತೀವ್ರ ಸ್ವರೂಪದಲ್ಲಿ ಇರುವುದು. ಇದು ತುಂಬಾ ಕಿರಿಕಿರಿ ಉಂಟು ಮಾಡುವುದು ಮಾತ್ರವಲ್ಲದೆ, ಮುಜುಗರಕ್ಕೆ ಕಾರಣವಾಗಬಲ್ಲದು. ಇಂತಹ ಸಮಯದಲ್ಲಿ ಏನು ಮಾಡಬೇಕೆಂದು ತೋಚದು. ಆದರೆ ಯೋನಿ ತುರಿಕೆಗೆ ಕಾರಣಗಳು ಏನು ಎನ್ನುವುದನ್ನು ಪತ್ತೆ ಮಾಡಿಕೊಂಡರೆ, ಆಗ ಅದಕ್ಕೆ ಪರಿಹಾರ ಕಂಡುಕೊಳ್ಳುವುದು ಸುಲಭವಾಗಲಿದೆ. ಸ್ತ್ರೀರೋಗ ತಜ್ಞೆಯಾಗಿರುವ ಡಾ. ಅರುಂಧತಿ ಧರ್ ಅವರು ಈ ಬಗ್ಗೆ ಮಾಹಿತಿಯನ್ನು ಹಂಚಿಕೊಂಡಿದ್ದಾರೆ.

**ಹಳೆ ರಕ್ತ ಹೊರಹೋಗುವುದು**

ತುರಿಕೆ ಕಾಣಿಸಿಕೊಳ್ಳಲು ಪ್ರಮುಖ ಕಾರಣವೆಂದರೆ ಹಳೆದಯ ರಕ್ತವು ಹೊರಹೋಗುವುದು. ಇದ–ರಿಂದಾಗಿ ಕಿರಿಕಿರಿ ಆಗುವುದು. ಋತುಚಕ್ರದ ಅಂತ್ಯದಲ್ಲಿ ಇದ್ದರೆ ಆಗ ಇದು ಹೆಚ್ಚಾಗಿರುವುದು.

**ಅತಿಯಾದ ಉರಿಯೂತ**


ಯೋನಿ ಭಾಗದಲ್ಲಿ ಅತಿಯಾದ ತು–ರಿಕೆ ಉಂಟಾಗಲು ಮತ್ತೊಂದು ಕಾರಣವೆಂದರೆ ಉರಿಯೂತ. ಋತುಚಕ್ರದ ಸಂದರ್ಭದಲ್ಲಿ ದೇಹದಲ್ಲಿ ಅತಿಯಾದ ಉರಿಯೂತ ಉಂಟಾಗುವ ಕಾರಣದಿಂದಾಗಿ ತುರಿಕೆ ಹೆಚ್ಚಾಗುವುದು.

**ಯೀಸ್ಟ್ ಸೋಂಕು**

ಯೀಸ್ಟ್ ಅಥವಾ ಬ್ಯಾಕ್ಟೀರಿಯಾವು ಅತಿಯಾಗಿ ಬೆಳವಣಿಗೆ ಆಗುವ ಕಾರಣದಿಂದಾಗಿ ಯೀಸ್ಟ್ ಸೋಂಕು ಅಥವಾ ಬ್ಯಾಕ್ಟೀರಿಯಾ ಸೋಂಕು ಉಂಟಾಗಬಹುದು. ಬ್ಯಾಕ್ಟೀರಿಯಾ ಸೋಂಕಿನಿಂದಾಗಿ ಹೀಗೆ ಆಗುತ್ತಿದೆ ಎಂದು ನಿಮಗನಿಸಿದರೆ, ಆಗ ವೈದ್ಯರನ್ನು ಭೇಟಿ ಮಾಡಿ. ಋತುಚಕ್ರದ ಸಂದರ್ಭದಲ್ಲೇ ಪರೀಕ್ಷೆ ಮಾಡಿಸಿಕೊಳ್ಳಬಹುದು. ಫಲಿತಾಂಶವು ಪಾಸಿಟಿವ್ ಆಗಿದ್ದರೆ ಆಗ ವೈದ್ಯರು ಕೆಲವು ಔಷಧಿಗಳನ್ನು ಸೂಚಿಸ ಬಹುದು. ನೆಗೆಟಿವ್ ಆಗಿದ್ದರೆ ಆಗ ಕೆಲವು ಕ್ರೀಮ್ ಗಳನ್ನು ಹಚ್ಚಿಕೊಂಡರೂ ತುರಿಕೆ ಕಡಿಮೆ ಆಗುವುದು.

**ಪ್ಯಾಡ್ ನಿಂದಾಗಿ ಅಲರ್ಜಿ**

ಋತುಚಕ್ರದ ಸಂದರ್ಭದಲ್ಲಿ ಯೋನಿ ಭಾಗದಲ್ಲಿ ತುರಿಕೆಯು ಉಂಟಾಗುವುದು. ಪ್ಯಾಡ್ ಧರಿಸಿದ ವೇಳೆ ನಿಮಗೆ ಅಲರ್ಜಿ ಉಂಟಾಗಿ ಅದರಿಂದ ತು–ರಿಕೆ ಕಾಣಿಸುತ್ತಿದ್ದರೆ ಆಗ ಸುಗಂಧವಿಲ್ಲದ ಪ್ಯಾಡ್ ಬಳಕೆ ಮಾಡಿನೋಡಿ. ತುರಿಕೆಯು ಹಾಗೆ ಇದ್ದರೆ ನೀವು ವೈದ್ಯರನ್ನು ಭೇಟಿ ಮಾಡುವುದೇ ಲೇಸು.



## ನಿಮಗೆ ಗೊತ್ತಿರಲಿ ಆಗಾಗ ವಾಕರಿಕೆ- ವಾಂತಿ ಸಮಸ್ಯೆಯೂ ಕೂಡ ಹೃದಯಾಘಾತದ ಲಕ್ಷಣಗಳು!

ಈ ಲಕ್ಷಣಗಳು ಕಂಡುಬಂದರೆ ಆಗ ಅದನ್ನು ಸಾಮಾನ್ಯ ಸಮಸ್ಯೆಗಳೆಂದು ಕಡೆಗಣಿಸಿದರೆ, ಆಗ ಖಂಡಿತವಾಗಿಯೂ ಜೀವಕ್ಕೆ ಆಪತ್ತು ಕಾಡಬಹುದು. ಇದರ ಬಗ್ಗೆ ತುಂಬಾ ಎಚ್ಚರಿಕೆ ವಹಿಸುವುದು ಅಗತ್ಯ! ಯಾಕೆಂದ್ರೆ ನೋಡಲು ಸಣ್ಣ ಕಾಯಿಲೆಗಳ ಲಕ್ಷಣಗಳು ಎಂದು ಅನಿಸಿದರೂ, ಮುಂದೆ ಪ್ರಾಣ–ಕ್ಕೆ ಅಪಾಯ ತಂದೊಡ್ಡುವ ಅಪಾಯ ಹೆಚ್ಚಿರುತ್ತದೆ! ಯಾಕೆಂದ್ರೆ ಇವೆಲ್ಲಾ ಲಕ್ಷಣಗಳು ಹೃದಯಘಾತದ ಪ್ರಮುಖ ಲಕ್ಷಣಗಳು


ಮುಂಬಯಿಯಲ್ಲಿ ಕಿರುತೆರೆ ನಟ–ರೊಬ್ಬರು ರಾತ್ರಿ ಊಟದ ಬಳಿಕ ವಾಂತಿ ಮಾಡಿಕೊಂಡು, ಬಳಿಕ ಇದು ಫುಡ್ ಪಾಯ್ಸನ್ ಆಗಿರಬಹುದೆಂದು ಸಾಮಾನ್ಯ ಔಷಧಿ ತೆಗೆದುಕೊಂಡು ಮಲಗಿದರು. ಆದರೆ ಅವರು ಹೃದಯಾಘಾತದಿಂದ ಮೃತಪಟ್ಟಿರುವುದು ತಿಳಿದುಬಂದಿದೆ. ವಾಂತಿ ಕೂಡ ಹೃದಯಾಘಾತದ ಲಕ್ಷಣವೆಂದು ಹೇಳಲಾಗಿದೆ. ಹೆಚ್ಚಿನ ಜನರಿಗೆ ಈ ಬಗ್ಗೆ ತಿಳಿದೇ ಇಲ್ಲ. ಯಾಕೆಂದರೆ ಹೃದಯಾಘಾತವೆಂದರೆ ಎದೆನೋವು ಎಂದೇ ಭಾವಿಸುವರು. ಆದರೆ ಇನ್ನು ಕೆಲವು ಲಕ್ಷಣಗಳು ಇವೆ ಎನ್ನುವುದು ತಿಳಿದಿಲ್ಲ. ಇದರಲ್ಲಿ ವಾಕ–ರಿಕೆ ಮತ್ತು ವಾಂತಿ ಕೂಡ ಸೇರಿದೆ.


ನವದೆಹಲಿಯ ಅಪೊಲೊ ಆಸ್ಪತ್ರೆಯ ಸೀನಿಯರ್ ಇಂಟ–ರ್‌ವೆನ್ಸನಲ್ ಕಾರ್ಡಿಯಾಲಿಜಿಸ್ಟ್ ಪ್ರೊ. ಡಾ. ವಿವೇಕ್ ಗುಪ್ತಾ ಅವರು ಹೃದಯಾಘಾತದ ಕೆಲವು ಲಕ್ಷಣಗಳನ್ನು ತಿಳಿದುಕೊಂಡು ಅದಕ್ಕೆ ತಕ್ಷಣವೇ ಪ್ರತಿಕ್ರಿಯಿಸುವುದು ಅತೀ ಅಗತ್ಯ ಎಂದು ಹೇಳಿದ್ದಾರೆ.

**ಹೃದಯಾಘಾತದಲ್ಲಿ ವಾಕರಿಕೆ ಪಾತ್ರದ ಬಗ್ಗೆ ವೈದ್ಯರ ವಿವರಣೆ**

ಹೃದಯಾಘಾತದ ಸಂದರ್ಭದಲ್ಲಿ ವಾಂತಿ ತಮ್ಮು ವಾಕರಿಕೆ ಕಂಡು ಬರುವುದು ಎಂದು ಪ್ರೊ. ಡಾ. ವಿವೇಕ್ ಗುಪ್ತಾ ಅವರು ಹೇಳಿದ್ದಾರೆ. ಕೆಲವು ಇದನ್ನು ಹೊಟ್ಟೆ, ಗ್ಯಾಸ್ಟ್ರಿಕ್ ಸಮಸ್ಯೆ ಎಂದು ಭಾವಿಸುವರು. ಆದರೆ ಇದು ಹೃದಯದ ಸಮಸ್ಯೆಯಾಗಿರುವುದು. ವಾಕರಿಕೆ ಬಳಿಕ ವಾಂತಿ ಬಂದರೆ ಆಗ ಇದು ಹೃದಯಾಘಾತದ ಲಕ್ಷಣವಾಗಿದೆ ಎಂದು ಅವರು ಎಚ್ಚರಿಸಿದ್ದಾರೆ.

ಹೆಚ್ಚಿನವರು ಇದನ್ನು ಹೊಟ್ಟೆಯ ಸಮಸ್ಯೆ ಅಥವಾ ಅಜೀರ್ಣ ಸಮಸ್ಯೆ ಎಂದು ತಪ್ಪಾಗಿ ಅರ್ಥೈಸಿಕೊಳ್ಳುವರು. ಆದರೆ ನಿಜವಾ ಗಿಯೂ ಇದು ಹೃದಯದ ಸಮಸ್ಯೆ. ಕೆಳಗಿನ






ಭಾಗದ ಮಯೊ ಕಾರ್ಡಿಯಲ್ ನಿಂದ ಇದು ಬಂದರೆ ಆಗ ಇದು ಹೃದಯದ ಕೆಳಭಾಗದಿಂದ ಬರುವ ಹೃದಯಾಘಾತದ ಲಕ್ಷಣವಾಗಿದೆ. ಇದನ್ನು ಸಾಮಾನ್ಯವಾಗಿ ಅಜೀರ್ಣದ ಸಮಸ್ಯೆ ಎಂದು ತಿಳಿಯಲಾಗುತ್ತದೆ.?

**ಜನರು ಕಡೆಗಣಿಸುವ ಇತರ ಕೆಲವು ಸಮಸ್ಯೆಗಳು ಯಾವುದು?**

ತೀವ್ರ ರೀತಿಯ ಎದೆ ನೋವು ಹೃದಯಾಘಾತದ ಲಕ್ಷಣವೆಂದು ತಿಳಿಯಲಾಗುತ್ತದೆ ಆದ–'ರೆ ಕೆಲವು ಲಕ್ಷಣಗಳನ್ನು ಜನರು ಕಡೆಗಣಿಸುವರು ಎಂದು ಡಾ. ಗುಪ್ತಾ ಅವರು ತಿಳಿಸಿದ್ದಾರೆ. ಈ ಲಕ್ಷಣಗಳನ್ನು ಅರ್ಥ ಮಾಡಿಕೊಂಡರೆ ಆಗ ಬೇಗನೆ ವೈದ್ಯಕೀಯ ನೆರವು ಪಡೆಯಬಹುದಾಗಿದೆ.

ಅತಿಯಾಗಿ ಬೆವರು: ಎದೆನೋವಿಲ್ಲದೆ ಅತಿಯಾಗಿ ಬೆವರುತ್ತಲಿದ್ದರೆ, ಆಗ ಇದು ಹೃದಯದ ಸಮಸ್ಯೆಯ ಲಕ್ಷಣವಾಗಿರಬಹುದು. ಕೆಲವರು ಇದನ್ನು ಕಡೆಗಣಿಸುವರು. ಆದ–'ರೆ ಇದು ಕೂಡ ಹೃದಯ ಸಮಸ್ಯೆಯ ಲಕ್ಷಣವಾಗಿದೆ.


ದವಡೆ ನೋವು: ದವಡೆಯಲ್ಲಿ ಕಾಣಿಸಿಕೊಂಡಿರುವ ನೋವನ್ನು ಸಾಮಾನ್ಯವಾಗಿ ದಂತ ಸಮಸ್ಯೆ ಎಂದು ತಪ್ಪಾಗಿ ಅರ್ಥ ಮಾಡಲಾ ಗುತ್ತದೆ. ಆದರೆ ಇದು ಕೂಡ ಅಂಜಿನಾ ಅಥವಾ ಹೃದಯಾಘಾತದ ಲಕ್ಷಣವಾಗಿದೆ. ದಂತ ಸಮಸ್ಯೆಯೆಂದು ವೈದ್ಯರಲ್ಲಿ ಭೇಟಿ ನೀಡಿದ ಬಳಿಕ ಅವರಿಗೆ ಇದು ಹೃದಯದ ಸಮಸ್ಯೆ ಎಂದು ತಿಳಿದು ಬರುವುದು.



**ಬೆನ್ನು ನೋವು**

ಬೆನ್ನು ಹು–ರಿಯಲ್ಲಿ ಅಹಿತಕರದೊಂದಿಗೆ ಬೆನ್ನು ನೋವು ಕಾಣಿಸಿಕೊಳ್ಳ ಬಹುದು. ಈ ಲಕ್ಷಣವು ಎದೆನೋವಿನ ಯಾವುದೇ ಲಕ್ಷಣವಿಲ್ಲದೆ ಕಾಣಿಸಿಕೊಳ್ಳಬಹುದು. ಇದಕ್ಕೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ಪಡೆಯದಿದ್ದರೆ, ಅಪಾಯಕಾರಿ ಆಗಬಹುದು.

ವಾಕರಿಕೆ ಮತ್ತು ವಾಂತಿ: ಜಠರಕರುಳಿನ ಈ ಸಮಸ್ಯೆಯು ಹೃದಯದ ಸಮಸ್ಯೆಯಾಗಿರುವುದು. ಅದರಲ್ಲೂ ಮಹಿಳೆಯರಲ್ಲಿ ಇದು ಹೆಚ್ಚು. ಇದು ಸಾಮಾನ್ಯ ವಾಕರಿಕೆ ಅಥ–'ವಾ ವಾಂತಿ ಎಂದು ಕಡೆಸಲಾಗುತ್ತದೆ.



ಉಸಿರಾಟದ ತೊಂದರೆ: ಉಸಿರಾಡಲು ಕಷ್ಟಪಡುವುದು ಅಥವಾ ಉಸಿರುಕಟ್ಟಿದಂತೆ ಆಗುವುದು ಕೂಡ ಹೃದಯಾಘಾತದ ಲಕ್ಷಣವಾಗಿದೆ. ಇದು ಸಾಮಾನ್ಯವಾಗಿ ಇತರ ಕೆಲವು ಲಕ್ಷಣಗಳೊಂದಿಗೆ ಕಾಣಿಸುವುದು.

ಅಸಾಮಾನ್ಯ ಬಳಲಿಕೆ: ಹಠಾತ್ ಅಥವಾ ಅಸಾಮಾನ್ಯ ಬಳಲಿಕೆ ಅಥ–'ವಾ ನಿಶ್ಯಕ್ತಿಯು ಕೂಡ ಹೃದಯದ ಸಮಸ್ಯೆಯ ಲಕ್ಷಣವಾಗಿದೆ. ಇದು ಹೆಚ್ಚಾಗಿ ಮಹಿಳೆಯರಲ್ಲಿ ಕಂಡುಬರುವುದು. ಇದನ್ನು ಒತ್ತಡ, ನಿದ್ರೆಯ ಕೊರತೆ ಎಂದು ಕಡೆಗಣಿಸಲಾಗುತ್ತದೆ.

ತಲೆನೋವು: ಹೃದಯಾಘಾತದ ಸಂದರ್ಭದಲ್ಲಿ ತಲೆನೋವು ಕಾಣಿಸಿಕೊಳ್ಳಬಹುದು. ಇದನ್ನು ಹೆಚ್ಚಿನ ಜನರು ಸಾಮಾನ್ಯ ತಲೆನೋವು ಅಥ–'ವಾ ತಲೆಸುತ್ತು ಎಂದು ಕಡೆಗಣಿಸುವುದು ಇದೆ.

**ಬೇಗನೆ ಪತ್ತೆ ಮಾಡಿ ಚಿಕಿತ್ಸೆ ನೀಡುವುದು**

ಈ ಎಲ್ಲಾ ಲಕ್ಷಣಗಳು ಕಂಡುಬಂದರೆ ಆಗ ಅದನ್ನು ಗಂಭೀರವಾಗಿ ಪರಿಗಣಿಸಿ, ತಕ್ಷಣವೇ ಚಿಕಿತ್ಸೆ ಪಡೆದುಕೊಳ್ಳಬೇಕು. ಟ್ರೊಪೊನಿನ್ ಪರೀಕ್ಷೆ ಮೂಲಕ ಹೃದಯಾಘಾತವನ್ನು ಪತ್ತೆ ಮಾಡಬಹುದು.

ಈ ಪರೀಕ್ಷೆಯು ಹೃದಯದ ಸ್ನಾಯುಗಳಿಗೆ ಹಾನಿಯಾಗಿರುವುದನ್ನು ಪತ್ತೆ ಮಾಡುವುದು ಮತ್ತು ಹೃದಯಕ್ಕೆ ಯಾವುದೇ ಸಮಸ್ಯೆಯಾದ ವೇಳೆ ಟ್ರೊಪೊನಿನ್ ಪ್ರೋಟೀನ್ ರಕ್ತನಾಳಗಳಿಗೆ ಬಿಡುಗಡೆಯಾಗುವುದು. ಸಮಯಕ್ಕೆ ಸರಿಯಾಗಿ ವೈದ್ಯಕೀಯ ನೆರವು ಪಡೆದರೆ ಒಳ್ಳೆಯದು.

ಇದರಿಂದ ಚಿಕಿತ್ಸೆ ನೀಡಲು ಸಹಕಾರಿ ಆಗುವುದು. ಸಣ್ಣ ಸಣ್ಣ ಲಕ್ಷಣಗಳು ಕಂಡುಬಂದರೂ ಅದನ್ನು ಕಡೆಗಣಿಸದೆ ತಪಾಸಣೆ ಮಾಡಿಸಿಕೊಂಡರೆ ಆಗ ಹೃದಯದ ಸಮಸ್ಯೆಯನ್ನು ಬೇಗನೆ ಪತ್ತೆ ಮಾಡಬಹುದಾಗಿದೆ ಎಂದು ಡಾ. ವಿವೇಕ್ ಗುಪ್ತಾ ಅವರು ಹೇಳಿದ್ದಾರೆ.

## ಕಾಯಕ ಬಂಧುಗಳ ತರಬೇತಿಗೆ ಚಾಲನೆ

# ಕಾಯಕ ಬಂಧುಗಳ ಕಾರ್ಯ ಉತ್ತಮವಾಗಲಿ : ರವಿ ಎನ್ ಬಂಗಾರೆಪ್ಪನವರ

ಬೆಳಗಾವಿ : ಕಾಯಕ ಬಂಧುಗಳು ಮತ್ತು ಕೂಲಿಕಾರ್ಮಿಕರು ಉದ್ಯೋಗ ಖಾತರಿ ಯೋಜನೆಯ ಜೊತೆಗೆ ಇತರ ಯೋಜನೆಗಳ ಮಾಹಿತಿಯನ್ನು ಪಡೆದಕೊಂಡು ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಬೇಕೆಂದು ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ರವಿ ಎನ್ ಬಂಗಾರೆಪ್ಪನವರ ಹೇಳಿದರು.

ಸ್ಥಳೀಯ ತಾಲ್ಲೂಕ ಪಂಚಾಯತ ಸಭಾ ಭವನದಲ್ಲಿ ಶುಕ್ರವಾರ (ಜನೆವರಿ16) ರಂದು ಗ್ರಾಮೀಣಾವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, ಜಿಲ್ಲಾ ಪಂಚಾಯತ ಬೆಳಗಾವಿ, ತಾಲ್ಲೂಕ ಪಂಚಾಯತ ಬೆಳಗಾವಿ, ಗ್ರಾಮ ಸ್ವರಾಜ ಅಭಿಯಾನ-ಕರ್ನಾಟಕ, (ನಾಗರಿಕ ಸಮಾಜ ಸೇವಾ ಸಂಸ್ಥೆಗಳ ಒಕ್ಕೂಟ) ಕರ್ನಾಟಕ ಪ್ರಜ್ವಲ ಸಂಸ್ಥೆ ಬೆಳಗಾವಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ಜರುಗಿದ ತಾಲ್ಲೂಕ ಮಟ್ಟದ ಕಾಯಕ ಬಂಧುಗಳ ತರಬೇತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಗ್ರಾಮೀಣ ಮಟ್ಟದಲ್ಲಿ ಮಹಿಳೆಯರು ಸಾಮಾಜಿಕ ಹಾಗೂ ಆರ್ಥಿಕವಾಗಿ ಸಬಲರಾಗುವಂತೆ ಸರ್ಕಾರದ ಅನೇಕ ಯೋಜನೆಗಳಿದ್ದು ಅವುಗಳನ್ನು ಗ್ರಾಮೀಣ ಪ್ರದೇಶದ ಜನರಿಗೆ ತಲುಪವಂತೆ ಮಾಡುವುದು ನಿಮ್ಮೆಲ್ಲರ ಕರ್ತವ್ಯವಾಗಿದೆ ಎಂದು ತಿಳಿಸಿದರು. ಕಾಯಕ ಬಂಧುಗಳು ಕಾಮಗಾರಿ ಸ್ಥಳದಲ್ಲಿ ಯಾವ ರೀತಿ ಕೆಲಸವನ್ನು ನಿರ್ವಹಿಸಬೇಕು, ತಮ್ಮ ಜವಾಬ್ದಾರಿಗಳೇನು ಎಂಬದುದನ್ನು ಈ ತರಬೇತಿಯ ಮೂಲಕ ಪಡೆದುಕೊಂಡು ತಮ್ಮ ತಮ್ಮ ಗ್ರಾಮ ಪಂಚಾಯತಿ ಮಟ್ಟದಲ್ಲಿ ಉತ್ತಮ ಕಾಯಕ ಬಂಧುಗಳಾಗಿ ಕಾರ್ಯನಿರ್ವಹಿಸಬೇಕೆಂದು ಹೇಳಿದರು. ಬೆಳಗಾವಿ, ಹುಕ್ಕೇರಿ ಮತ್ತು ಖಾನಾಪೂರ ಸೇರಿ ತಲಾ 300 ರಂತೆ ಒಟ್ಟು 900 ಕಾಯಕ ಬಂಧುಗಳಿಗೆ ತರಬೇತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯನಿರ್ವಾಹಕ ಅಧಿಕಾರಿಗಳಾದ ರಮೇಶ ಹೆಡಗೆ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಒಟ್ಟು 300 ಕಾಯಕ ಬಂಧುಗಳನ್ನು ಗುರುತಿಸಿ 7 ತಂಡಗಳಂತೆ ಪ್ರತಿ ತಂಡಗಳಿಗೆ 3 ದಿನಗಳಂತೆ ತರಬೇತಿ ನೀಡುತಿದ್ದು,

ಈ ತರಬೇತಿಯ ಸದುಪಯೋಗವನ್ನು ಕಾಯಕ ಬಂಧುಗಳು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಸಭೆಯಲ್ಲಿ ಸಹಾಯಕ ನಿರ್ದೇಶಕರಾದ (ಗ್ರಾ.ಉ) ಬಿ.ಡಿ ಕಡೇಮನಿ, ಡಿಐಇಸಿ ಸಂಯೋಜಕರು ಪ್ರಮೋದ ಗೋಡೆಕರ, ಕರ್ನಾಟಕ ಸೇವಾ ಸಂಸ್ಥೆ ಮುಖ್ಯಸ್ಥೆ ವೈಶಾಲಿ ಬಳಟಗಿ, ತಾಐಇಸಿ ಸಂಯೋಜಕ ರಮೇಶ ಮಾದರ. ರಾಜ್ಯ ಮಾಸ್ಟರ ಟ್ರೈನರ್ ಸುಜಾತಾ ಈ ಕೋರಿಶೆಟ್ಟಿ ಎಸ್.ಐ.ಆರ್ಡಿ ಶ್ರೀಮತಿ ಕುಸುಮಾ ಅವಕ್ಕನ್ನವರ, ಎಡಿ-ಎಮ್ ಪ್ರಭಾವತಿ ಕೋಲಕಾರ್ ತಾಲ್ಲೂಕ ಪಂಚಾಯತ ಸಿಬ್ಬಂದಿಗಳು, ಇದ್ದರು.

********

# ಜಿಲ್ಲಾ ಆಸ್ಪತ್ರೆಗೆ ಜಿಲ್ಲಾಧಿಕಾರಿಯ ದಿಢೀರ ಭೇಟಿ



ವಿಜಯಪುರ : ಇಲ್ಲಿನ ಜಿಲ್ಲಾ ಆಸ್ಪತ್ರೆಯ ತುರ್ತುಚಿಕಿತ್ಸೆ ವಿಭಾಗಕ್ಕೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಜ.15ರಂದು ಅನೀರಿಕ್ಷಿತವಾಗಿ ಭೇಟಿ ನೀಡಿದರು.

ಭೇಟಿ ನೀಡಿ ಅಲ್ಲಿರುವ ರೋಗಿಗಳ ಆರೈಕೆಯ ಕುರಿತು ವೈದ್ಯರು ಮತ್ತು ಸಿಬ್ಬಂದಿಯವರಿಂದ ಮಾಹಿತಿಯನ್ನು ಪಡೆದರು. ರೋಗಿಗಳಿಗೆ ಮತ್ತು ರೋಗಿಯ ಸಂಬಂದಿಕರಿಗೆ ನೀಡುತ್ತಿರುವ ಸೌಲಭ್ಯದ ಬಗ್ಗೆ ವಿಚಾರಿಸಿದರು. ಆಸ್ಪತ್ರೆಯಲ್ಲಿ ಸ್ವಚ್ಚತೆ, ವಿದ್ಯುತ್ತ ವ್ಯವಸ್ಥೆ, ನೀರು ಮತ್ತು ಇನ್ನಿತರ ಸೌಲಭ್ಯವನ್ನು ಸಮರ್ಪಕಾಗಿ ನೀಡಲು ವೈದ್ಯರಿಗೆ ಸೂಚಿಸಿದರು.

ಜೊತೆಗೆ ಆಸ್ಪತ್ರೆಗೆ ಬರುವ ರೋಗಿಗಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಲು ತಿಳಿಸಿದರು. ಈ ಸಮಯದಲ್ಲಿ ಕಾರ್ಯನಿರತ ವೈದ್ಯಾಧಿಕಾರಿಯಾದ ಡಾ॥ ತಿಮ್ಮಾಪುರ ಗಲಗಲಿ, ರಾತ್ರಿ ಪಾಳೆಯ ಸೂಪರ್ ವೈಸರಾದ ಶ್ರೀಮತಿ ರೇಖಾ ಇಂಗಳೇಶ್ವರ ಹಾಗೂ ಇತರರು ಉಪಸ್ಥಿತರಿದ್ದರು.

# ಅರ್ಜಿ ಆಹ್ವಾನ

ಬೆಳಗಾವಿ, : ಬೆಂಗಳೂರು ಮೂಲದ ಎಚ್.ಎ.ಎಲ್ ತಾಂತ್ರಿಕ ತರಬೇತಿ ಸಂಸ್ಥೆ ಎಚ್.ಎ.ಎಲ್ ವಿಭಾಗದಲ್ಲಿ ಅಪ್ರೆಂಟಿಸ್‌ಷಿಪ್ ತರಬೇತಿಗಾಗಿ ಅರ್ಹ ಹಾಗೂ ಆಸಕ್ತ ಐಟಿಐ ಉತ್ತೀರ್ಣರಾದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಐಟಿಐ ನಲ್ಲಿ ಫಿಟ್ಟರ್, ಟರ್ನರ್, ಮೆಷಿನಿಸ್ಟ್, ಕಂಪ್ಯೂಟರ್ ಆಪ್ರೇಟರ್ ಆ್ಯಂಡ್ ಪ್ರೋಗ್ರಾಮಿಂಗ್ ಅಶಿಸ್ಟೆಂಟ್, ಕಾರ್‌ಪೆಂಟರ್, ಫೌಂಡ್ರಿ-ಮ್ಯಾನ್, ಶೀಟ್ ಮೆಟಲ್ ವರ್ಕರ್, ಟೂಲ್ ಆ್ಯಂಡ್ ಡೈಯಾಮೆಕರ್, ಸಿಎನ್‌ಸಿ ಪ್ರೊಗ್ರಾಮರ್ ಕಮ್ ಆಪರೇಟರ್ ಮತ್ತು ಮೆಕಾನಿಕ್ ರೆಫ್ರಿಜೆಶನ್ ಮತ್ತು ಏರ್ ಕಂಡಿಷನಿಂಗ್ ಗಳಲ್ಲಿ ಕರ್ನಾಟಕ ರಾಜ್ಯದ ಮಾನ್ಯತೆ ಪಡೆದ ಐಟಿಐ ಗಳಿಂದ ಉತ್ತೀರ್ಣರಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಎಚ್.ಎ.ಎಲ್ ವೆಬ್ ಸೈಟ್ https://apprenticeshipindia.gov.in ನಲ್ಲಿ ಅರ್ಜಿ ನಮೂನೆ ಲಭ್ಯವಿದ್ದು, ಜನವರಿ 22, 2025 ಒಳಗಾಗಿ ಅರ್ಜಿಗಳನ್ನು ಖುದ್ದಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಸುವರ್ಣ ವಿದಾನ ಸೌಧ, ಟಿಪಿ1 &ಟಿಪಿ 2 ಕೆಳಮಹಡಿ (0831-2443948) ಕಚೇರಿಯಲ್ಲಿ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಸಹಾಯಕ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೇಮಕ



ಮೂಡಲಗಿ : ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಚಿಕ್ಕೋಡಿ ಶೈಕ್ಷಣಿಕ ಜಿಲ್ಲಾ ಶಾಖೆಯ 2024-2029ನೇ ಅವಧಿಗೆ ತಾಲೂಕಿ ಮಸಗುಪ್ಪಿ ಗ್ರಾಮದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಪ್ರಾಥ-'ಮಿಕ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಣಾಧಿಕಾರಿ ರಾಮಚಂದ್ರ ಸಣ್ಣಕ್ಕಿ ಅವರನ್ನು ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಗಿದೆ ಎಂದು ಚಿಕ್ಕೋಡಿಯ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಶೈಕ್ಷಣಿಕ ಜಿಲ್ಲಾ ಶಾಖೆಯ ಜಿಲ್ಲಾಧ್ಯಕ್ಷ ಬಿ. ಎ. ಕುಂಬಾರ ತಿಳಿಸಿದ್ದಾರೆ.

# ಉಚಿತ ಮೋತಿ ಬಿಂದು ಶಸ್ತ್ರ ಚಿಕಿತ್ಸೆ ಶಿಬಿರ




ಹುಲಕೋಟಿ: ಕೆ.ಎಚ್ ಪಾಟೀಲ ಆಸ್ಪತ್ರೆ ಹಾಗೂ ಸಂಶೋಧನಾ ಸಂಸ್ಥೆ ಹುಲಕೋಟಿ ಹಾಗೂ ಎಂ. ಎಂ. ಜೋಶಿ ಕಣ್ಣಿನ ಆಸ್ಪತ್ರೆ ಹುಬ್ಬಳ್ಳಿ ಇವರ ಸಹಯೋಗದಲ್ಲಿ ಹಾಗೂ ಗದಗ ಜಿಲ್ಲಾ ಅಂ-ಧತ್ವ ನಿಯಂತ್ರಣ ಸಂಸ್ಥೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಗದಗ ಇವರ ಸಹಕಾರದಿಂದ ಹಾಗೂ ಶ್ರೀ ಎಚ್ ಕೆ ಪಾಟೀಲ ಸೇವಾ ತಂಡದ ಸಹಾಯದಿಂದ ಇಂದು ದಿನಾಂಕ 11/01/2025 ರ ಶನಿವಾರದಂದು ಒಟ್ಟು 16 ಜನ ಫಲಾನುಭವಿಗಳಿಗೆ ಉಚಿತವಾಗಿ ಕಣ್ಣಿನ ಪೊರೆಯ ಶಸ್ತ್ರ ( ಮೋತಿ ಬಿಂದು ) ಚಿಕಿತ್ಸೆಯನ್ನು ಹುಲಕೋಟಿಯ ಕೆ ಎಚ್ ಪಾಟೀಲ ಆಸ್ಪತ್ರೆಯಲ್ಲಿ ಮಾಡಲಾಯಿತು ಸಂಸ್ಥೆಯ ಚೇರಮನ್ ರಾದ ಡಾ।-ಎಸ್. ಆರ್. ನಾಗನೂರ ಹಾಗೂ ಗೌರವ ಕಾರ್ಯದರ್ಶಿಗಳಾದ ಡಾ। ವೇಮನ್. ಆರ್. ಸಾವಕಾರ ಇವರು ಈ ಶಿಬಿರದಲ್ಲಿ ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು.

ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆಯನ್ನು ಎಂ. ಎಂ. ಜೋಶಿ ಆಸ್ಪತ್ರೆಯ ಖ್ಯಾತ ವೈದ್ಯರಿಂದ ಶಸ್ತ್ರ ಚಿಕಿತ್ಸೆಯನ್ನು ನೆಡೆಸಲಾಯಿತು. ಇದಕ್ಕೂ ಮೊದಲು ಫಲಾನುಭವಿಗಳಿಗೆ ಉಚಿತವಾಗಿ ಬಿಪಿ, ಶುಗರ್, ರಕ್ತ ತಪಾಸಣೆ ಮಾಡಲಾಯಿತು.

ಹಾಗೂ ಎಲ್ಲ ಫಲಾನುಭವಿಗಳಿಗೆ ಊಟ ಮತ್ತು ಉಪಹಾರವನ್ನು ನೀಡಲಾಯಿತು ಈ ಶಿಬಿರದಲ್ಲಿ ಕೆ. ಎಚ್. ಪಾಟೀಲ ಆಸ್ಪತ್ರೆಯ ಸಿಬ್ಬಂದಿ ಪಾಲ್ಗೊಂಡು ಸಹಾಯ ಸಹಕಾರ ನೀಡಿ ಶಿಬಿರದ ಯಶಸ್ಸಿಗೆ ಶ್ರಮಿಸಿದರು

# ಸೌತ್ ವೆಸ್ಟರ್ನ್ ರೈಲ್ವೆ ವಿಭಾಗದ ಸದಸ್ಯರಾಗಿ ಸಿದ್ದನಗೌಡರ

ಬೈಲಹೊಂಗಲ :ಭಾರತೀಯ ಜನತಾ ಪಾರ್ಟಿಯ ನಿಷ್ಠಾವಂತ ಕಾರ್ಯಕರ್ತ ಪಕ್ಷದ ರಾಜ್ಯ ಮಾಧ್ಯಮ ಸಮಿತಿ ಸದಸ್ಯ ನ್ಯಾಯವಾದಿ ಎಫ್.ಎಸ್.ಸಿದ್ದನಗೌಡರ ಸಾಮಾಜಿಕ ಸೇವೆಯನ್ನು ಗುರುತಿಸಿ ರಾಜ್ಯಸಭಾ ಸಂಸದರಾದ ಈರಣ್ಣ ಕಡಾಡಿ ಸೌತ್ ವೆಸ್ಟರ್ನ್ ರೈಲ್ವೆ ವಿಭಾಗದ ಡಿಆರ್ ಯು ಸಿಸಿ ಸಮಿತಿಯ ಸದಸ್ಯರನ್ನಾಗಿ ಕೇಂದ್ರ ಸರ್ಕಾರದಿಂದ ರೈಲ್ವೆ ವಿಭಾಗಕ್ಕೆ ನಾಮನಿರ್ದೇಶನ ಮಾಡಿದ್ದಾರೆ.




ಈ ವಿಭಾಗದಲ್ಲಿ ಕರ್ನಾಟಕ, ಆಂದ್ರಪ್ರದೇಶ, ಮಹಾರಾಷ್ಟ್ರ, ಗೋವಾ ರಾಜ್ಯದ ರೈಲ್ವೆ ಸಂಪರ್ಕ ಒಳಗೊಂಡ ವಿಭಾಗ ಇದಾಗಿದ್ದು ಈ ರಾಜ್ಯದ ಸಂಸದರು ಶಾಸಕರು ಹಾಗೂ ಸಾಮಾಜಿಕ ಕಾರ್ಯಕರ್ತರು ನಾಮನಿರ್ದೇಶನಗೊಳ್ಳುತ್ತಾರೆ. ರಾಜ್ಯದಿಂದ ಎಫ್. ಎಸ್.ಸಿದ್ದನಗೌಡರ ಜೋತೆಯಲ್ಲಿ ಆಂದ್ರಪ್ರದೇಶದ ಹೈದ್ರಾಬಾದ್ ಶಾಸಕ ಡಾ.ಪಾರ್ಥಸಾರಥಿ ವಾಲ್ಮೀ ಮತ್ತು ಆಂದ್ರಪ್ರದೇಶದ ವಿಧಾನ ಪರಿಷತ್ ಶಾಸಕ ಕೃಷ್ಣರಾಘವ ಜಯೇಂದ್ರ ಭರತ ಆಗಸ್ಟ್ 2026 ರವರೆಗೆ ನಾಮನಿರ್ದೇಶನಗೊಂಡಿದ್ದಾರೆ. ಇವರ ಆಯ್ಕೆಯಿಂದ ಪಕ್ಷದಲ್ಲಿ ದುಡಿಯುವ ನಿಷ್ಠಾವಂತ ಕಾರ್ಯಕರ್ತರನ್ನು ಗುರುತಿಸಿ ಅವರಿಗೆ ಸ್ಥಾನ ಮಾನಕೊಟ್ಟ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿಯವರನ್ನ ಕಾರ್ಯಕರ್ತರು ಅಭಿನಂದಿಸಿದ್ದಾರೆ.

# ಇಂದು ಕೆಪಿಎಸ್‌ಸಿ ಪರೀಕ್ಷಾ ಪೂರ್ವಭಾವಿ ಸಭೆ

ವಿಜಯಪುರ : ಕರ್ನಾಟಕ ಲೋಕಸೇವಾ ಆಯೋಗವು ಅಧಿಸೂಚಿಸಿರುವ ವಿವಿಧ ಇಲಾಖೆಗಳ ಗ್ರೂಪ್ ಬಿ ವೃಂದದ ಹುದ್ದೆಗಳಿಗೆ ಜ.19ರಂದು ನಡೆಸಲಾಗುತ್ತಿರುವ ಸ್ಪರ್ಧಾತ್ಮಕ ಪರೀಕ್ಷೆಯ ಕುರಿತ ಪೂರ್ವಭಾವಿ ಸಭೆಯನ್ನು ಜ.17ರ (ಇಂದು) ಬೆಳಿಗ್ಗೆ 10.30ಕ್ಕೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ನಗರಾಭಿವೃದ್ಧಿ ಪ್ರಾಧಿಕಾರ ಆಯುಕ್ತ, ಜಿಲ್ಲಾ ಖಜಾನೆಯ ಉಪ ನಿರ್ದೇಶಕ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು (ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ, ತಹಶೀಲ್ದಾರ, ವಿಜಯಪುರ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ, ವೀಕ್ಷಕರು, ಪ್ರಶ್ನೇ ಪತ್ರಿಕೆ ವಿತರಣಾ ತಂಡ, ಪರೀಕ್ಷಾ ಕೇಂದ್ರಗಳ ಮೇಲ್ವಿಚಾರಕ, ಮಾರ್ಗಾಧಿಕಾರಿ, ಸ್ಥಾನಿಕ ಜಾಗೃತ ದಳದವರು ಹಾಗೂ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೋಳುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸ್ವ-ಗ್ರಾಮಕ್ಕೆ ಆಗಮಿಸಿರುವ ನಿಮಿತ್ತ ಉಪನ್ಯಾಸಕ ಬಿ.ಎನ್. ಬಿರಾದಾರ ಅವರಿಗೆ ಸನ್ಮಾನ



ಸಿಂದಗಿ:ಶಿವನಿಗೆ ಸಮರ್ಪಿತವಾದ 12ಜ್ಯೋತಿರ್ಲಿಂಗಗಳಲ್ಲಿ ಕಾಶಿ ವಿಶ್ವನಾಥ ದೇವಾಲಯವೂ ಒಂದು. ಇದೊಂದು ಪ್ರಾಚೀನ ಹಿಂದೂ ದೇವಾಲಯವಾಗಿದೆ. ಧಾರ್ಮಿಕ ಮತ್ತು ಆಧ್ಯಾತ್ಮಿಕ ಮಹತ್ವವನ್ನು ಹೊಂದಿರುವ ಈ ಶಿವನ ದೇವಾಲಯಕ್ಕೆ ಜೀವನದಲ್ಲಿ ದರ್ಶನ ಪಡೆಯಬೇಕು ಎಂದು ಸರಕಾರಿ ಪಪೂ ಕಾಲೇಜಿನ ಉಪನ್ಯಾಸಕ ಬಸನಗೌಡ ಬಿರಾದಾರ ಹೇಳಿದರು.

ಸಿಂದಗಿ ತಾಲೂಕಿನ ಡಂಬಳ ಗ್ರಾಮದ ಪ್ರಥಮ ದರ್ಜೆ ಗುತ್ತಿಗೆದಾರ ಸತೀಶ ನಾನಗೌಡ ಪಾಟೀಲ ಅವರು ಕಾಶಿಯಾತ್ರೆ ಮುಗಿಸಿಕೊಂಡು ಸ್ವ-ಗ್ರಾಮಕ್ಕೆ ಆಗಮಿಸಿರುವ ನಿಮಿತ್ತ ಸರಕಾರಿ ಪಪೂ ಕಾಲೇಜಿನ ಉಪನ್ಯಾಸಕ ಬಿ.ಎನ್. ಬಿರಾದಾರ ಸನ್ಮಾನಿಸಿ ಗೌರವಿಸಿ ಮಾತನಾಡಿದರು.

ಕಾಶಿ ನಗರವು ಪ್ರಮುಖ ಹಿಂದೂ ಧಾರ್ಮಿಕ ಸ್ಥಳಗಳಲ್ಲಿ ಒಂದಾಗಿದೆ. ಏಕೆಂದರೆ ಇಲ್ಲಿ ನೆಲೆಗೊಂಡಿರುವ ಕಾಶಿ ವಿಶ್ವನಾಥ ದೇವಾಲಯವೇ ಇದಕ್ಕೆ ಮುಖ್ಯ ಕಾರಣ. ಈ ದೇವಾಲಯವು ಶಿವನಿಗೆ ಸಮರ್ಪಿತವಾದ ಹಾಗೂ ಇದು ಮುಖ್ಯ ಹಿಂದೂ ಯಾತ್ರಾ ಸ್ಥಳವಾಗಿದೆ. ಕಾಶಿ ವಿಶ್ವನಾಥ ದೇವಾಲಯದ ವಿಶೇಷತೆಯು ಶಿವನಿಗೆ ಅರ್ಪಿತವಾದ ಶಿವಲಿಂಗವನ್ನು ಹೊಂದಿದೆ.

ಪ್ರತಿ ವರ್ಷ ಲಕ್ಷಾಂತರ ಭಕ್ತರು ಮತ್ತು ಪ್ರವಾಸಿಗರು ಇಲ್ಲಿಗೆ ಆಗಮಿಸುತ್ತಾರೆ. ಅದರ ಧಾರ್ಮಿಕ ಮತ್ತು ಆಧ್ಯಾತ್ಮಿಕ ಮಹತ್ವವನ್ನು ತಿಳಿದು ಕೊಳ್ಳಲು ಸಹಕಾರಿಯಾಗಿದೆ ಎಂದರು.

ಈ ವೇಳೆ ಡಂಬಳ ಗ್ರಾಮದ ಪ್ರಥಮ ದರ್ಜೆ ಗುತ್ತಿಗೆದಾರ ಸತೀಶ ನಾನಗೌಡ ಪಾಟೀಲ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಜೀವನದಲ್ಲಿ ಕಾಶಿ ಯಾತ್ರೆ ಮಾಡುವದರಿಂದ ಜೀವನ ಪಾವನವಾಗಬೇಕು ಎಂದರು. ಸನ್ಮಾನದಲ್ಲಿ ಕಲ್ಪನ ಪಾಟೀಲ, ಲಕ್ಷ್ಮೀ ಬಿರಾದಾರ, ಡಾ.ಗೊಲ್ಲಾಳಗೌಡ ಬಿರಾದಾರ ಇದ್ದರು.

*******

# ಹಿರಿಯ ನಾಗರಿಕರ ಮತ್ತು ವಿಕಲಚೇತನ ಸಬಲೀಕರಣ ಇಲಾಖೆ ಸ್ವಯಂ ಸೇವಾ ಸಂಸ್ಥೆಗಳ ನೋಂದಣಿ ಕಡ್ಡಾಯ

ಧಾರವಾಡ : ಹಿರಿಯ ನಾಗ-ರಿಕರ ಮತ್ತು ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ವಿಕಲಚೇತನರ ಕಾಯ್ದೆ 1995 ಹಾಗೂ ಹಿರಿಯ ನಾಗರಿಕರ ಸಂರಕ್ಷಣಾ ಕಾಯ್ದೆ 2007 ಅಡಿ ಇಲಾಖೆಯಲ್ಲಿ ನೋಂದಣಿ ಮಾಡಿಸದೆ ಸಂಸ್ಥೆಗಳನ್ನು ನಡೆಸುತ್ತಿದ್ದಲ್ಲಿ ಕಡ್ಡಾಯವಾಗಿ ನೊಂದಣಿ ಮಾಡಿಸಲು ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ: 0836-2744474 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾ-ರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಫಲ-ಪುಷ್ಪ, ಕೃಷಿ ವಸ್ತು ಪ್ರದರ್ಶನ, ಸ್ವ-ಸಹಾಯ ಸಂಘದ ಮಳಿಗೆಗಳ ಉದ್ಘಾಟನೆ

# ಶ್ರೀ ಗವಿಸಿದ್ದೇಶ್ವರ ಜಾತ್ರೆಯಲ್ಲಿ ಗಮನ ಸೆಳೆಯುತ್ತಿರುವ ವಿವಿಧ ಇಲಾಖೆಗಳ ವಸ್ತು ಪ್ರದರ್ಶನ

ಕೊಪ್ಪಳ :: ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಜಾತ್ರೆಯಲ್ಲಿ ಕೃಷಿ, ತೋಟಗಾರಿಕೆ ಹಾಗೂ ವಿವಿಧ ಇಲಾಖೆಗಳಿಂದ ಆಯೋಜಿಸಿರುವ ವಸ್ತು ಪ್ರದರ್ಶನ ಮಳಿಗೆಗಳು ಎಲ್ಲರ ಗಮನ ಸೆಳೆಯುತ್ತಿವೆ.

ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವ-2025ರ ಪ್ರಯುಕ್ತ ಜಾತ್ರಾ ಆವರಣದಲ್ಲಿ ಕೊಪ್ಪಳ ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ಹಮ್ಮಿಕೊಂಡ ಕೃಷಿ ಇಲಾಖೆಯ ಕೃಷಿ ವಸ್ತು ಹಾಗೂ ಜಲಾನಯನ ಮಾದರಿಗಳ ಪ್ರದರ್ಶನ, ತೋಟಗಾ-ರಿಕೆ ಇಲಾಖೆಯ ಫಲಪುಷ್ಪ ಪ್ರದರ್ಶನ, ಕೌಶಲ್ಯಾಭಿವೃದ್ಧಿ ಇಲಾಖೆ ಹಾಗೂ ಎನ್.ಆರ್. ಎಲ್.ಎಂ. ಮಹಿಳಾ ಸ್ವ-ಸಹಾಯ ಸಂಘಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಜಿ.ಪಂ ಸಿಇಓ ಅವರು ಚಾಲನೆ ನೀಡಿದರು.

ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಅವರು ಮಾತನಾಡಿ, ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ ಪ್ರಯುಕ್ತ ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಎನ್.ಆರ್.ಎಲ್. ಎಂ. ಕೌಶಲ್ಯಾಭಿವೃದ್ಧಿ ಇಲಾಖೆ ಹಾಗೂ ಸ್ವಸಹಾಯ ಸಂಘಗಳ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕೃಷಿಯಲ್ಲಿ ಅತ್ಯಾಧುನಿಕ ತಂತ್ರಜ್ಞಾನಗಳ ಪ್ರದರ್ಶನ, ತೋಟಗಾರಿಕೆಯ ತಂತ್ರಜ್ಞಾನಗಳ ಪ್ರದರ್ಶನ, ವಿವಿಧ ಹಣ್ಣುಗಳ ಪ್ರದರ್ಶ, ಸ್ವ-ಸಹಾಯ ಗುಂಪುಗಳು ಸಿದ್ದಪಡಿಸಲಾದ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸಲಾಗಿದ್ದು, ಜಾತ್ರೆಗೆ ಬರುವ ಭಕ್ತಾದಿಗಳು ಇವುಗಳನ್ನು ವೀಕ್ಷಿಸಬೇಕೆಂದರು.

ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಮಾತನಾಡಿ, ಗವಿಸಿದ್ದೇಶ್ವರ ಜಾತ್ರೆಯ ನಿಮಿತ್ತ ಕೃಷಿ. ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ



ಇಲಾಖೆಗಳು ರೈತರಿಗೆ ಬೇಕಾಗಿರುವ ಕೃಷಿ ಸಲಕರಣೆ ಬಗ್ಗೆ ಮಾಹಿತಿ ನೀಡುವಂತಹ ಮಳಿಗೆಗಳನ್ನು ಹಮ್ಮಿಕೊಂಡಿವೆ. ಇಲ್ಲಿಗೆ ಜಿಲ್ಲೆಯ ರೈತರು ಭೇಟಿ ನೀಡಿ, ಮಾಹಿತಿಯನ್ನು ಪಡೆದುಕೊಳ್ಳಬೇಕು. ಇದರ ಜೊತೆಗೆ ಸ್ತ್ರೀಶಕ್ತಿ ಸಂಘಗಳು ಯಾವ ರೀತಿ ಸಬಲೀಕರಣವಾಗಬೇಕೆಂಬುವುದರ ಬಗ್ಗೆ ಎನ್.ಆರ್.ಎಲ್.ಎಂ. ಯೋಜನೆಯಡಿ ಜಿಲ್ಲಾ ಪಂಚಾಯತ್ ನಿಂದ ಮಾಹಿತಿ ನೀಡುವ ಕೆಲಸವಾಗುತ್ತಿದೆ. ರಥೋತ್ಸಕ್ಕೆ ಸುಮಾರು 8 ರಿಂದ 10 ಲಕ್ಷ ಜನ ಸೇರಲಿದ್ದು, 15 ದಿನಗಳ ಕಾಲ ನಡೆಯುವ ಈ ಪ್ರದರ್ಶನ ಮಳಿಗೆಗಳ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕು ಎಂದರು.

ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಅವರು ಮಾತನಾಡಿ, ತೋಟಗಾರಿಕೆ ಇಲಾಖೆಯು ಫಲಪುಷ್ಪ ಪ್ರದರ್ಶನದಂತಹ ವಿನೂತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಮಾವು ಮೇಳದಲ್ಲಿ ಮೀಯಾ ಜಾಕಿ ಎಂಬ ಬೆಲೆಬಾಳುವ ಮಾವಿನ ಹಣ್ಣಿನ ಪ್ರದರ್ಶನವು ರಾಜ್ಯಮಟ್ಟದಲ್ಲಿ ಈ ಹಿಂದೆ ಸದ್ದು ಮಾಡಿದೆ. ಜಿಲ್ಲೆಯಲ್ಲಿ ಇಂತಹ ವಿಭಿನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ತೋಟಗಾ-ರಿಕೆ ಇಲಾಖೆಯು ಮುಂಚೂಣಿಯಲ್ಲಿದೆ. ಕೃಷಿ ವಸ್ತು ಪ್ರದರ್ಶನದಿಂದಲು ರೈತರಿಗೆ ಅನುಕೂಲವಾಗುವುದಲ್ಲದೇ ವಿಶೇಷವಾಗಿ ಇಂದಿನ ಪಿಳಿಗೆಯವರಿಗೆ ಪಾರಂಪ-ರಿಕ ಕೃಷಿ ಪದ್ಧತಿಗಳ ಬಗ್ಗೆ ತಿಳಿಯುತ್ತದೆ. ಸಂಜೀವಿನಿ ಮತ್ತು ಸ್ವ-ಸಹಾಯ ಗುಂಪುಗಳು ವಸ್ತು ಪ್ರದರ್ಶನ ಮತ್ತು ಮಾರಾಟ ಮಳಿಗೆ ಹಮ್ಮಿಕೊಂಡಿರುವುದು ಸಂತಸ ತಂದಿದೆ. ಜಾತ್ರೆಯಲ್ಲಿ ವಿವಿಧ ಇಲಾಖೆಗಳು ಭಾಗವಹಿಸಿರುವುದು ವಿಶೇಷತೆಗೆ ಸಾಕ್ಷಿಯಾಗಿದೆ ಎಂದರು.

ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ಪ್ರಕಾಶ ವಡ್ಡರ ಅವರು ಸರಸ್ ಮೇಳದ ಕುರಿತು ಮಾಹಿತಿ ನೀಡಿ, ಗವಿಸಿದ್ದೇಶ್ವರ ಜಾತ್ರೆಯಲ್ಲಿ ನಗರ ಮತ್ತು ಗ್ರಾಮೀಣ ಸಂಜೀವಿನಿ ಮಹಿಳಾ ಸ್ವ-ಸಹಾಯ ಗುಂಪುಗಳ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜನೆ ಮಾಡಲಾಗಿದೆ. ಇದರಲ್ಲಿ ನಮ್ಮ ಜಿಲ್ಲೆಯ 49 ಸ್ವ-ಸಹಾಯ ಸಂಘಗಳು ಮತ್ತು ಇತರೆ 16 ಜಿಲ್ಲೆಯ 29 ಸ್ವ-ಸಹಾಯ ಸಂಘಗಳು ಪಾಲ್ಗೊಂಡಿದ್ದು, ತಮ್ಮ ಆಹಾರ ಮತ್ತು ಕೈಮಗ್ಗದ ವಸ್ತುಗಳ ಮಾರಾಟವನ್ನು ಈ ಜಾತ್ರೆಯಲ್ಲಿ ಮಾಡಲಿದ್ದಾರೆ. ಇದರಲ್ಲಿ ವಿಶೇಷವಾಗಿ ದಾವಣಗೆರೆ ಜಿಲ್ಲೆಯ ಆಯುರ್ವೇ ವನಸ್ಪತಿ. ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗದವರು ಮಾರಾಟ ಮಾಡುವ ಜೇನು ತುಪ್ಪ. ಮಸಾಲೆ ಪದಾರ್ಥಗಳು. ಬಿದ-ರಿನಿಂದ ತೈಯಾರಿಸಿದ ವಸ್ತುಗಳು. ಕಿನ್ನಾಳದ ಗೊಂಬೆಗಳು. ಚನ್ನಪಟ್ಟಣ ಗೊಂಬೆಗಳು. ಗಂಗಾವತಿಯ ಮಣ್ಣಿನಿಂದ ತೈಯಾರಿಸುವ ಮಡಿಕೆಗಳು ವಿಶೇಷವಾಗಿವೆ. 15 ದಿನಗಳ ಕಾಲ ಈ ಮಾರಾಟ ಮೇಳ ನಡೆಯಲಿದೆ ಎಂದು ಹೇಳಿದರು.



ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ರುದ್ರೇಶಪ್ಪ ಟಿ.ಎಸ್ ಅವರು ಮಾಹಿತಿ ಕೃಷಿ ಮೇಳದ ಕುರಿತು ಮಾಹಿತಿ ನೀಡಿ, ಪ್ರದರ್ಶನ ಮತ್ತು ಮಾರಾಟ ಹಾಗೂ ಕೃಷಿ



ಕೃಷಿ ವಸ್ತು ಹಾಗೂ ಜಲಾನಯನ ಮಾದ-ರಿಗಳ ಪ್ರದರ್ಶನ ಗವಿಸಿದ್ದೇಶ್ವರ ಜಾತ್ರೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಮಾದರಿ ಜಲಾನಯನ ಹಾಗೂ ನೀರಿನ ಸಂರಕ್ಷಣೆ ಕು-ರಿತು ಪ್ರಾತ್ಯಕ್ಷಿಕೆ. ಉದ್ಯೋಗ ಖಾತ್ರಿ ಯೋಜನೆ. ಸಿರಿಧಾನ್ಯಗಳಾದ ನವಣೆ. ಕರಲೆ. ಬರಗು. ಸಜ್ಜೆ ಪ್ರದರ್ಶನ ಜೊತೆಗೆ ಕೃಷಿ ಉಪಕರಣ ಇಲಾಖೆಯಿಂದ ನೀಡಲಾಗುವ ಸರ್ಕಾರದ ವಿವಿಧ ಯೋಜನೆಗಳ ಮಾಹಿತಿ ಇರಲಿದ್ದು ರೈತರು ಈ ಮೇಳದಲ್ಲಿ ಭಾಗವಹಿಸಿ ವಿವಿಧ ಯೋಜನೆಗಳ ಮಾಹಿತಿ ಪಡೆಯಬಹುದಾಗಿದೆ ಎಂದು ಹೇಳಿದರು.

ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರಾದ ಕೃಷ್ಣ ಉಕುಂದ್ ಅವರು ಫಲ-ಪುಷ್ಪ ಪ್ರದರ್ಶನದ ಬಗ್ಗೆ ಮಾಹಿತಿ ನೀಡಿ, ಗವಿಸಿದ್ದೇಶ್ವರ ಜಾತ್ರೆಯಲ್ಲಿ ತೋಟಗಾ-ರಿಕೆ ಫಲ ಪುಷ್ಪ ಪ್ರದರ್ಶನ ಏರ್ಪಡಿಸಲಾಗಿದ್ದು, ಇದರಲ್ಲಿ ರೈತರು ಬೆಳೆದ ತರಕಾರಿ ಹಣ್ಣು ಹಂಪಲುಗಳ ಪ್ರದರ್ಶನ ಹಾಗೂ ಹೂ-ಗಳಿಂದ ತಯಾರಿಸಿದ ವಿವಿಧ ವಸ್ತುಗಳು. ವಿಶೇಷವಾಗಿ ತೋಟಗಾರಿಕೆ ಉತ್ಪಾದನಗಳ ರಪ್ತಿನ ಮಾಹಿತಿ, ವಿದ್ಯಾರ್ಥಿಗಳಿಗಾಗಿ ತೋಟಗಾರಿಕೆ ಇಲಾಖೆಯ ಕೈಪಿಡಿ, ಕೈತೋಟ ಮತ್ತು ತಾರಸಿ ತೋಟ ಹಾಗೂ ರೈತರು ತಮ್ಮ ಹೊಲದಲ್ಲಿ ಹವಾಮಾನ ಆಧಾರಿತ ಸ್ಟೇಷನ್ ಮಾಡಿಕೊಳ್ಳುವ ಪ್ರಾತ್ಯಕ್ಷಿಕೆ ಜೊತೆಗೆ ತೋಟಗಾರಿಕೆ ಇಲಾಖೆಯಿಂದ ನೀಡಲಾಗುವ ಸರ್ಕಾರದ ವಿವಿಧ ಯೋಜನೆಗಳ ಮಾಹಿತಿ ಇರಲಿದ್ದು ರೈತರು ಇದರಲ್ಲಿ ಭಾಗವಹಿಸಿ ಮಾಹಿತಿ ಪಡೆಯಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ದಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಜನಪ್ರತಿನಿಧಿಗಳು, ರೈತರು, ಸಾರ್ವಜನಿಕರು ಸೇರಿದಂತೆ ಹಲವಾರು ಜನರು ಉಪಸ್ಥಿತ-ರಿದ್ದರು.



ಮೂಡಲಗಿ : ತಾಲೂಕಿನ ಅವರಾದಿ ಗ್ರಾಮದ ಪಿಕೆಪಿಎಸ್ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆಯಲ್ಲಿ ಮಲ್ಲಪ್ಪ ರಾ ರಂಜನಗಿ ಹಾಗೂ ಉಪಾಧ್ಯಕ್ಷರಾಗಿ ಲಕ್ಷ್ಮಣ ಕೆ ಬಾಗೇವಾಡಿ ಆಯ್ಕೆಯಾದರು ಎಂದು ಚುನಾವಣಾಧಿಕಾರಿ ಸಬರದ ತಿಳಿಸಿದ್ದಾರೆ,
ಶಾಸಕ ಬಾಲಚಂದ್ರ ಜಾರಕಿಹೊಳಿ ಮಾರ್ಗದರ್ಶನದಲ್ಲಿ ಮುಂದಿನ ಅಭಿವೃದ್ಧಿ ಮಾಡಲಾಗುವದು ಎಂದು ಅಧ್ಯಕ್ಷ ಉಪಾಧ್ಯಕ್ಷ ತಿಳಿಸಿದರು.
ಈ ಸಂದರ್ಭದಲ್ಲಿ ಅವರಾದಿ ಪಿಕೆಪಿಎಸ್ ನೂತನ ಸದಸ್ಯರಾಗಿ ಆಯ್ಕೆಯಾದ ಹಸನಸಾಬ ಬಾಗವಾನ, ಮುತ್ತಪ್ಪ ಡೊಂಬರ,ಸೋಮಣ್ಣ ತೆಗ್ಗಿ, ವಿಠ್ಠಲ ತೊರಗಲ್ಲ ,ಮಹಾದೇವ ಕುಕ್ಕಡಿ, ಸಾವಳಿಗೆಪ್ಪ ತಳವಾರ, ಚನ್ನಬಸು ಕುಳ್ಳೋಳಿ, ಮಾಜಿ ಪಿಕೆಪಿಎಸ್ ನಿರ್ದೇಶಕರಾದ ರಾಮಪ್ಪ ಕಾಳಶೆಟ್ಟಿ, ಕಲ್ಲಪ್ಪ ರಂಜನಗಿ, ದೇವನಗೌಡ ಪಾಟೀಲ, ಪ್ರಕಾಶ ರಂಜನಗಿ, ಗೋಯಪ್ಪಾ ಡೊಂಬರ, ಶಿವನಗೌಡ ಬ ಪಾಟೀಲ ರಾಜು ಕುಕ್ಕಡಿ,ಪರಶು ಗೇಟಿನ, ಪ್ರಕಾಶ ಕಾಳಶೆಟ್ಟಿ, ಹಣಮಂತ ಕುಕ್ಕಡಿ, ಬಾಲು ಬೇಡರ,ದಾನಪ್ಪ ಹುಲಗಬಾಳಿ,ಶಿವನಗೌಡ ಶ ಪಾಟೀಲ ಹಾಗೂ ಹಳೇಯರಗುದ್ರಿ ಗ್ರಾಮದ ರೈತ ಬಾಂಧವರು ಯುವ ಮಿತ್ರರು ಉಪಸ್ಥಿತರಿದ್ದರು,

## ಪರೇಡ್ ವೇಳೆ ಹೃದಯಾಘಾತದಿಂದ ಗೃಹರಕ್ಷಕ ಮುಖ್ಯಸ್ಥ ಸಾವು



ರಬಕವಿ-ಬನಹಟ್ಟಿ,ಜ15: ದೈನಂದಿನವಾಗಿ ಬುಧವಾರ ಬೆಳಿಗ್ಗೆ ಗೃಹ ರಕ್ಷಕ ದಳದಿಂದ ನಡೆಯುತ್ತಿದ್ದ ಪರೇಡ್ ವೇಳೆ ಬನಹಟ್ಟಿ ಗೃಹರಕ್ಷಕ ದಳದ ಮುಖ್ಯಸ್ಥ ಈರಪ್ಪ ಪೂಜಾರಿ(49) ಹೃದಯಾಘಾತದಿಂದ ಸಾವನ್ನಪ್ಪಿದ ಘಟನೆ ನಡೆದಿದೆ.

ಆಗಿದ್ದೇನು: ಬೆಳಿಗ್ಗೆ 7 ಗಂಟೆಗೆ ನಗರದ ಎಸ್‌ಆರ್‌ಎ ಮೈದಾನದಲ್ಲಿ ನೂರಾರು ಗೃಹ ರಕ್ಷಕ ದಳದ ಸಿಬ್ಬಂದಿಗಳಿಗೆ ವಾರದ ಪರೇಡ್‌ನಂತೆ ಕವಾಯತು ನೀಡಿದ್ದಾರೆ. ನಂತರ ಚಹಾ ವಿರಾಮಕ್ಕೆ ತೆರಳಿದ ನಂತರ ಮುಖ್ಯಸ್ಥ ಈರಪ್ಪ ಪೂಜಾರಿಯವರಿಗೆ ಪಾರ್ಶವಾಯು ಆದಂತೆ ಕಂಡ ತಕ್ಷಣವೇ ಸ್ಥಳದಲ್ಲಿದ್ದ ಸಿಬ್ಬಂದಿಗಳು ಸಮೀಪದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಕೆಲ ಹೊತ್ತಿನ ನಂತರ ನೈಜ ಸ್ಥಿತಿಗೆ ಬಂದ ನಂತರ, ಸಾರಿಗೆ ಇಲಾಖೆಯಲ್ಲಿ ಚಾಲಕರೂ ಆಗಿದ್ದ ಕಾರಣ ಜಮಖಂಡಿಯ ಖಾಸಗಿ ಆಸ್ಪತ್ರೆಗೆ ದಾಖಲಾಗುವದಾಗಿ ತಾವೇ ಸ್ವತಃ ತಿಳಿಸಿದ್ದಾರೆ. ಅಲ್ಲಿಗೆ ತೆರಳಿದ ಕೆಲ ಹೊತ್ತಿನಲ್ಲಿಯೇ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆಂದು ತಿಳಿದು ಬಂದಿದೆ. ಇವರಿಗೆ ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಳಗವಿದೆ. ಗೌರವ: ಗೃಹ ರಕ್ಷಕ ದಳ ಹಾಗು ಸಾರಿಗೆ ಇಲಾಖೆ ಸಿಬ್ಬಂದಿಗಳು ಸಕಲ ಸರ್ಕಾರಿ ಮರ್ಯಾದೆಯೊಂದಿಗೆ ಅಂತಿಮ ದರ್ಶನದಲ್ಲಿ ಪಾಲ್ಗೊಂಡು ಅಂತ್ಯ ಸಂಸ್ಕಾರ ನಡೆಸಿದರು.

## ಕಾರಾದರೇನು? ರೈತನಿಗೆ ಅದು ಬಂಡಿಯಲ್ಲವೇನು?



ಮಹಾಲಿಂಗಪುರ: ಕುದುರೆ ಗಾಡಿ, ಎತ್ತಿನ ಬಂಡಿ ನಂಬಿಕೊಂಡು ಬದುಕಿನ ಬಂಡಿ ಎಳೆಯುವ ರೈತನಿಗೆ ಕಾರಾದರೇನು? ಅದು ಬಂಡಿಂ-ಯಲ್ಲವೇನು? ಎಂಬಂತೆ ಮುಧೋಳ-ನಿಪ್ಪಾಣಿ ಹೆದ್ದಾರಿಯಲ್ಲೊಂದು ಕಾರಿನಲ್ಲಿ ಮೇವು ಹೇರಿಕೊಂಡು ಹೋಗುವ ದೃಶ್ಯ ಗುರುವಾರ ಗಮನ ಸೆಳೆಯಿತು.

ಕಾರು ಐಷಾರಾಮಿ ವಾಹನ. ಅದರಲ್ಲಿ ಕುಳಿತುಕೊಳ್ಳುವವರು ಶುಭ್ರ ಬಟ್ಟೆ ತೊಟ್ಟು ಠಾಕು, ಠೀಕಾಗಿರಬೇಕು. ಬ್ಯಾಗ್ ಮತ್ತು ಸೂಟ್‌ಕೇಸ್‌ನಂಥ ಲಗ್ಗೇಜ್ ಮಾತ್ರ ಹೇರಬೇಕು ಎಂಬ ಅಘೋಷಿತ ನಿಯಮ ಎಲ್ಲೆಡೆ ಉಂಟು. ಆದರೆ ನಮ್ಮ ಅನ್ನದಾತನಿಗೆ ಆ ಗತ್ತು, ಗಾಂಭೀರ್ಯ ಯಾವುದೂ ಇರೋದಿಲ್ಲ. ಅವರ ದೃಷ್ಟಿಯಲ್ಲಿ ಅದೊಂದು ಯಂತ್ರದ ಬಂಡಿ ಮಾತ್ರ. ಅಂತಲೇ ಅವರು ಯಾವುದೇ ಮುಲಾಜಿಲ್ಲದೇ ಕಾರಿನಲ್ಲಿ ಮೇವು ಹೇರಿಕೊಂಡು ರಾಜನಂತೆ ಸಾಗುತ್ತಾರೆ.

ಈಗ ಎಲ್ಲೆಡೆ ಜಾತ್ರೆಗಳ ಹಂಗಾಮು ನಡೆದಿದೆ. ಸವದತ್ತಿ ಯಲ್ಲಮ್ಮ, ಬಾದಾಮಿ ಬನಶಂಕರಿ ಸೇರಿದಂತೆ ನಾನಾ ಜಾತ್ರೆಗಳಿಗೆ ಗ್ರಾಮೀಣ ಭಾಗದ ರೈತ ಪರಿವಾರದವರು ಎತ್ತಿನ ಬಂಡಿಗೆ ಸವಾರಿ ಕಟ್ಟಿಕೊಂಡು ವಾರಗಟ್ಟಲೇ ಜಾತ್ರೆಗೆ ತೆರಳುತ್ತಾರೆ. ಮನುಷ್ಯರಿಗಂತೂ ಊಟ, ಪ್ರಸಾದ ಸಿಕ್ಕೇ ಸಿಗುತ್ತದೆ. ಆದರೆ ಸವಾರಿ ಬಂಡಿ ಎಳೆದುಕೊಂಡು ಹೋದ ಎತ್ತುಗಳಿಗೆ ಮೇವು ಸಾಕಾಗುವುದಿಲ್ಲ. ಜಾತ್ರೆ ಇರುವ ಪ್ರದೇಶದ ಕಡೆ ಹೇರಳವಾದ ಮೇವು ಕೂಡ ಸಿಗುವುದಿಲ್ಲ.

ಆದ್ದರಿಂದ ಊರಿಂದಲೇ ದೂರದ ಜಾತ್ರೆಗೆ ತೆರಳಿದ ಎತ್ತುಗಳಿಗೆ ಕಾ-ರಿನಲ್ಲಿ ಕೆಲವೇ ಗಂಟೆಗಳಲ್ಲಿ ಮೇವು ಸಾಗಿಸುತ್ತಾರೆ.

ಕೆಲವರು ಎರಡೆರಡು ಕಡೆ ತೋಟ ನಿರ್ವಹಿಸುತ್ತಾರೆ. ಒಂದು ತೋಟದಲ್ಲಿ ಮೇವು ಸಿಗುತ್ತಿದ್ದರೆ, ಮತ್ತೊಂದು ತೋಟದಲ್ಲಿ ಸಾಕು ಜಾನುವಾರುಗಳಿರುತ್ತವೆ. ಆಗ ಈ ರೀತಿ ತಮ್ಮ ಹಳೇ ಕಾರಿನಲ್ಲೇ ಮೇವು ಸಾಗಿಸುವ ಮೂಲಕ ಜಾನುವಾರುಗಳನ್ನು ಜೋಪಾನ ಮಾಡುತ್ತಾರೆ.

ಸಾಮಾನ್ಯ ರೈತನ ದೃಷ್ಟಿಯಲ್ಲಿ ಕಾರು ಶೋಕಿಗೂ ಅಲ್ಲ, ಐಷಾರಾಮಿಯೂ ಅಲ್ಲ, ಅದೊಂದು ಸಾಗಣೆಯ ಯಂತ್ರ ಮಾತ್ರ ಎಂಬುದಕ್ಕೆ ಈ ದೃಶ್ಯವೇ ಸಾಕ್ಷಿ. ಒಟ್ಟಾರೆ ಗೂಡ್ಸ್ ವಾಹನದಲ್ಲಿ ಪ್ಯಾಸೆಂಜರ್ ಸಾಗುವುದು, ಪ್ಯಾಸೆಂಜರ್ ವಾಹನದಲ್ಲಿ ಗೂಡ್ಸ್ ಸಾಗಿಸುವುದು ಭಾರತದಲ್ಲಿ ಸರ್ವೇಸಾಮಾನ್ಯ ಅಲ್ಲವೇ?

******

## ಲೋಕಾಯುಕ್ತಜನ ಸಂಪರ್ಕ ಸಭೆ

ಬೆಳಗಾವಿ : ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಸವದತ್ತಿ ತಾಲ್ಲೂಕು ಪಂಚಾಯತಿ ಸಭಾ ಭವನದಲ್ಲಿ ಜನವರಿ 20 ರಂದು ಬೆಳಿಗ್ಗೆ 11 ಗಂಟೆಯಿಂದ 2 ಗಂಟೆಯವರೆಗೆ ಬೆಳಗಾವಿ ಲೋಕಾಯುಕ್ತ ಅಧಿಕಾರಿಗಳಿಂದ ಸವದತ್ತಿ ತಾಲೂಕಿನ ಎಲ್ಲ ತಾಲೂಕಾ ಮಟ್ಟದ ಅಧಿಕಾರಿಗಳ ಸಮಕ್ಷಮದಲ್ಲಿ ಲೋಕಾಯುಕ್ತ ಜನ ಸಂಪರ್ಕ ಸಭೆ ನಡೆಯಲಿದೆ.

ಸರ್ಕಾರಿ ಕಛೇರಿಯಲ್ಲಿಯ ಅಧಿಕಾರಿಗಳು ಸಾರ್ವಜನಿಕರ ಅಧಿಕೃತ ಕೆಲಸಗಳನ್ನು ಮಾಡಿಕೊಡುವಲ್ಲಿ ವಿಳಂಬ ನೀತಿ ಅನುಸರಿಸುತ್ತಿದ್ದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ದೂರು ಸಲ್ಲಿಸಿದಲ್ಲಿ, ಸ್ಥಳದಲ್ಲಿಯೇ ಅಧಿಕಾರಿಗಳಿಂದ ಪರಿಹರಿಸಿಕೊಳ್ಳಬಹುದು. ಅರ್ಜಿ ಸಲ್ಲಿಸಲು ಇಚ್ಛಿಸುವವರು ನಿಗದಿತ ನಮೂನೆಯ ಅರ್ಜಿಯೊಂದಿಗೆ ಹಾಜ-ರಿರಬೇಕು.ಸರ್ಕಾರಿ ಅಧಿಕಾರಿಗಳು ಕೆಲಸ ಮಾಡಿಕೊಡುವಲ್ಲಿ ಹಣಕ್ಕೆ ಬೇಡಿಕೆ ಇಟ್ಟಲ್ಲಿ/ಒತ್ತಾಯಿಸಿದಲ್ಲಿ ಅಥವಾ ಸರ್ಕಾರಿ ಅಧಿಕಾರಿಯ ಅಕ್ರಮ ಆಸ್ತಿ ಸಂಪಾದನೆ ಬಗ್ಗೆ ಮಾಹಿತಿ ಇದ್ದಲ್ಲಿ, ಲೋಕಾಯುಕ್ತ ಅಧಿಕಾ-ರಿಗಳೊಂದಿಗೆ ನೇರವಾಗಿ/ಗುಪ್ತವಾಗಿ ಮಾಹಿತಿ ನೀಡಿ, ಸದರಿ ಸಭೆಯ ಸದುಪಯೋಗ ಪಡಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿವ ಈ ಕಛೇರಿ ದೂರವಾಣಿ ಸಂಖ್ಯೆ 0831-2950756 ಮತ್ತು 0831-2421922 ಗೆ ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಖಾನಾಪೂರ-ಮಂತುರ್ಗಾ ರಸ್ತೆ ಮಾರ್ಗ ಬಂದ್: ಅಸೋಗಾ ಗ್ರಾಮದ ಮೂಲಕ ಪರ್ಯಾಯ ಮಾರ್ಗ

ಬೆಳಗಾವಿ, : ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲೂಕಿನ ಖಾನಾಪೂರ-ಮಂತುರ್ಗಾ ರೈಲ್ವೆ ಕ್ರಾಸಿಂಗ್ ಎಲ್.ಸಿ ಗೇಟ್ ನಂ 356 ಅಂಡರ್‌ಪಾಸ್ ನಿರ್ಮಾಣ ಪ್ರಗತಿಯಲ್ಲಿರುವ ಹಿನ್ನಲೆಯಲ್ಲಿ ಜನವರಿ 12 ರಿಂದ ಮಾರ್ಚ್ 22, 2025 ವರಗೆ ರಸ್ತೆ ಮಾರ್ಗ ಬಂದ್ ಮಾಡಲಾಗಿರುತ್ತದೆ ಎಂದು ಬೆಳಗಾವಿ ನೈಋತ್ಯ ರೈಲ್ವೆ ಕಿರಿಯ ಅಭಿಯಂತರರಾದ ರಾಕೇಶ್ ಕುಮಾರ್ ಓಜಾ ಅವರು ತಿಳಿಸಿದ್ದಾರೆ. ವಾಹನಗಳ ಸಂಚಾರಕ್ಕೆ ಸದರಿ ಮಾರ್ಗದ ಬದಲಾಗಿ ರುಮೇವಾಡಿ ಕ್ರಾಸ್ ಹತ್ತಿರ ಅಸೋಗಾ ಗ್ರಾಮ ಮುಖಾಂತರ ಪರ್ಯಾಯ ಮಾರ್ಗ ಕಲ್ಪಿಸಲಾಗಿರುತ್ತದೆ.

ಈ ಕುರಿತು ಸಾರ್ವಜನಿಕರ ಸುಗಮ ಸಂಚಾರಕ್ಕೆ ಯಾವುದೇ ತೊಂದರೆ ಉಂಟಾಗದಂತೆ ಪರ್ಯಾಯ ಮಾರ್ಗದ ವ್ಯವಸ್ಥೆಯನ್ನು ಕಲ್ಪಿಸಿ ಗೇಟ್ ಬಂದ್ ಮಾಡಲು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಆದೇಶಿಸಿ ಅನುಮತಿ ನೀಡಿರುತ್ತಾರೆ.

ಅದರಂತೆ ಸ್ಥಳೀಯ ಜನರಿಗೆ ಮತ್ತು ಖಾನಾಪೂರದಿಂದ ಹೆಮ್ಮಡಗಾ ಸಂಚರಿಸುವ ವಾಹನಗಳಿಗೆ ಅಸೋಗಾ ರಸ್ತೆಯ ಮೂಲಕ ಪರ್ಯಾಯ ಮಾರ್ಗ ಲಭ್ಯವಿವೆ ಎಂದು ಬೆಳಗಾವಿ ನೈಋತ್ಯ ರೈಲ್ವೆ ಕಿರಿಯ ಅಭಿಯಂತರರಾದ ರಾಕೇಶ್ ಕುಮಾರ್ ಓಜಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದಿ. 18 ರಂದು ಮಳಗಲಿಯಲ್ಲಿ ಡಾ.ಅಂಬೇಡ್ಕರ ಮೂರ್ತಿ ಅನಾವರಣ

ಬೈಲಹೊಂಗಲ-ಸಮೀಪದ ಮಳಗಲಿ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ ಸಂಘಟಣೆಯ ಆಶ್ರಯದಲ್ಲಿ ದಿ. 18 ರಂದು ಮಧ್ಯಾಹ್ನ 12-00 ಘಂಟೆಗೆ ಡಾ.ಬಿ.ಆರ್.ಅಂಬೇಡ್ಕರ ಅವರ ಮೂರ್ತಿ ಅನಾವರಣ ಸಮಾರಂಭವು ಜರುಗಲಿದೆ.

ಹಂಪಿಯ ಮಾತಂಗ ಪರ್ವತದ ಪೂರ್ಣಾನಂದ ಭಾರತಿ ಸ್ವಾಮೀಜಿ, ಮಳಗಲಿ ಶ್ರೀ ಸಿದ್ಧಾರೂಢ ಮಠದ ಕಲ್ಮೇಶ್ವರ ಅವಧೂತ ಮಹಾರಾಜ, ಸಿದ್ದಪರ್ವತದ ಲಗ್ಮೈಶ್ವರ ಅವಧೂತ ಸ್ವಾಮೀಜಿ, ಧಾರ್ಮಿಕ ದತ್ತಿ ಇಲಾಖೆಯ ನಿರ್ದೇಶಕ ಡಾ. ಮಹಾಂತೇಶ ಶಾಸ್ತ್ರೀ, ಮಳಗಲಿ ಚನ್ನಮಲ್ಲಯ್ಯ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಮಹಾಂತೇಶ ಕೌಜಲಗಿ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ, ಸವದತ್ತಿ ಶಾಸಕ ವಿಶ್ವಾಸ ವೈದ್ಯ, ಲೋಕಸಭಾ ಸದಸ್ಯ ಜಗದೀಶ ಶಟ್ಟರ, ವಿಧಾನ ಪರಿಷತ್ ಸದಸ್ಯರಾದ ಲಖನ್ ಜಾರಕಿಹೊಳಿ, ಚನ್ನರಾಜ ಹಟ್ಟಿಹೊಳಿ, ಮಾಜಿ ಶಾಸಕರಾದ ಡಾ.ವಿಶ್ವನಾಥ ಪಾಟೀಲ, ಜಗಧೀಶ ಮೆಟಗುಡ್ಡ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಉಪವಿಭಾಗಾಧಿಕಾರಿ ಪ್ರಭಾವತಿ ಫಕ್ಕಿರಪೂರ, ಸವದತ್ತಿ ತಹಶೀಲ್ದಾರ ಮಲ್ಲಿಕಾರ್ಜುನ ಹೆಗ್ಗನ್ನವರ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ರಾಮನಗೌಡ ಕನ್ನೋಳಿ, ಸಿಪಿಐ ಈರಯ್ಯ ಮಠಪತಿ, ಯರಗಟ್ಟಿ ಎಪಿಎಂಸಿ ಅಧ್ಯಕ್ಷ ನೀಲಕಂಠ ಸಿದ್ದಬಸನ್ನವರ, ಭಾರತ ವೈಭವ ದಿನಪತ್ರಿಕೆ ಸಂಪಾದಕ ಡಾ.ಪ್ರಶಾಂತರಾವ್ ಐಹೊಳೆ, ಬೈಲಹೊಂಗಲ ತಾಲೂಕಾ ಕಾರ್ಯನಿರತ ಪತ್ರಕರ್ತರ ಸಂಘದ ಶಾಖಾಧ್ಯಕ್ಷ ಮಹಾಂತೇಶ ತುರಮರಿ ಸೇರಿದಂತೆ ಅನೇಕ ಗಣ್ಯರು ಆಗಮಿಸಲಿದ್ದಾರೆಂದು ಸಂಘಟಣೆಯ ಸಂಸ್ಥಾಪಕ ರಮೇಶ ಹರಿಜನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಎಲ್‌ಪಿಜಿ-ಸಿಎನ್‌ಜಿ ಟ್ರಕ್ ಪಲ್ಟಿ: ತಪ್ಪಿದ ಭಾರಿ ಅನಾಹುತ



ರಬಕವಿ-ಬನಹಟ್ಟಿ,ಜ15: ಜಮಖಂಡಿ ಕಡೆಯಿಂದ ಮಹಾಲಿಂಗಪೂರಕ್ಕೆ ತೆರಳುತ್ತಿದ್ದ ಎಲ್‌ಪಿಜಿ-ಸಿಎನ್‌ಜಿ ಗ್ಯಾಸ್ ಲಾರಿಯು ಮಂಗಳವಾರ ರಾತ್ರಿ 8 ಗಂಟೆ ಸುಮಾರಿಗೆ ಬನಹಟ್ಟಿ ಸಮೀಪದ ಆಸಂಗಿ ಕ್ರಾಸ್ ಬಳಿ ತಿರುವಿನಲ್ಲಿ ಪಲ್ಟಿ ಹೊಡೆದ ಪರಿಣಾಮ ಮುಗುಚಿ ರಸ್ತೆ ಮೇಲೆ ಬಿದ್ದಿದೆ. ಗ್ಯಾಸ್ ತುಂಬಿದ್ದರೂ ಸೋರಿಕೆ ಅಥವಾ ಇತರೆ ಘಟನೆಗೆ ಅವಕಾಶವಾಗದೆ ಭಾರಿ ಅನಾಹುತ ತಪ್ಪಿದ ಕಾರಣ ಸುತ್ತಲಿನ ಕುಟುಂಬಗಳು ನಿಟ್ಟುಸಿರು ಬಿಡುವಲ್ಲಿ ಕಾರಣವಾಯಿತು.

ಸುತ್ತಲೂ ಹೊಲ-ಮನೆಗಳ ನಿವಾಸಿಗಳು ವಾಸವಾಗಿದ್ದ ಕಾರಣ ಯಾರೂ ಮನೆ ಬಿಟ್ಟು ಹೊರ ಬಾರದಂತೆ ಪೊಲೀಸರು ಸ್ಪಷ್ಟಪಡಿಸಿ ಸಿಎನ್‌ಜಿ-ಎಲ್‌ಪಿಜಿ ತುಂಬಿದ್ದ ಲಾರಿ ಟ್ಯಾಂಕರ್ ಖಾಲಿ ಮಾಡುವಲ್ಲಿ ಹರಸಾಹಸ ಪಟ್ಟ ಘಟನೆ ನಡೆದಿದೆ.

14 ಗಂಟೆ ರಸ್ತೆ ಬಂದ್: ಟ್ಯಾಂಕರ್‌ನಲ್ಲಿದ್ದ ಗ್ಯಾಸ್ ಖಾಲಿ ಮಾಡುವಲ್ಲಿ ತುಂಬಾ ಜಾಗರೂಕತೆ ವಹಿಸುವಲ್ಲಿ ಸ್ಥಳೀಯ ಪಿಎಸ್‌ಐ ಶಾಂತಾ ಹಳ್ಳಿ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿಗಳು ಇಡೀ ದಿನ ರಾತ್ರಿ ಸ್ಥಳದಲ್ಲಿಯೇ ಬಿಡಾರ ಹೂಡಿದ್ದಾರೆ.

ಸಂಪೂರ್ಣ ರಸ್ತೆ ಸಂಚಾರ ಬಂದ್ ಮಾಡಿ ಗ್ಯಾಸ್ ಖಾಲಿ ಮಾಡುವ ವಿಚಾರವಾಗಿ ತಜ್ಞರಿಂದ ಕಾರ್ಯ ನಡೆದಿದೆ. ನಂತರ ಕ್ರೇನ್ ಮೂಲಕ ಟ್ರಕ್‌ನ್ನು ರಸ್ತೆ ಬದಿ ಇರಿಸಲಾಯಿತು.

ಸಂಚಾರ ಅಸ್ತವ್ಯಸ್ತ: ಅತ್ಯಂತ ಜಾಗರೂಕತೆಯಿಂದ ಯಾರನ್ನೂ ಅಪಘಾತ ನಡೆದ ಸ್ಥಳದಲ್ಲಿ ಅನುಮತಿ ನೀಡದೆ ಸುಮಾರು 14 ಗಂಟೆಗಳ ಕಾಲ ಜಮಖಂಡಿ-ಕುಡಚಿ ರಾಜ್ಯ ಹೆದ್ದಾರಿ ಬಂದ್ ಮಾಡಿದ್ದ ಕಾರಣ ವಾಹನಗಳೆಲ್ಲವೂ ಸುತ್ತಲಿನ ಗ್ರಾಮೀಣ ರಸ್ತೆಗಳಿಂದ ಸಂಚರಿಸಿ ಒಂದು ದಿನ ಸಂಚಾರ ಅಸ್ತವ್ಯಸ್ಥವಾಗಲು ಕಾರಣವಾಯಿತು.

## ಗುರು ಎಂಬ ಸ್ಥಾನ ಅತ್ಯಂತ ಮಹತ್ವ ಪಡೆದಿದ್ದಾಗಿದೆ-ಅಸ್ಕಿ




ತಾಳಿಕೋಟೆ, ಅಜ್ಞಾನದ ಕತ್ತಲೆಯಿಂದ ಜ್ಞಾನದ ಬೆಳಕನ್ನು ತೋ-ರಿಸುವ ಶಿಕ್ಷಕ ಎಂಬ ಸ್ಥಾನ ಅತ್ಯಂತ ಪವಿತ್ರತೆ ಪಡೆದುಕೊಂಡಿದ್ದಾಗಿದೆ ಅಂತಹ ಶಿಕ್ಷಕ ಸೇವೆಯನ್ನು ಪೂರ್ಣಗೊಳಿಸಿ ವಯೋವೃತ್ತಿ ಹೊಂದಿದ ಕಡಕೋಳ ಹಾಗೂ ಅಸ್ಕಿ ಮತ್ತು ಸಜ್ಜನ ಶಿಕ್ಷಕರ ಸೇವೆ ಅನನ್ಯವಾಗಿದೆ ಎಂದು ಅಸ್ಕಿ ಫೌಂಡೇಶನ್ ಅಧ್ಯಕ್ಷ ಸಮಾಜ ಸೇವಕ ಸಿ.ಬಿ.ಅಸ್ಕಿ ಅವರು ಹೇಳಿದರು.

ತಾಲೂಕಿನ ಲಿಂಗದಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ ವಯೋ ನಿವೃತ್ತಿ ಹೊಂದಿದ ಎಸ್. ಆಯ್.ಕಡಕೋಳ, ಎಂ.ಎನ್.ಅಸ್ಕಿ, ಮತ್ತು ಎಸ್.ಟಿ.ಸಜ್ಜನ ಅವರ ಬಿಳ್ಕೊಡುಗೆ ಹಾಗೂ ಸನ್ಮಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತಿದ್ದ ಅವರು ನಿವೃತ್ತಿ ಹೊಂದಿದ ಎಸ್. ಆಯ್.ಕಡಕೋಳ ಮತ್ತು ಎಂ.ಎನ್. ಅಸ್ಕಿ ಅಲ್ಲದೇ ಬಿ.ಆರ್.ಪಾಟೀಲ ಸರ್ಕಾರಿ ಪ್ರೌಢ ಶಾಲೆಯ ದೈಹಿಕ ಶಿಕ್ಷಕ ಎಸ್.ಟಿ.ಸಜ್ಜನ ಅವರ ಸೇವಾ ಕಾರ್ಯ ಮೆಚ್ಚುವಂತಹದ್ದಾಗಿದೆ ನಿತ್ಯ ಮಕ್ಕಳಿಗೆ ಪಾಠ ಭೋದನೆಯ ಜೊತೆಗೆ ದೇಶ ಪ್ರೇಮ ಅಲ್ಲದೇ ನಮ್ಮ ದೇಶದ ಆಚ-ಾರ ವಿಚಾರದ ಜೊತೆಗೆ ಸಂಸ್ಕಾರವನ್ನು ತುಂಬುವಂತಹ ಕಾರ್ಯವನ್ನು ಮಾಡುತ್ತಾ ಬಂದಿದ್ದಾರೆ ಅವರ ನಿವೃತ್ತ ಜೀವನ ಮುಂದೆ ಸುಃಖಕರವಾಗುವದರ ಜೊತೆಗೆ ಅವರ ಸೇವಾ ಕಾರ್ಯ ಇನ್ನೂಳಿದ ಶಿಕ್ಷಕರಿಗೆ ಮಾದರಿಯಾಗಲಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಸ್.ಸಾವಳಗಿ ಅವರು ಮಾತನಾಡಿ ಎಲ್ಲ ಸೇವಾ ಕಾರ್ಯಗಳಲ್ಲಿಯೂ ಶಿಕ್ಷಕ ವೃತ್ತಿ ಎಂಬುದು ಪವಿತ್ರವಾದುದ್ದಾಗಿದೆ ದೇಶದ ಉತ್ತಮ ಪ್ರಜೆಯನ್ನು ನಿರ್ಮಾಣ ಮಾಡುವ ಹೊಣೆ ಶಿಕ್ಷಕರದ್ದಾಗಿರುತ್ತದೆ ಅಂತಹ ಸೇವೆ ಸಲ್ಲಿಸಿ ನಿವೃತ್ತರಾದ ಕಡಕೋಳ ಮತ್ತು ಅಸ್ಕಿ ಅಲ್ಲದೇ ಸಜ್ಜನ ಅವರ ಸೇವಾ ಕಾರ್ಯ ಉತ್ತಮವಾಗಿದ್ದು ಇನ್ನೂಳಿದ ಶಿಕ್ಷಕರಿಗೆ ಮಾದರಿಯ ಸೇವಾ ಕಾರ್ಯವನ್ನು ಸಲ್ಲಿಸಿದ್ದಾರೆಂದರು.

ಶಿಕ್ಷಕಿ ಶ್ರೀಮತಿ ಸುಮಂಗಲಾ ಕೊಳೂರ ಅವರು ಮಾತನಾಡಿದರು.

ಕಾರ್ಯಕ್ರಮದ ದಿವ್ಯ ಸಾನಿದ್ಯವನ್ನು ಸಂತೆಕಲ್ಲೂರ ಶ್ರೀ ಘನಮಠೇಶ್ವರ ಮಠದ ಶ್ರೀ ಗುರುಬಸವ ಮಹಾಸ್ವಾಮಿಗಳು, ವೇ.ಬಸಯ್ಯ ಮಹಾಸ್ವಾಮಿಗಳು ವಹಿಸಿದ್ದರು.

ಲಿಂಗದಳ್ಳಿ, ವನಹಳ್ಳಿ, ಹಂದ್ರಾಳ, ನಡಹಳ್ಳಿ, ಗ್ರಾಮಗಳ ಮುಖಂಡರು ಅಲ್ಲದೇ ತಾಲೂಕಿನ ವಿವಿಧ ಶಾಲೆಗಳಿಂದ ಆಗಮಿಸಿದ ಶಿಕ್ಷಕ ಬಂದುಗಳು ವಯೋ ನಿವೃತ್ತಿ ಹೊಂದಿದ ಶಿಕ್ಷಕರುಗಳ ದಂಪತಿಗಳಿಗೆ ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಎಸ್.ಡಿ. ಎಂ.ಸಿ.ಅಧ್ಯಕ್ಷ ರಮೇಶಗೌಡ ಪಾಟೀಲ, ಶಿಕ್ಷಣ ಸಂಯೋಜಕರಾದ ಶ್ರೀಮತಿ ಡಿ.ವಾಯ್.ಗುರಿಕಾರ, ಬಸವರಾಜ ಹಂಚಲಿ, ಮು.ಗು.ಆರ್.ಬಿ.ದೇಸಾಯಿ, ಪ್ರಧಾನ ಗುರುಗಳಾದ ಎಂ.ಜಿ.ಕನ್ನೂರ, ಮೊದಲಾದವರು ಇದ್ದರು.

ಶಿಕ್ಷಕ ವಿರೇಶ ಕಾದಳ್ಳಿ ಪ್ರಾಸ್ತಾವಿಕ ಮಾತನಾಡಿದರು. ಶಿಕ್ಷಕ ಕೆ.ಪಿ.ಬಿರಾದಾರ ಸ್ವಾಗತಿಸಿದರು. ಶಿಕ್ಷಕ ಮೂಲಿಮನಿ ನಿರೂಪಿಸಿದರು. ಶಿಕ್ಷಕಿ ಶ್ರೀಮತಿ ವಿದ್ಯಾ ಚವ್ಹಾಣ ವಂದಿಸಿದರು.

## ವಿವಿಧ ಇಲಾಖೆಗಳ ಗ್ರೂಪ್ ಬಿ ವೃಂದದ ಹುದ್ದೆಗಳ ಪರೀಕ್ಷೆ : ನಿಷೇಧಾಜ್ಞೆ

ಕಾರವಾರ, : ಜಿಲ್ಲೆಯಲ್ಲಿ ಜ19 ಮತ್ತು ಜ.25 ರಂದು ನಡೆಯುವ ಪ್ರಸಕ್ತ ಸಾಲಿನ ವಿವಿಧ ಇಲಾಖೆಗಳ ಗ್ರೂಪ್ ಬಿ ವೃಂದದ ಹುದ್ದೆಗಳಿಗೆ ಕನ್ನಡ ಭಾಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದೆ.

ಸದರಿ ಪರೀಕ್ಷೆಗಳನ್ನು ಪಾರದರ್ಶಕವಾಗಿ ಹಾಗೂ ಸುವ್ಯವಸ್ಥಿತವಾಗಿ ನಡೆಯಬೇಕಾಗಿರುವುದ-ರಿಂದ,

ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿಯ ಪ್ರದೇಶದಲ್ಲಿ ಯಾವುದೇ ತರಹದ ಅವ್ಯವಹಾರ ,ಕಾನೂನು ಬಾಹಿರ ಚಟುವಟಿಕೆಗಳು ಅಥವಾ ಶಾಂತತಾ ಭಂಗ ಆಗದಂತೆ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಸಭೆ ಸಮಾರಂಭಗಳನ್ನು ನಡೆಯುತ್ತಿದ್ದಲ್ಲಿ ಧ್ವನಿವರ್ಧಕಗಳನ್ನು ತಡೆಯುವ ನಿಟ್ಟಿನಲ್ಲಿ ಮುನ್ನಚ್ಚರಿಕೆ ಕ್ರಮವಾಗಿ ಪರೀಕ್ಷಾ ಸಮಯದಿಂದ ಪರೀಕ್ಷಾ ಅವಧಿ ಮುಗಿಯುವವರೆಗೆ ಭಾರತೀಯ ಸುರಕ್ಷಾ ಸಂಹಿತೆ ಕಾಯ್ದೆ 2023 ಕಲಂ 163 ರಂತೆ ಜಿಲ್ಲಾಧಿಕಾರಿ ಕೆ. ಲಕ್ಷಿ ?ಮೇಪ್ರಿಯಾ ನಿಷೇಧಾಜ್ಞೆಯನ್ನು ಹೊರಡಿಸಿರುತ್ತಾರೆ.

ಸದರಿ ಅವಧಿಯಲ್ಲಿ ಪರೀಕ್ಷಾ ಕೇಂದ್ರದ 200 ಮೀಟರ್ ವ್ಯಾಪ್ತಿಯಲ್ಲಿರುವ ಝೆರಾಕ್ಸ್ ಅಂಗಡಿ ಹಾಗೂ ಸೈಬರ್ ಕೆಫೆಗಳನ್ನು ಮುಚ್ಚುವಂತೆ ಮತ್ತು ಪರೀಕ್ಷಾ ಕೇಂದ್ರದಲ್ಲಿ ಅಭ್ಯರ್ಥಿಗಳು ಇಲೆಕ್ಟ್ರಾನಿಕ್ಸ್ ಅಂದರೆ, ಮೊಬೈಲ್ ಫೋನಗಳು, ಸ್ಮಾರ್ಟ್ ವಾಚ್, ವೈರ್ ಲೆಸ್/ ಬ್ಲೂಟೂತ್,

ಇಯರ್ ಹೆಡ್ ಫೋನ್ಗಳನ್ನು ತರಲು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

## ಚೆಂಡು ರಿಪೇರಿ



ಮಹಾಲಿಂಗಪುರ : ಕೆಎಲ್‌ಇ ಸಂಸ್ಥೆಯ ಎಸ್‌ಸಿಪಿ ಪ್ರೌಢಶಾಲೆಯ ದೈಹಿಕ ಶಿಕ್ಷಕ ವೈ.ಎಸ್.ಜಗದಾಳ ವಿದ್ಯಾರ್ಥಿಗಳಿಗೆ ಹಳೇ ಬಾಲ್ ರಿಪೇರಿ ಮಾಡುವ ಕಲೆ ಕಲಿಸುವ ಮೂಲಕ ಮಕ್ಕಳಲ್ಲಿ ಸ್ವಾವಲಂಬನೆ, ಮಿತವ್ಯಯದ ಕೌಶಲ್ಯ ಬೆಳೆಸಿದರು. ಮೂಲೆ ಸೇರಿದ್ದ ಬಾಲ್‌ಗಳ ಕವಚ ಹೊಲಿಸು ಒಳಗಡೆಯ ಟ್ಯೂಬ್‌ಗೆ ಪಂಕ್ಚರ್ ಹಾಕು ಗಾಳಿ ತುಂಬಿಸುವ ಮೂಲಕ ಆಟವಾಡಲು ಚೆಂಡುಗಳ ಕೊರತೆಯಾಗದಂತೆ ತಾವೇ ನಿಗಾ ವಹಿಸಿದರು.

## ವಿದ್ಯಾರ್ಥಿಗಳಿಂದ ಅರಿವು



ಮಹಾಲಿಂಗಪುರ: ಕೆಎಲ್‌ಇ ಸಂಸ್ಥೆಯ ಎಸ್‌ಸಿಪಿ ಪ್ರೌಢಶಾಲೆಯ ಸ್ಕೌಟ್ಸ್ ಮತ್ತು ಗೈಡ್ ವಿದ್ಯಾರ್ಥಿಗಳು ಬಸವೇಶ್ವರ ವೃತ್ತದ ಹೆದ್ದಾರಿಯಲ್ಲಿ ವಾಹನ ಸವಾರರಿಗೆ ತಾವೇ ತಯಾರಿಸಿದ ಗ್ರೀಟಿಂಗ್ಸ್ ನೀಡಿ, ಸಂಚಾರ ನಿಯಮಗಳನ್ನು ಪಾಲಿಸುತ್ತ ಸುರಕ್ಷತೆಯಿಂದ ವಾಹನ ಚಲಾಯಿಸುವಂತೆ ಮನವಿ ಮಾಡಿದರು. ಉಪಪ್ರಾಶುಪಾಲ ಬಿ.ಎನ್.ಅರಕೇರಿ, ಪೊಲೀಸ್ ಸಿಬ್ಬಂದಿ ವೈ.ವೈ.ಗಚ್ಚನ್ನವರ, ಸ್ಕೌಟ್ಸ್ ಮತ್ತು ಗೈಡ್ ಕ್ಯಾಪ್ಟನ್ ಸಪನಾ ಅನಿಗೋಳ, ಪ್ರತಿಮಾ ಪಡೇಸೂರ ಹಾಗೂ ವಿದ್ಯಾರ್ಥಿಗಳು ಇದ್ದರು.


**ಕರ್ನಾಟಕ ಸರ್ಕಾರ**
**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ರಾಯಬಾಗ ಉಪವಿಭಾಗ, ರಾಯಬಾಗ ಕೆ.ಇ.ಬಿ ಎದುರುಗಡೆ ರಾಯಬಾಗ-591317.**
Phone (Off.) 08331-200130 Email : acfraibagt@gmail.com

ಕ್ರ.ಸಂ.ಸಅಸಂ/ರಾಯಬಾಗ/ಉವಿಭಾ/ಟೆಂಡರ್/2024-25/95 ದಿನಾಂಕ.15-01-2025

**ಟೆಂಡರ್ ಪ್ರಕಟಣೆ : 2ನೇ ಕರೆ**
**(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ ಮಾತ್ರ)**

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ ಉಪ ವಿಭಾಗ, ರಾಯಬಾಗ ಸನ್ 2024-25 ನೇ ಸಾಲಿನಗೆ ರಾಯಬಾಗ ಉಪ ವಿಭಾಗ ವ್ಯಾಪ್ತಿಯ ವಿವಿಧ ವಲಯಗಳಲ್ಲಿ ಮುಂದುವರೆದ ಅರಣ್ಯೀಕರಣ ವಿವಿಧ ಕಾಮಗಾರಿಗಳಿಗೆ ನೊಂದಾಯಿತ ಸಂಸ್ಥೆಗಳಿಂದ ಇ-ಪ್ರೊಕ್ಯೂರಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ ಆಹ್ವಾನಿಸಲಾಗಿದೆ. ಟೆಂಡರ ಫಾರ್ಮಗಳನ್ನು ಹಾಗೂ ನಿಬಂಧನೆಗಳನ್ನೊಳಗೊಂಡ ಟೆಂಡರ ಪುಸ್ತಕವನ್ನು ದಿನಾಂಕ:16.01.2025 ರಿಂದ ಇ-ಪ್ರೊಕ್ಯೂರಮೆಂಟ್ ವೆಬ್‌ಸೈಟ್ www.kppp.karnataka.gov.inದಲ್ಲಿ ಪಡೆಯಬಹುದು. ಭರ್ತಿ ಮಾಡಿದಟೆಂಡರ ಫಾರ್ಮಗಳನ್ನು ದಿನಾಂಕ: 24.01.2025 ಮಧ್ಯಾಹ್ನ 3.00 ಗಂಟೆಯವರೆಗೆ ಇಪೋರ್ಟದಲ್ಲಿ ಅಪ್‌ಲೋಡ್ ಮಾಡಬಹುದು. ಸ್ವೀಕರಿಸಿದ ಟೆಂಡರನ ತಾಂತ್ರಿಕಬಿಡ್‌ನ್ನು ದಿನಾಂಕ:27.01.2025 ಮಧ್ಯಾಹ್ನ 3.15 ಗಂಟೆಗೆ ಮತ್ತು ಹಣಕಾಸು (ಪೈನಾನಸಿ) ಬಿಡ್‌ನ್ನು ದಿನಾಂಕ:28-01-2025 ಮಧ್ಯಾಹ್ನ 3.30 ಗಂಟೆಗೆ ಅಥವಾ ಸದರಿ ದಿನದಂದು ಸರಕಾರಿ ರಜೆ ಘೋಷಣೆಯಾದಲ್ಲಿ ಮುಂದಿನ ಸರಕಾರಿ ಕೆಲಸದ ದಿನದಂದು ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಕೆಲಸದ ದಿನಗಳಂದು ಪಡೆಯಬಹುದು.

ಸಹಿ/-ಸಹಾಯಕಅರಣ್ಯ ಸಂರಕ್ಷಣಾಧಿಕಾರಿ,
ರಾಯಬಾಗ ಉಪವಿಭಾಗ, ರಾಯಬಾಗ

DIPR/BGM/RO-NO-1473/KSMCA/2024-25


BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016
DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 06, Issue : 289 , Postal Reg No. PMG/KA/NK/BM/135/22-24 / POST AT Vantamury Colony Post Office